ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46


ಜುಲೈ 25 ಶುಕ್ರವಾರ 2025

₹4

ಸಂಪುಟ: 46 | ಸಂಚಿಕೆ: 99 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 25 ಶುಕ್ರವಾರ 2025


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 99 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾವು ಹೈಕೋರ್ಟ್ ಮಾಡಿದ ತಪ್ಪು ಮಾಡಲ್ಲ!

■ ಆರೋಪಿಗಳು ನಿರಪರಾಧಿ ಅನ್ನುವ ರೀತಿ ಹೈಕೋರ್ಟ್ ಬೇಲ್ ಕೊಟ್ಟಿದೆ ■ ದರ್ಶನ್ ಜಾಮೀನು ಆದೇಶ 10 ದಿನ ಕಾಯ್ದಿರಿಸಿದ ಸುಪ್ರೀಂಕೋರ್ಟ್

ನವದೆಹಲಿ, ಜು.24– ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್‌ಗೆ ರಾಜ್ಯ ಹೈಕೋರ್ಟ್ ನೀಡಿದ್ದ ಜಾಮೀನು ಆದೇಶ ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಇಂದು ಸುಪ್ರೀಂ ಕೋರ್ಟ್ ನ್ಯಾ. ಪಾರ್ದಿವಾಲಾ ನೇತೃತ್ವದ ದ್ವಿ–ಸದಸ್ಯ ಪೀಠ ಸುಮಾರು ಒಂದೂವರೆ ಗಂಟೆಗಳ ಕಾಲ ವಿಚಾರಣೆ ನಡೆಸಿ ಆದೇಶ ಕಾಯ್ದಿರಿಸಿತು. ಈ ವೇಳೆ ನಡೆದ ವಾದ–ಪ್ರತಿವಾದಗಳು ಗಮನ ಸೆಳೆದಿವೆ.





ದರ್ಶನ್

ಆರೋಪಿಗಳು ನಿರಪರಾಧಿ ಅನ್ನುವ ರೀತಿ ಹೈಕೋರ್ಟ್ ಬೇಲ್ ಕೊಟ್ಟಿದೆ. ನಿಮಗೂ ಕೂಡ ಈ ರೀತಿ ಅನ್ನಿಸುತ್ತಿಲ್ಲವೇ? ಎಲ್ಲಾ ಕೇಸ್‌ಗಳಲ್ಲೂ ಹೈಕೋರ್ಟ್ ಹೀಗೆ ಮಾಡುತ್ತಾ? ವಿಚಾರಣಾ ನ್ಯಾಯಾಲಯ ತಪ್ಪು ಮಾಡಿದ್ದರೆ ಅದು ತಪ್ಪಾಗಿದೆ ಅನ್ನಬಹುದು. ಹೈಕೋರ್ಟ್ ಹೀಗೆ ಮಾಡಿದರೆ ಹೇಗೆ? ನಾವು ಹೈಕೋರ್ಟ್ ಮಾಡಿದ ತಪ್ಪು ಮಾಡಲ್ಲ, ತರಾತುರಿಯಲ್ಲಿ ಆದೇಶ ಕೊಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ.

ದರ್ಶನ್ ಮತ್ತು ಪವಿತ್ರ ಗೌಡ ಪರ ವಕೀಲರ ವಾದ ಮಂಡನೆ ಇಂದು ಮುಗಿದಿದ್ದು, ಇತರ ಆರೋಪಿಗಳ ಪರ ವಕೀಲರು ಒಂದು ವಾರದೊಳಗೆ ಲಿಖಿತ ವಾದ ಮಂಡಿಸುವಂತೆ ತಿಳಿಸಿ ಆದೇಶ ಕಾಯ್ದಿರಿಸಿ, 10 ದಿನ ವಿಚಾರಣೆ ಮುಂದೂಡಲಾಗಿದೆ. ಸುದೀರ್ಘ ವಿಚಾರಣೆಯಲ್ಲಿ ■ 10ನೇ ಪುಟಕ್ಕೆ

ಅಭಿಮನ್ಯು ಟೀಂ ಆ.4ಕ್ಕೆ ಮೈಸೂರಿಗೆ

- ಮೊದಲ ತಂಡದಲ್ಲಿ 7 ಗಂಡಾನೆ, 2 ಹೆಣ್ಣಾನೆ
- ಆರು ವರ್ಷದ ನಂತರ ಸ್ಥಾನ ಗಿಟ್ಟಿಸಿಕೊಂಡ ಕಾವೇರಿ

ಮೈಸೂರು, ಜು.24(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಯಣಕ್ಕೆ ಸಮಯ ನಿಗದಿಯಾಗಿದ್ದು, ಆ.4 ರಂದು ಮೊದಲ ತಂಡದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳು ಮೈಸೂರಿಗೆ ಆಗಮಿಸಲಿವೆ.

ಬೆಂಗಳೂರಿನ ವಿಕಾಸಸೌಧದ ಅರಣ್ಯ ಸಚಿವರ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಗಜಪಡೆಯ ಮೊದಲ ತಂಡದ ಆನೆಗಳ ಪಟ್ಟಿಯನ್ನು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಆ.4ರಂದು ಹುಣಸೂರು ಬಳಿಯ ವೀರನಹೊಸಳ್ಳಿ ಗೇಟ್ ಬಳಿ ಗಜಪಯಣಕ್ಕೆ ಚಾಲನೆ ನೀಡಲಾಗುವುದು. 2025ನೇ ಸಾಲಿನ ದಸರಾ ಮಹೋತ್ಸವದಲ್ಲಿ 14 ಆನೆಗಳು ಪಾಲ್ಗೊಳ್ಳಲಿದ್ದು, ಅವುಗಳಲ್ಲಿ 9 ಆನೆಗಳು ಮೊದಲ ತಂಡದಲ್ಲಿ ಮೈಸೂರಿಗೆ ಬರಲಿವೆ. ಕಳೆದ ಐದು ವರ್ಷದಿಂದ(2020) ಜಂಬೂಸವಾರಿಯಲ್ಲಿ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯುಳ್ಳ ಚಿನ್ನದ ಅಂಬಾರಿ ಹೊರುತ್ತಿರುವ ಅಭಿಮನ್ಯು ಈ ಬಾರಿಯೂ ಗಜಪಡೆಯ ನಾಯಕನಾಗಿ ಹೆಜ್ಜೆ ಹಾಕಲಿದ್ದಾನೆ ಎಂದು ತಿಳಿಸಿದರು.

ನಾಗರಹೊಳೆಯ ಮತ್ತಿಗೋಡು ಶಿಬಿರದಲ್ಲಿರುವ 59 ವರ್ಷದ ಅಭಿಮನ್ಯು 300ಕ್ಕೂ ಹೆಚ್ಚು ಆನೆ ಸೆರೆ ಕಾರ್ಯಾಚರಣೆ ಹಾಗೂ 80ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾನೆ ಎಂದರು.

ಮೊದಲ ತಂಡದ ಆನೆಗಳಿವು: ಗಜಪಡೆ ನಾಯಕ ಅಭಿಮನ್ಯುವಿನೊಂದಿಗೆ ಮತ್ತಿಗೋಡು ಶಿಬಿರದ ಭೀಮ (25), ದುಬಾರೆ ಶಿಬಿರದ ಕಂಜನ್ (24), ಧನಂಜಯ (44) ಮತ್ತು ಪ್ರಶಾಂತ್ (53), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡಹರವೆ ಶಿಬಿರದ ಏಕಲವ್ಯ (40) ಸೇರಿದಂತೆ ■ 10ನೇ ಪುಟಕ್ಕೆ



ಅಭಿಮನ್ಯು

ಆ.7 ರಂದು ಅರಮನೆಗೆ ಗಜಪಡೆ ಪ್ರವೇಶ

ಸೆ.22ರಿಂದ ಅ.6ರವರೆಗೆ ಅರಮನೆಯಲ್ಲಿ ನವರಾತ್ರಿ ಪೂಜೆ

ಮೈಸೂರು, ಜು.24(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸುವ ಗಜಪಡೆ ಸ್ವಾಗತಕ್ಕೆ ಮೈಸೂರು ಅರಮನೆ ಮಂಡಳಿ ಸಜ್ಜಾಗಿದ್ದು, ಆ.7 ರಂದು ಮಧ್ಯಾಹ್ನ 12.06 ರಿಂದ 12.30ರೊಳಗೆ ಸಲ್ಲುವ ತುಲಾ ಲಗ್ನ(ಅಭಿಜಿನ್)ದಲ್ಲಿ ಮೈಸೂರು ಅರಮನೆಗೆ ಗಜಲಕ್ಷ್ಮಿಯರ ಪ್ರವೇಶವಾಗಲಿದೆ.

ವೀರನ ಹೊಸಹಳ್ಳಿ ಗ್ರಾಮದಿಂದ ಆ.4 ರಂದು ಮಧ್ಯಾಹ್ನ 12.34 ರಿಂದ 12.59ರೊಳಗೆ ಸಲ್ಲುವ ತುಲಾ ಲಗ್ನ(ಅಭಿಜಿನ್)ದಲ್ಲಿ ಪೂಜಾ ಕೈಂಕರ್ಯದೊಂದಿಗೆ ಮೈಸೂರಿನತ್ತ ಪ್ರಯಾಣ ಆರಂಭಿಸುವ ಗಜಪಡೆಗೆ ಸಾಂಸ್ಕೃತಿಕ ಕಲಾತಂಡಗಳನ್ನು ಒಳಗೊಂಡ ವಾದ್ಯಗೋಷ್ಠಿಯೊಂದಿಗೆ ಪೂರ್ಣಕುಂಭ ಸ್ವಾಗತ ನೀಡಲು ಅರಮನೆ ಮಂಡಳಿ ತಯಾರಿ ಮಾಡಿಕೊಂಡಿದೆ. ಅದೇ ರೀತಿ ದಸರಾ ಮಹೋತ್ಸವ ಸಂಪನ್ನಗೊಂಡ ಬಳಿಕ ಅಂದರೆ ಅ.10 ರಂದು ಬೆಳಗ್ಗೆ 11.52 ರಿಂದ ಮಧ್ಯಾಹ್ನ 12.20ರೊಳಗೆ ಸಲ್ಲುವ ಧನುರ್ ಲಗ್ನದಲ್ಲಿ ಗಜಪೂಜೆಯೊಂದಿಗೆ ಮೈಸೂರು ಅರಮನೆಯಿಂದ ವೀರನ ಹೊಸಹಳ್ಳಿಗೆ ಗಜಪಡೆ ಮರು ಪ್ರಯಾಣ ಬೆಳೆಸಲಿದೆ.

ನವರಾತ್ರಿ ಪೂಜಾ ಕೈಂಕರ್ಯ: ಸೆ22 ರಿಂದ ಅ.6 ರವರೆಗೆ ಮೈಸೂರು ಅರಮನೆ ಪಂಚಾಂಗ, ಒಂಟಿಕೊಪ್ಪಲ್ ಪಂಚಾಂಗ ಹಾಗೂ ಮೇಲುಕೋಟೆ ಪಂಚಾಂಗ ಆಧರಿಸಿ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿಗೆ ಶರನ್ನವರಾತ್ರಿಯ(ನವರಾತ್ರಿ) ಶ್ರೀ ವಿಶ್ವಾವಸು ನಾಮ ■ 10ನೇ ಪುಟಕ್ಕೆ

ಬಾಲ್ಯವಿವಾಹ ತಡೆಗೆ ಕಠಿಣ ಕ್ರಮ

ಶೀಘ್ರದಲ್ಲಿ ಕಾನೂನಿಗೆ ತಿದ್ದುಪಡಿ

ಬೆಂಗಳೂರು, ಜು.24(ಕೆಎಂಶಿ)– ಬಾಲ್ಯ ವಿವಾಹ ಅಷ್ಟೇ ಅಲ್ಲ, ಇದಕ್ಕೆ ಸಂಬಂಧಿಸಿದ ಕಾರ್ಯಕ್ರಮ ನಡೆಸಿದರೂ ಅಂತಹವರ ವಿರುದ್ಧ ಕಠಿಣ ಕ್ರಮ ಜರುಗಿಸುವ ಕಾನೂನನ್ನು ರಾಜ್ಯ ಸರ್ಕಾರ ತರಲಿದೆ.

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಬಾಲ್ಯ ವಿವಾಹ ತಡೆಗೆ ಕಾನೂನುಗಳಿದ್ದರೂ ಅವುಗಳನ್ನು ಉಲ್ಲಂಘಿಸಿ ಬಾಲ್ಯ ವಿವಾಹಗಳು ನಡೆಯುತ್ತಲೇ ಇವೆ ಎಂದರು.

ಬಾಲ್ಯ ವಿವಾಹ ಸಂಪೂರ್ಣ ನಿರ್ಮೂಲನೆಗೆ ಹಾಲಿ ಕಾಯಿದೆಗೆ ತಿದ್ದುಪಡಿ ತಂದು ಮುಂಬರುವ ಅಧಿವೇಶನದಲ್ಲಿ ವಿಧೇಯಕ ಮಂಡಿಸಿ, ಅನುಮೋದನೆ ಪಡೆಯಲು ಸಭೆ ತೀರ್ಮಾನಿಸಿದೆ ಎಂದರು.

ಸರ್ಕಾರಿ ಆಸ್ಪತ್ರೆಗಳಿಗೆ ಅವಶ್ಯವಿರುವ ಔಷಧ, ರಾಸಾಯನಿಕಗಳು ಹಾಗೂ ಮತ್ತಿತರ ಸಾಮಗ್ರಿ ಖರೀದಿಗೆ 880 ಕೋಟಿ



ರೂ. ಮಂಜೂರಿಗೆ ಸಂಪುಟ ಸಮ್ಮತಿಸಿದೆ.

ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ 148 ಕೋಟಿ ರೂ. ವೆಚ್ಚದಲ್ಲಿ 10 ಕೆರೆಗಳಿಗೆ ನೀರು ತುಂಬಿಸಲು ಸಮ್ಮತಿಸಿದೆ. ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿರುವ 46 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಮಾಡಲಾಗುವುದು. ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಸೂಳೆಕರೆಯ ಜೀರ್ಣೋದ್ಧಾರ ಕಾಮಗಾರಿಗೆ 34 ಕೋಟಿ ರೂ. ಹಾಗೂ ಅದರ ಉತ್ತರ ನಾಲೆಗಳ ಅಭಿವೃದ್ಧಿ ಕಾಮಗಾರಿಗೆ 47.75 ಕೋಟಿ ರೂ. ಬಿಡುಗಡೆ ಮಾಡಲಾಗುವುದು.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ ನಂಜಾಪುರ ಏತ ನೀರಾವರಿ ಯೋಜನೆಯ ಆಧುನೀಕರಣ ಕಾಮಗಾರಿಗೆ ಸಂಪುಟ 20 ಕೋಟಿ ರೂ. ಮಂಜೂರು ಮಾಡಿದೆ.

ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತ ದುರಂತ ಪ್ರಕರಣ

ಆರ್‌ಸಿಬಿ, ಕೆಎಸ್‌ಸಿಎ, ಡಿಎನ್‌ಎ ವಿರುದ್ಧ ಕ್ರಿಮಿನಲ್ ಕೇಸ್

- ಸಂಪುಟ ಸಭೆ ತೀರ್ಮಾನ
- ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆ

ಬೆಂಗಳೂರು, ಜು.24(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿದಂತೆ ಆರ್‌ಸಿಬಿ ತಂಡದ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಪೊಲೀಸ್ ಅಧಿಕಾರಿಗಳ ಮೇಲೆ ಇಲಾಖಾ ತನಿಖೆ ಕೈಗೊಳ್ಳಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಮಹತ್ವದ ತೀರ್ಮಾನ ಮಾಡಿದೆ.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಆರ್‌ಸಿಬಿ ಅಲ್ಲದೆ, ಡಿಎನ್‌ಎ ಹಾಗೂ ಕೆಎಸ್‌ಸಿಎ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದರು.

ಉಳಿದಂತೆ ಅಮಾನತು ಮಾಡಲ್ಪಟ್ಟಿರುವ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾ ನಂದ್, ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್, ಕೇಂದ್ರಿಯ ಡಿಸಿಪಿ ಶೇಖರ್, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆ ಎಸಿಪಿ ಬಾಲಕೃಷ್ಣ ಹಾಗೂ ಇನ್ಸ್‌ಪೆಕ್ಟರ್ ಗಿರೀಶ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಒಳಆಡಳಿತ ಇಲಾಖೆಗೆ ಸೂಚಿಸಲಾಗಿದೆ.



ಇಷ್ಟು ಅಧಿಕಾರಿಗಳ ವಿರುದ್ಧವೂ ಪ್ರತ್ಯೇಕ ತನಿಖೆ ನಡೆಸಿ ವರದಿ ನೀಡುವಂತೆ ಇಲಾಖೆಗೆ ಸಂಪುಟ ಸಭೆ ಸೂಚಿಸಿದೆ. ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಮೈಕೆಲ್ ಡಿ. ಕುನ್ಹಾ ನೀಡಿದ್ದ ವರದಿಯನ್ನು ಸಂಪುಟ ಅಂಗೀಕರಿಸಿರುವುದಲ್ಲದೆ, ಶಿಫಾರಸು ಅನುಷ್ಠಾನಕ್ಕೆ ನಿರ್ಧರಿಸಿದೆ. ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡಕ್ಕೆ ಜೂನ್ 4ರಂದು ಸನ್ಮಾನಿಸುವ ಸಮಾರಂಭ ಸಂದರ್ಭದಲ್ಲಿ ಕಾಲ್ತುಳಿತ ಉಂಟಾಗಿ ದುರಂತದಲ್ಲಿ 11 ಮಂದಿ ಸಾವಿಗೀಡಾಗಿ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು ಎಂದು ವರದಿಯಲ್ಲಿ ತಿಳಿಸಲಾಗಿದೆ. ಆರ್‌ಸಿಬಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಸಂಸ್ಥೆಗಳು ವಿಜಯೋತ್ಸವ ಆಚರಣೆ ಹೊಣೆ ಹೊತ್ತಿದ್ದವು. ಈ ಸಂಸ್ಥೆಗಳು ಸಮರ್ಪಕವಾಗಿ ಸಿದ್ಧತೆ ನಡೆಸದ ಕಾರಣ, ಕ್ರಿಕೆಟ್ ಅಭಿಮಾನಿಗಳ ನೂಕುನುಗ್ಗಲಿನಲ್ಲಿ ಕಾಲ್ತುಳಿತ ಸಂಭವಿಸಿತು. ಈ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ■ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ... ನಾಸ್ಟಾಕ್ಕೆ ಕಿಚಡಿ ಮಾಡ್ಲಾ ಅಥವಾ ಪಲಾವ್ ಮಾಡ್ಲಾ...!

ಗಂಡ : ನೀನು ಮೊದ್ಲು ಮಾಡು ಆಮೇಲೆ ಹೆಸರಿಟ್ಟರಾಯಿತು...!

ಮೈಸೂರು ಮಿತ್ರ

ಶುಕ್ರವಾರ, 25 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತಡವಾಗಿ ಸಿಕ್ಕ ಯಶಸ್ಸು ವ್ಯಕ್ತಿತ್ವ ರೂಪಿಸುತ್ತದೆ.
ತಕ್ಷಣಕ್ಕೆ ಸಿಕ್ಕ ಯಶಸ್ಸು ಅಹಂಕಾರ ಸೃಷ್ಟಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ.

ನಿಮ್ಮ ಪತ್ರಗಳು

ಜಿಎಸ್‌ಟಿ ಬಗ್ಗೆ ಸರಿಯಾದ ಮಾಹಿತಿ ನೀಡಲಿ

ಮಾನ್ಯರೆ,

ಅನೇಕ ಸಣ್ಣ ವ್ಯಾಪಾರಸ್ಥರಿಗೆ ತೆರಿಗೆ ಇಲಾಖೆಯಿಂದ ನೋಟಿಸ್ ಬಂದಿದೆ. ಯಾವುದೇ ಮುನ್ಸೂಚನೆ ಇಲ್ಲದೆ ಯುಪಿಐ ಮೂಲಕ ಆಗಿರುವ ವಹಿವಾಟು ಆದಾರದ ಮೇಲೆ ನೋಟಿಸ್ ಬಂದಿದಕ್ಕೆ ಸಣ್ಣ ವ್ಯಾಪಾರಸ್ಥರು ಸಹಜವಾಗಿಯೇ ಗಾಬರಿ ಆಗಿದ್ದಾರೆ. ಸಂಬಳ ತೆಗೆದುಕೊಳ್ಳುವವರು ಯಾವುದೂ ವಿನಾಯಿತಿ ಇಲ್ಲದೆ ಪೂರ್ತಿ ತೆರಿಗೆ ಕಟ್ಟುತ್ತಿದ್ದಾರೆ. ಅದೇ ರೀತಿ ಆದಾಯ ಬರುವ ಯಾವುದೇ ವಹಿವಾಟಿಗೆ ತೆರಿಗೆ ಕಟ್ಟುವುದು ನ್ಯಾಯವೇ ಆಗಿದೆ, ತಪ್ಪಲ್ಲ. ಆದರೆ ಈ ರೀತಿ ಏಕಾಏಕಿ ತೆರಿಗೆ ಕಟ್ಟುವಂತೆ ಆದೇಶ ನೀಡಿರುವುದರಿಂದ ಸಣ್ಣ ವ್ಯಾಪಾರಸ್ಥರು ಗಾಬರಿ ಆಗಿದ್ದಾರೆ ಹಾಗೂ ಯುಪಿಐ ವಹಿವಾಟಿನ ಮೇಲೆ ಇದು ನೇರ ಪರಿಣಾಮ ಬೀರುತ್ತದೆ. ಮತ್ತೆ ಎಲ್ಲರೂ ನಗದು ವಹಿವಾಟಿನ ಕಡೆ ಮೊರೆ ಹೋಗುತ್ತಾರೆ. ಇದರಿಂದ ಪ್ರಧಾನಿ ಮೋದಿ ಅವರ ಡಿಜಿಟಲ್ ಇಂಡಿಯಾ ಕನಸು ಪೂರ್ಣ ಸಾಕಾರವಾಗುವುದಿಲ್ಲ. ಅದು ನೆನೆಗುದಿಗೆ ಬೀಳುವ ಸಂಭವ ಇರುತ್ತದೆ.ಆದ್ದರಿಂದ ಸಂಭಂದಿಸಿದ ತೆರಿಗೆ ಇಲಾಖೆಯವರು ಸಣ್ಣ ವ್ಯಾಪಾರಸ್ಥರಿಗೆ ತೆರಿಗೆ ಬಗ್ಗೆ, ವಿನಾಯಿತಿ ಇರುವ ಉತ್ಪನ್ನಗಳ ಬಗ್ಗೆ ಸರಿಯಾದ ಮಾಹಿತಿ ಸಿಗುವಂತೆ ಮಾಡಬೇಕು.ಪತ್ರಿಕೆಗಳಲ್ಲೂ ಇದರ ಬಗ್ಗೆ ಸಮಗ್ರ ಮಾಹಿತಿ ನೀಡಬೇಕು.ಜನ ಜಾಗೃತಿಯ ಕೆಲಸ ಮಾಡಬೇಕಾಗಿದೆ.

ಸರ್ಕಾರ ಕೂಡ ಸಣ್ಣ ವ್ಯಾಪಾರಸ್ಥರ ವಹಿವಾಟಿನ ತೆರಿಗೆ ಮಿತಿ ಹೆಚ್ಚಿಸುವತ್ತ ಮತ್ತು ಕೆಲವು ದಿನಬಳಕೆ ಉತ್ಪನ್ನಗಳಿಗೆ ತೆರಿಗೆ ವಿನಾಯಿತಿ ನೀಡುವತ್ತ ನಿರ್ಧಾರ ತೆಗೆದುಕೊಳ್ಳಬೇಕು.ಸಂಪೂರ್ಣ ಯುಪಿಐ ಮೂಲಕ ವ್ಯಾಪಾರ ಮಾಡಿದವರಿಗೆ ವಿಶೇಷ ವಿನಾಯಿತಿ ನೀಡುವಂತಾಗಬೇಕು.ಹೀಗಾದಲ್ಲಿ ಮಾತ್ರ ನಗದು ವಹಿವಾಟು ಕಡಿಮೆ ಆಗಿ ಡಿಜಿಟಲ್ ಇಂಡಿಯಾದ ಕನಸು ನನಸಾಗಲು ಸಾಧ್ಯ.

– ರಾಘವೇಂದ್ರ ಜೋಯಿಸ್, ಮೈಸೂರು.

ಬಂಡೀಪುರ ಓಕೆ ಬಂಡೀಪುರ್ ಯಾಕೆ?

ಮಾನ್ಯರೇ,

ಇತ್ತೀಚೆಗೆ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯಕ್ಕೆ ನಾಲ್ಕನೇ ತರಗತಿ ಓದುತ್ತಿರುವ ನನ್ನ ಮಗಳು ವನ್ಯಳೊಂದಿಗೆ ಸಫಾರಿಗೆಂದು ಹೋಗಿದ್ದೆ. ಅಲ್ಲಿ ನಮ್ಮ ರಾಷ್ಟ್ರೀಯ ಪ್ರಾಣಿಯಾದ ಹುಲಿಯ ದರ್ಶನದೊಂದಿಗೆ ಕಾಡಾನೆಗಳ ಹಿಂಡು ಹಾಗೆ ನವಿಲು, ಜಿಂಕೆಗಳನ್ನು ಕಂಡು ಮನಸ್ಸು ಅರಣ್ಯದ ಸೊಬಗಿಗೆ ಮಂತ್ರ ಮುಗ್ಧವಾಗಿತ್ತು. ಆದರೆ ಅದೇಕೋ ಅಂದು ನನ್ನ ಮನಸ್ಸು ಆಕೆ ಪದೇ ಪದೆ ಹೇಳುತ್ತಿದ್ದ 'ಬಂಡೀಪುರ್' ಎಂಬ ಶಬ್ದವನ್ನೇ ಗಮನಿಸುತ್ತಿತ್ತು. ನಮ್ಮ ಬಂಡೀಪುರವನ್ನು ಬಂಡೀ 'ಪುರ್' ಎಂದೇಕೆ ಕರೆಯಬೇಕು ಎಂದೆನಿಸತೊಡಗಿತು. ಅಚ್ಚ ಕನ್ನಡದಲ್ಲಿ ಬಂಡೀಪುರ ಎಂದರೆ ಎಷ್ಟು ಚಂದವಲ್ಲವೇ? ಆದರೆ ನನ್ನ ಮಗಳು ಹಾಗೆ ಉಚ್ಚರಿಸಲು ಕಾರಣವೂ ಇತ್ತು. ಸಫಾರಿ ಕೇಂದ್ರದಲ್ಲಿ ಪ್ರವಾಸಿಗರ ಸೆಲ್ಫಿಗೆಂದೇ ನಿರ್ಮಿಸಿರುವ 'ಐ ಆಮ್ @ ಬಂಡೀಪುರ್' ಎಂಬ ಬೃಹತ್ ಆಂಗ್ಲ ಅಕ್ಷರಗಳು ನನ್ನ ಗಮನ ಸೆಳೆಯಿತು. ಹಲವು ಪ್ರವಾಸಿಗರು ಸಂತೋಷದಿಂದ ಅದರ ಮುಂದೆ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಇಲ್ಲಿ ಅದನ್ನು ಆಂಗ್ಲ ಅಕ್ಷರಗಳನ್ನು ಬಳಸಿ ನಿರ್ಮಿಸಿರುವುದಕ್ಕೆ ನನ್ನ ವಿರೋಧವಿಲ್ಲ. ಆದರೆ BANDIPUR ಬದಲು BANDIPURA ಎಂದು ಬದಲಿಸಿದರೆ ಉತ್ತಮವಲ್ಲವೇ? ಹಾಗೆ ಬಂಡೀಪುರದ ವೆಬ್ ಸೈಟ್‌ಗಳಲ್ಲೂ ಪುರ್ ಎಂಬ ಶಬ್ದದ ಬಳಕೆಯೇ ಆಗಿದ್ದು, ಇದನ್ನು ಬದಲಿಸಿಪುರ ಎಂದು ಮಾಡಿದರೆ ನಮ್ಮ ಕನ್ನಡದ ಹೆಸರಿಗೆ ಬೆಲೆ ಬಂದಂತಾಗುತ್ತದೆ. ಹಿಂದೆ ಇದ್ದ ಮೈಸೂರ್ ಈಗ ಮೈಸೂರು ಆದಂತೆ ಹಾಗೆ ಬ್ಯಾಂಗಲೋರ್ ಬೆಂಗಳೂರು ಆದಂತೆ, ಬಂಡೀಪುರ್ ಅನ್ನು ಬಂಡೀಪುರ ಎನ್ನುವ ಸುಂದರ ಕನ್ನಡ ಶಬ್ದದೊಂದಿಗೆ ಬದಲಿಸಬೇಕಾಗಿ ಅರಣ್ಯ ಇಲಾಖೆಯಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹಾಗೆ ಕನ್ನಡ ಹೋರಾಟಗಾರರೂ ಇದನ್ನು ಗಮನಿಸಬೇಕಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಸುಂದರ ಅರಣ್ಯದ ಹೆಸರಲ್ಲಿ ನಮ್ಮ ಕನ್ನಡದ ಸೊಗಡು ಹಾಗೂ ನಮ್ಮತನ ಇರಬೇಕೆಂಬುದಷ್ಟೇ ನನ್ನ ಆಶಯ.

–ಎಂ.ಎಸ್. ಗುರುರಾಜ್, ಮೈಸೂರು

ವಿಜಯ ಬ್ಯಾಂಕ್ ಸರ್ಕಲ್‌ಗೆ ಒರಟು ಕಲ್ಲು ಬಳಕೆ ಸುರಕ್ಷಿತವಲ್ಲ



ಮಾನ್ಯರೆ,

ಇದು, ಮೈಸೂರಿನ ಕುವೆಂಪುನಗರ ವಿಶ್ವಮಾನವ ಜೋಡಿ ರಸ್ತೆ ಮತ್ತು ನ್ಯೂ ಕಾಂತರಾಜ್ ಅರಸ್ ರಸ್ತೆಯ ಹಿಂದಿನ ವಿಜಯ ಬ್ಯಾಂಕ್ ಸರ್ಕಲ್ ಅನ್ನು 'ನಿಜಲಿಂಗಪ್ಪ ಸರ್ಕಲ್' ಎಂದು ನಾಮಕರಣ ಮಾಡಿ ಕಾಮಗಾರಿ ನಡೆಯುತ್ತಿದೆ. ಈ ಸರ್ಕಲ್‌ನ ಸುತ್ತಲೂ ಸುಮಾರು 20 ಅಡಿಗಳಷ್ಟು ಒರಟು ಕಲ್ಲುಗಳನ್ನು ಬಳಸಲಾಗಿದೆ. ಇದರಿಂದಾಗಿ ವಾಹನ ಸವಾರರು ಸರಾಗವಾಗಿ ವಾಹನ ಚಲಿಸಲು ಸಾಧ್ಯವಾಗದೇ ಆಗಾಗ್ಗೆ ಸಣ್ಣ – ಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ವಾಹನಗಳ ಟೈರ್‌ಗಳು ಸಹ ಹಾಳಾಗುತ್ತಿವೆ. ಜೊತೆಗೆ ಇಲ್ಲಿ ನಡೆಯುತ್ತಿರುವ ಕಾಮಗಾರಿ ಕೆಲಸ ಗುಣಮಟ್ಟದಿಂದ ಕೂಡಿಲ್ಲ. ಕಳಪೆ ಕಾಮಗಾರಿ ನಡೆಯುತ್ತಿದೆ. ಕೆಲವು ವರ್ಷಗಳ ಹಿಂದೆ, ಇದೇ ರಸ್ತೆಯ 'ಬೇಕ್ ಪಾಯಿಂಟ್' ಸರ್ಕಲ್‌ನ ಸುತ್ತಲೂ ಸುಮಾರು 20 ಅಡಿಗಳಷ್ಟು ಇದೇ ರೀತಿಯ ಒರಡು ಕಲ್ಲುಗಳನ್ನು ಬಳಸಲಾಗಿತ್ತು. ಇದು ಸುಗಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು ದೂರು ನೀಡಿದ ನಂತರ, ಈ ಸರ್ಕಲ್‌ನ ಸುತ್ತ 5 ಅಡಿಗಳಷ್ಟು ಮಾತ್ರ ಈ ಒರಡು ಕಲ್ಲುಗಳನ್ನು ಬಳಸಲಾಗಿದೆ. ನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಅಡುಗೆ ಮನೆ ಬದಿಗೆ ! ಸಂಸಾರ ಬೀದಿಗೆ!!

ಇತ್ತೀಚೆಗೆ ನಮ್ಮಲ್ಲಿ ಬೆಳೆಯುತ್ತಿರುವ ಬಾಯಿಚಪಲ ಹಾಗೂ ಸೋಮಾರಿತನದಿಂದಾಗಿ ನಮ್ಮ ಆರೋಗ್ಯದಲ್ಲಿ ಏರುಪೇರುಗಳಾಗುತ್ತಿವೆ. ಇದರ ಪರಿಣಾಮ ಮಕ್ಕಳಲ್ಲಿಯೂ ಬೊಜ್ಜುತನ ಕಂಡುಬರುತ್ತಿದೆ. ಯುವಕರು, ಹಿರಿಯರಲ್ಲಂತೂ ಜಾಸ್ತಿಯಾಗಿ ಕಂಡುಬರುತ್ತಿದೆ. ಮೊದಲು ಮಹಿಳೆಯರಿಗೆ ಬೊಜ್ಜಿನ ಸಮಸ್ಯೆ ಇರುತ್ತಿರಲಿಲ್ಲ. ಏಕೆಂದರೆ ಅವರು ಗೃಹಿಣಿಯಾದರೂ ಇಡೀ ದಿನ ಮನೆಯ ಕೆಲಸವನ್ನು ಮಾಡುತ್ತಿದ್ದರಿಂದ ಹಾಗೂ ಅಡುಗೆ ಅವರಿಗೆ ಬರುತ್ತಿದ್ದುದರಿಂದ ಹೊರಗಿನ ತಿಂಡಿ ತಿನ್ನಲು ಅವರು ಇಷ್ಟಪಡುತ್ತಿರಲಿಲ್ಲ. ಇದರಿಂದಾಗಿ ಅವರಲ್ಲಿ ಈ ಸಮಸ್ಯೆ ಕಂಡುಬರುತ್ತಿರಲಿಲ್ಲ. ಇಂದಿಗೂ ಗ್ರಾಮೀಣ ಮಹಿಳೆಯರಲ್ಲಿ ಕಂಡುಬರದ ಈ ಸಮಸ್ಯೆ ನಗರ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಬೊಜ್ಜುತನ್ನೊಡನೆ ಹಲವು ಖಾಯಿಲೆಗಳನ್ನು ಹೊತ್ತು ತರುತ್ತದೆ. ಇದರ ಪರಿಣಾಮ ಹೃದಯಾಘಾತ ಪ್ರಕರಣಗಳು ಹಾಗೂ ಇನ್ನಿತರೆ ಖಾಯಿಲೆಗಳು ಕಂಡುಬರುತ್ತಿವೆ. ಇಂದು ನಗರ ಪ್ರದೇಶದ ಹೆಣ್ಣು ಮಕ್ಕಳೂ ಬಾಯಿ ಚಪಲದಿಂದಾಗಿ ಬೇಡದ್ದನ್ನು ತಿಂದು ಖಾಯಿಲೆಗೆ ತುತ್ತಾಗುತ್ತಿದ್ದಾರೆ. ಅವರಿಗೇ ಅಡುಗೆ ಮಾಡಲು ಬರುತ್ತದೆಯಾದರೂ ಹೊರಗಿನ ತಿಂಡಿಯ ಚಪಲ ಅವರನ್ನೂ ದಾರಿ ತಪ್ಪಿಸುತ್ತಿದೆ.

ಈ ಹಿಂದೆ ಮಹಿಳೆಯರು ಪರಸ್ಪರ ಭೇಟಿಯಾದಾಗ ಏನು ತಿಂಡಿ, ಏನು ಊಟ ಎಂದು ಕೇಳುತ್ತಿದ್ದರು. ಕೇಳಿದವರು ಹೊಸ ರೀತಿಯ ತಿಂಡಿ, ಊಟದ ಬಗ್ಗೆ ಹೇಳಿದರೆ ಅದನ್ನು ಹೇಗೆ ಮಾಡುವುದು ಎಂದು ಕೇಳಿ ತಿಳಿದುಕೊಳ್ಳುತ್ತಿದ್ದರು. ಅದನ್ನು ಖಾತ್ರಿ ಪಡಿಸಿಕೊಳ್ಳಲು ಸಾಹಸ ಮಾಡಿ ತಮ್ಮ ಮನೆಯಲ್ಲೂ ಮಾಡುತ್ತಿದ್ದರು. ಈ ಹಿಂದೆ ಪತ್ರಿಕೆಗಳಲ್ಲೂ ಹೊಸ ರುಚಿ ಶೀರ್ಷಿಕೆಯಡಿಯಲ್ಲಿ ಹೊಸಹೊಸ ತಿಂಡಿಯನ್ನು ಮನೆಯಲ್ಲಿ ಮಾಡುವುದು ಹೇಗೆ ಎಂದು ತಿಳಿಸಲಾಗುತ್ತಿತ್ತು. ಕೆಲವೊಮ್ಮೆ ಮನೆಯವರು, ಮುಖ್ಯವಾಗಿ ಗಂಡಂದಿರು ಹೊಸ ರುಚಿಯ ತಿಂಡಿ ಎಂದಾಗ ಅದಕ್ಕೆ ನಾನೇ ಬಲಿಪಶು ಎಂದು ಹಾಸ್ಯ ಮಾಡುತ್ತಿದ್ದುದೂ ಇದೆ. ಒಂದೆರಡು ಸಲ ಮಾಡಿದ ನಂತರ ಅದರಲ್ಲಿ ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ತಿಳಿದು, ಅದನ್ನು ಸರಿಪಡಿಸಿಕೊಂಡು ಆ ತಿಂಡಿ ಮಾಡುವುದರಲ್ಲಿ ನಿಪುಣರಾಗುತ್ತಿದ್ದರು.

ಆದರೆ ಇಂದು ಆ ರೀತಿ ಕಷ್ಟಪಟ್ಟು (!) ತಿಂಡಿ ಮಾಡುವುದೇ ಬೇಡ. ಕೂತಲ್ಲೇ ಮೊಬೈಲ್‌ನಲ್ಲಿ ಆರ್ಡರ್ ಮಾಡಿದರೆ ಕೆಲವೇ ನಿಮಿಷದಲ್ಲಿ ಅದು ನಮ್ಮ ಮುಂದೆ ಹಾಜರಾಗುತ್ತದೆ. ಅದು ತಿನ್ನಲೂ ಸಹಾ ರುಚಿಯಾಗಿದ್ದು ಮುದ ನೀಡುತ್ತದೆ. ಹೀಗಿರುವಾಗ ಮನೆಯಲ್ಲಿ ಏಕೆ ತಿಂಡಿ, ಊಟ ತಯಾರಿಸಬೇಕು ಎಂಬ ಮನೋಭಾವ ಇಂದು ಜಾಸ್ತಿಯಾಗುತ್ತಿದೆ. ಮೊದಲನೆಯದಾಗಿ ಮನೆಯಲ್ಲಿ ಅಡುಗೆ ಮಾಡುವುದು ತುಸು ಶ್ರಮದಾಯಕ ಕೆಲಸವಾದರೂ ಅದರಲ್ಲಿ ಮನೆಯವರ ಆರೋಗ್ಯದ ಕಾಳಜಿ ಇರುತ್ತದೆ ಮತ್ತು ಈ ಶ್ರಮದಿಂದಾಗಿ ಮಹಿಳೆಯರಲ್ಲಿ ಹಾಗೂ ಮನೆಯವರಲ್ಲಿ ಮುಖ್ಯವಾಗಿ ಈ ಬೊಜ್ಜಿನ ಸಮಸ್ಯೆ ಕಂಡುಬರುತ್ತಿರಲಿಲ್ಲ.

ಇತ್ತೀಚೆಗೆ ಅಮೇರಿಕಾ ದೇಶದಲ್ಲಿ ನಡೆದ ಒಂದು ಸಂಶೋಧನಾ ವರದಿ, ಅದು ನಿಜವೋ ಅಲ್ಲವೋ ಎನ್ನುವುದಕ್ಕಿಂತ, ಅದರಲ್ಲಿನ ವಿಷಯಗಳು ಗಮನ ಸೆಳೆದವು. ಅದರಲ್ಲಿ ಮೇಲ್ಕಂಡ ವಿಷಯದ ಬಗ್ಗೆಯೇ ಸಾಕಷ್ಟು ವಿವರಗಳಿದ್ದವು. ಅಮೇರಿಕಾದಲ್ಲಿ ಅಡುಗೆ ಮನೆಯನ್ನು ಕಡೆಗಣಿಸಿದ್ದರಿಂದಾಗಿ ಆದ ತೊಂದರೆಗಳ ಬಗ್ಗೆ ತಿಳಿಸಲಾಗಿತ್ತು. 1980ರ ಸುಮಾರಿನಲ್ಲಿ ಒಬ್ಬ ಸುಪ್ರಸಿದ್ಧ ಆರ್ಥಿಕ ತಜ್ಞರೊಬ್ಬರು ಅಲ್ಲಿನ ಜನರಿಗೆ ಒಂದು ಎಚ್ಚರಿಕೆ ನೀಡಿದ್ದರು. ಮುಂದೆ ನಮ್ಮ ಅಡುಗೆ ಮನೆಯನ್ನು ನಾವು ಖಾಸಗಿ ಕಂಪನಿಗೆ ಬಿಟ್ಟುಕೊಟ್ಟರೆ ಹಾಗೂ ಸರ್ಕಾರವು ಹಿರಿಯರ, ಮಕ್ಕಳ ಬಗ್ಗೆ ಜವಾಬ್ದಾರಿ ತೆಗೆದುಕೊಂಡರೆ, ನಮ್ಮ ಕುಟುಂಬಗಳ ಪ್ರಾಮುಖ್ಯತೆ ಹಾಗೂ ಅವುಗಳ ಅಗತ್ಯತೆ ಕ್ರಮೇಣ ಹೋಗಿಬಿಡಬಹುದು ಎಂದು ಹೇಳಿದ್ದರು. ಈ ಮಾತನ್ನು ಕೆಲವರು ಮಾತ್ರ ಗಂಭೀರವಾಗಿ ಪರಿಗಣಿಸಿದರೂ, ಬಹುತೇಕರು ನಿರ್ಲಕ್ಷಿಸಿದರು.



> “ ಮನೆಯಲ್ಲಿ ತಯಾರಿಸಿದ ಆಹಾರ ಹೊರತುಪಡಿಸಿ ಹೊರಗಿನ ಆಹಾರ ಸೇವಿಸುವುದರಿಂದ ದೇಹದಲ್ಲಿ ಕೊಬ್ಬು ಹೆಚ್ಚಾಗ ತೊಡಗುತ್ತದೆ. ಅದು ಸಣ್ಣದಾದ ಅಥವಾ ದೊಡ್ಡ ಅನಾರೋಗ್ಯಕ್ಕೆ ದಾರಿಯಾಗುತ್ತದೆ. ಇದರಿಂದ ಔಷಧಿಗಾಗಿ ಖರ್ಚು ಮಾಡುವುದು ಹೆಚ್ಚಾಗ ತೊಡಗುತ್ತದೆ. ಹಣ ಖರ್ಚು ಮಾಡಿದರೂ ದೇಹವು ಮೊದಲಿನ ಚಟುವಟಿಕೆ ಕಳೆದುಕೊಳ್ಳುತ್ತಾ ಹೋಗುತ್ತದೆ.

ಮನೆಗಳಲ್ಲಿ ಅಡುಗೆ ಮಾಡುವುದು ಕ್ರಮೇಣ ಕಡಿಮೆಯಾಗುತ್ತಾ ಹೋಯಿತು. ಹೊರಗಡೆಯಿಂದ ಆಹಾರ ತರಿಸುವುದು ಹೆಚ್ಚಾಗತೊಡಗಿತು. ಇದರಿಂದ ಅಮೇರಿಕಾದ ಬಹಳಷ್ಟು ಕುಟುಂಬ ವ್ಯವಸ್ಥೆ ಹಾಳಾಗತೊಡಗಿದೆ. ಮನೆಯಲ್ಲಿ ಅಡುಗೆ ಮಾಡುವುದು ಎಂದರೆ ಕೇವಲ ಆಹಾರ ಪದಾರ್ಥ ತಯಾರಿಸುವುದು ಎಂದಲ್ಲ. ಅದು ಕುಟುಂಬವನ್ನು ಒಂದು ಮಾಡುವ ಕೆಲಸ, ಸಂಸಾರವನ್ನು ಬೆಸೆಯುವ ಕಾಯಕ. ಅಲ್ಲಿ ಕಾಳಜಿ, ಪ್ರೀತಿ, ಮಮತೆ ಇರುತ್ತದೆ. ಅಡುಗೆ ಮಾಡುವುದು ಒಂದು ಕಲೆ ಮಾತ್ರವಲ್ಲ, ಅದು ಕುಟುಂಬದ ಸಂಸ್ಕೃತಿ ಹಾಗೂ ಸಂತೃಪ್ತಿಯ ವಿಧಾನ ಎಂಬುದನ್ನು ಜನರು ಮರೆಯತೊಡಗಿದರು. ಇದರಿಂದಾಗಿ ಅಲ್ಲಿ ಮನೆಗಳಲ್ಲಿ ಅಡುಗೆ ಮನೆ ಕಡೆಗಣಿಸಲ್ಪಟ್ಟಿತು. ಮನೆ ಎಂದರೆ ಬೆಡ್‌ರೂಮು ಮಾತ್ರ ಎಂಬಂತೆ ಆಯಿತು. ಒಂದು ರೀತಿ ಮನೆಗಳೂ ಹಾಸ್ಟೆಲ್‌ನಂತೆ, ಹೋಟೆಲ್‌ಗಳಂತೆ ಕಂಡುಬರತೊಡಗಿದವು.

ಅಡುಗೆ ಮನೆಗಿಂತ ಬೆಡ್‌ರೂಮು ಮುಖ್ಯ ಎಂದಾದಾಗ, ಮನೆಯು ಹೋಟೆಲ್‌ನಂತೆ ಆದ ಪರಿಣಾಮ ಏನಾಯಿತು ಎಂಬುದು ಕುತೂಹಲದ ವಿಷಯ. ಮನೆಯಲ್ಲಿ ಅಡುಗೆ ಮನೆಗಳು ಮುಚ್ಚಲ್ಪಟ್ಟವು. 1971ರಲ್ಲಿ ಅಮೇರಿಕಾದಲ್ಲಿ ಶೇ.71ರಷ್ಟು ಮನೆಗಳಲ್ಲಿ ದಂಪತಿ ತಮ್ಮ ಮಕ್ಕಳೊಡನೆ ವಾಸವಿದ್ದರು. ಆದರೆ ಮುಂದಿನ 50 ವರ್ಷಗಳಲ್ಲಿ ಈ ಸಂಖ್ಯೆ ಶೇ.20ಕ್ಕೆ ಇಳಿಯಿತು. ಉಳಿದ ಸಂಸಾರದ ಜನರು ನರ್ಸಿಂಗ್ ಹೋಮುಗಳಲ್ಲಿ ಕಾಲ ಕಳೆಯುವಂತಾಯಿತು.

ಈಗಿನ ಸ್ಥಿತಿಯಲ್ಲಿ ಅಮೇರಿಕಾದಲ್ಲಿ ಶೇ.15ರಷ್ಟು ಮಹಿಳೆಯರು ಒಂಟಿ ಜೀವನ ನಡೆಸುತ್ತಿದ್ದಾರೆ. ಶೇ.12ರಷ್ಟು ಪುರುಷರು ಏಕಾಂಗಿ ಜೀವನ ನಡೆಸುತ್ತಿದ್ದಾರೆ. ಶೇ.19ರಷ್ಟು ಮನೆಗಳಲ್ಲಿ ಸಿಂಗಲ್ ಪೇರೆಂಟ್ (ಒಬ್ಬ ಪೋಷಕ) ಇದ್ದಾರೆ. ಕೇವಲ ಶೇ.9ರಷ್ಟು ಮನೆಗಳಲ್ಲಿ ಮಾತ್ರ ಗಂಡ ಹೆಂಡತಿ ಜೊತೆಯಾಗಿ ಜೀವನ ಮಾಡುತ್ತಿದ್ದಾರೆ. ಮತ್ತೊಂದು ಆಘಾತದ ವಿಷಯ ಎಂದರೆ ಶೇ.41ರಷ್ಟು ಮಕ್ಕಳು ಮದುವೆಯಾಗದ ತಾಯಿಗೆ ಜನಿಸಿದವರು. ಇದಲ್ಲದೆ ಮತ್ತಷ್ಟು ಗಂಭೀರ ಸಮಸ್ಯೆಗಳು ಉದ್ಭವಿಸಿದೆ. ಇಂದು ಅಲ್ಲಿ ಶೇ.50ರಷ್ಟು ಮದುವೆಗಳು ವಿವಾಹ ವಿಚ್ಛೇದನದಲ್ಲಿ ಅಂತ್ಯ ಕಾಣುತ್ತಿವೆ. ಶೇ.67ರಷ್ಟು ಎರಡನೇ ಮದುವೆ ಅಥವಾ ಮರುವಿವಾಹಗಳು ವಿಫಲವಾಗುತ್ತಿವೆ. ಶೇ.74ರಷ್ಟು ಮೂರನೇ ಮದುವೆ ಸಮಸ್ಯಾದಾಯಕವಾಗುತ್ತಿದೆ.

ಈ ಅಂಕಿ ಸಂಖ್ಯೆಗೂ ಅಡುಗೆ ಮನೆಗೂ ಸಂಬಂಧವಿದೆಯೇ ಎಂದು ವಿಶ್ಲೇಷಿಸಿದಾಗ ಹೌದು ಎಂಬ ಉತ್ತರ ದೊರಕುತ್ತಿದೆ. ಅಡುಗೆ ಮನೆಯಿಲ್ಲದೆ ಪರಿವಾರ ಜೀವನ ಇಲ್ಲವಾಗಿದೆ. ಇದು ಗಾಬರಿ ಹುಟ್ಟಿಸುವ ಸಂಗತಿ.

ನಮ್ಮ ದೇಶದಲ್ಲಿ ಈ ಸಮಸ್ಯೆ ಇದುವರೆಗೆ ಹೆಚ್ಚಾಗಿ ಕಂಡು ಬರುತ್ತಿಲ್ಲ. ಆದರೆ ಕಳೆದೊಂದು ದಶಕದಲ್ಲಿ ಇಂತಹ ಪ್ರವೃತ್ತಿ ನಮ್ಮಲ್ಲೂ ಕಂಡುಬರುತ್ತಿರುವುದು ಆತಂಕಕಾರಿ. ನಮ್ಮಲ್ಲಿಯೂ ಈಗ ಹೊರಗಿನಿಂದ ತಿಂಡಿ, ಊಟ ತರಿಸುವುದು, ಅಡುಗೆ ಮನೆಯನ್ನು ತಾತ್ಸಾರ ಮಾಡುತ್ತಿರುವುದು ಕಂಡುಬರುತ್ತಿದೆ. ಅದರಲ್ಲೂ ಪತಿ–ಪತ್ನಿ ಇಬ್ಬರೂ ಕೆಲಸ ಮಾಡುವಂತಹ ಕುಟುಂಬಗಳಲ್ಲಿ ಈ ಚಾಳಿ ಹೆಚ್ಚಾಗಿ ಕಂಡುಬರುತ್ತದೆ. ಕಂಪನಿಗಳಲ್ಲಿ ಕೆಲಸ ಮಾಡುವವರು ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನದ ಊಟವನ್ನು ಕಂಪನಿಯ ಕ್ಯಾಂಟೀನಿನಲ್ಲೇ ಮಾಡುತ್ತಾರೆ. ರಾತ್ರಿ ಮನೆಗೆ ಬಂದಾಗ ಸುಸ್ತಾಗಿದೆ ಎಂಬ ನೆಪ ಹೇಳಿ ಮತ್ತೆ ಹೊರಗಿನಿಂದ ಆಹಾರ ತರಿಸಿ ತಿನ್ನುತ್ತಾರೆ. ಇನ್ನು ಅನೇಕ ಮನೆಗಳಲ್ಲಿ ಭಾನುವಾರ ಬಂದರೆ ಹೊರಗೆ ಹೋಗಿ ತಿಂದು ಬರುವುದು ಅಭ್ಯಾಸವಾಗುತ್ತಿದೆ. ಈ ಪ್ರವೃತ್ತಿ ಮುಂದುವರೆದರೆ ನಮ್ಮಲ್ಲೂ ಅಮೇರಿಕಾದಂತೆ ಕುಟುಂಬ ವ್ಯವಸ್ಥೆ ಕ್ರಮೇಣ ದುರ್ಬಲವಾಗುತ್ತಾ ಹೋಗುತ್ತದೆ. ಅಲ್ಲದೇ ಕ್ರಮೇಣ ಆರೋಗ್ಯ ಸಮಸ್ಯೆಯೂ ಉಲ್ಬಣವಾಗುತ್ತಾ ಹೋಗುತ್ತದೆ.

ಮನೆಯಲ್ಲಿ ತಯಾರಿಸಿದ ಆಹಾರ ಹೊರತುಪಡಿಸಿ ಹೊರಗಿನ ಆಹಾರ ಸೇವಿಸುವುದರಿಂದ ದೇಹದಲ್ಲಿ ಕೊಬ್ಬು ಹೆಚ್ಚಾಗ ತೊಡಗುತ್ತದೆ. ಅದು ಸಣ್ಣದಾದ ಅಥವಾ ದೊಡ್ಡ ಅನಾರೋಗ್ಯಕ್ಕೆ ದಾರಿಯಾಗುತ್ತದೆ. ಇದರಿಂದ ವೈದ್ಯಕೀಯ ಖರ್ಚು ಹೆಚ್ಚಾಗ ತೊಡಗುತ್ತದೆ. ಹಣ ಖರ್ಚು ಮಾಡಿದರೂ ದೇಹ ಮೊದಲಿನ ಚಟುವಟಿಕೆ ಕಳೆದುಕೊಳ್ಳುತ್ತಾ ಹೋಗುತ್ತದೆ.

ಮನೆಯಲ್ಲಿನ ಅಡುಗೆ ಮನೆ ಬಲವಾದಂತೆ, ಅಲ್ಲಿ ತಯಾರಾದ ಆಹಾರವನ್ನು ಕುಟುಂಬದ ಎಲ್ಲರೂ ಒಟ್ಟಾಗಿ ಕೂತು ಸವಿದಾಗ ಅದು ಕುಟುಂಬ ವ್ಯವಸ್ಥೆಯನ್ನು ಬಲಪಡಿಸುತ್ತಾ ಹೋಗುತ್ತದೆ. ಇದರಿಂದ ಆರೋಗ್ಯ ಕಾಪಾಡಿಕೊಳ್ಳುವುದೂ ಅಲ್ಲದೇ ಅನಾವಶ್ಯಕವಾಗಿ ಔಷಧಿ ಸೇವಿಸುವುದು, ಅದರಿಂದ ದೇಹ ದುರ್ಬಲಗೊಳ್ಳುವುದು ಕಡಿಮೆಯಾಗುತ್ತದೆ.

ಈ ಹಿಂದೆ ನಮ್ಮಲ್ಲಿ ಹೇಳುತ್ತಿದ್ದುದು 'ನೀರು ಹಾಗೂ ಆಹಾರವನ್ನು ಮಾರಾಟ ಮಾಡಬಾರದು' ಎಂದು. ಆಹಾರ ಮಾರಾಟ ಮಾಡುವುದನ್ನು ಒಂದು ರೀತಿ ಅಪರಾಧ ಎಂದೇ ಪರಿಗಣಿಸಲಾಗುತ್ತಿತ್ತು. ಊರಲ್ಲಿ ಎಲ್ಲೋ ಕೆಲವು ಹೋಟೆಲ್ಲುಗಳು ಮಾತ್ರ ಕಂಡುಬರುತ್ತಿದ್ದವು. ಅದರಲ್ಲಿ ಮುಖ್ಯವಾಗಿ ಪ್ರವಾಸಿಗರು ತಿನ್ನುತ್ತಿದ್ದರು. ಮನೆಯಲ್ಲಿ ಆಹಾರ ತಯಾರಾದಾಗ ತಾಯಿಯ ಕಾಳಜಿ ಎಂದರೆ ಅದು ಬಿಸಿಯಿದ್ದಾಗಲೇ ಎಲ್ಲರೂ ಸೇವಿಸಲಿ ಎಂಬುದಾಗಿರುತ್ತದೆ. ಇದರಿಂದಾಗಿ ನಮಗೆ ಇಷ್ಟ ಬಂದಾಗ ತಿನ್ನುವ ಮನೋಭಾವ ಹೋಗುತ್ತದೆ ಹಾಗೂ ತಾನಾಗೇ ಆರೋಗ್ಯ ಸರಿಯಾಗಿರುತ್ತದೆ. ಈಗ ಹೊರಗಿನಿಂದ ತರಿಸುವ ಆಹಾರಕ್ಕೆ ಸಮಯವೇ ಇಲ್ಲ. ಬೇಕೆಂದಾಗ ತರಿಸಿ ತಿನ್ನುವ ಮನೋಭಾವ ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತಿದೆ. ಬೇಸರದ ಸಂಗತಿ ಎಂದರೆ ಈ ಎಲ್ಲಾ ಸಂಗತಿಗಳು ಗೊತ್ತಿರುವ ವಿದ್ಯಾವಂತರೇ ಈ ರೀತಿ ವರ್ತಿಸುತ್ತಿರುವುದು. ಅವರೇ ಮಾಡುವುದರಿಂದ ಅದು ಸರಿ ಇರಬೇಕು ಎಂದು ಇತರರೂ ಅವರನ್ನು ಅನುಸರಿಸುತ್ತಿರುವುದು ಸಹ ಆತಂಕಕಾರಿ ವಿಷಯ. ಈ ಮನೋಭಾವ ಬೆಳೆಯುತ್ತಾ ಹೋದರೆ ನಮ್ಮ ದೇಶದಲ್ಲೂ ಮುಂದೆ ಅಮೇರಿಕಾದಂತೆ ಕುಟುಂಬ ವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಕುಟುಂಬದ ಬಾಂಧವ್ಯ ಗಟ್ಟಿಗೊಳಿಸುವುದು ಅಡುಗೆ ಮನೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು.

ತಾಯ್ತನಕ್ಕೆ ಆಶಾಕಿರಣ ಐವಿಎಫ್

ಪ್ರತಿವರ್ಷ ಜುಲೈ 25 'ವಿಶ್ವ ಐವಿಎಫ್ ದಿನ'. ಇದು, 1978ರಲ್ಲಿ ವಿಶ್ವದ ಮೊದಲ ಐವಿಎಫ್ (ಇನ್ ವಿಟ್ರೊ ಫರ್ಟಿಲೈಸೇಷನ್, ಪ್ರಾಳ ಶಿಶು) ಮಗು ಲೂಯಿಸ್ ಬ್ರೌನ್ ಜನಿಸಿದ್ದರ ಸಂಕೇತವಾಗಿದೆ. ಈ ದಿನವು ವೈದ್ಯಕೀಯ ವಿಜ್ಞಾನದಲ್ಲಿನ ಮೈಲುಗಲ್ಲು ಮಾತ್ರವಲ್ಲ, ಸಂತಾನೋತ್ಪತ್ತಿ ತಂತ್ರಜ್ಞಾನದ (ಅಸ್ಸಿಸ್ಟಡ್ ರಿಪ್ರೊಡೆಕ್ಟೀವ್ ಟೆಕ್ನಾಲಜೀಸ್) ಮೂಲಕ ಮಕ್ಕಳನ್ನು ಹಡೆದ ಲಕ್ಷಾಂತರ ದಂಪತಿಯ ಸಂಭ್ರಮಾಚರಣೆಯೂ ಆಗಿದೆ.

ಮೇಲಾಗಿ ವಿಶ್ವ ಐವಿಎಫ್ ದಿನವು ಸಂತಾನೋತ್ಪತ್ತಿ ಔಷಧದಲ್ಲಿನ ಕ್ರಾಂತಿಯನ್ನು ಸಾರುತ್ತದೆ. ಸಹಜ ರೀತಿ ಗರ್ಭಧರಿಸಲಾಗದ ಅಸಂಖ್ಯಾತ ದಂಪತಿಗೆ ಐವಿಎಫ್ ಮಕ್ಕಳ ಹಡೆಯುವ ಅವಕಾಶ ಕಲ್ಪಿಸಿದೆ. ಐವಿಎಫ್ ದಿನವು ದಶಕಗಳ ಸಂಶೋಧನೆಯ ಮಹತ್ವದ ಸ್ಮರಣೆಯೂ ಆಗಿದೆ. 1978ರಿಂದ ಜಾಗತಿಕವಾಗಿ 10 ಮಿಲಿಯನ್‌ಗಿಂತಲೂ ಹೆಚ್ಚು ಶಿಶುಗಳು ಐವಿಎಫ್ ಮೂಲಕ ಜನಿಸಿವೆ. ವೈದ್ಯಕೀಯ ಹಾಗೂ ಆಧುನಿಕ ವಿಜ್ಞಾನದ ಪ್ರಗತಿಯ ಪವಾಡಕ್ಕೆ ಪ್ರತಿ ಐವಿಎಫ್ ಮಗು ಸಾಕ್ಷಿಯಾಗಿವೆ.

ಭಾರತದಲ್ಲಿ ಬಂಜೆತನ ಭಾರೀ ಸಮಸ್ಯೆ: ಭಾರತವು ಜಾಗತಿಕವಾಗಿ ಅತೀ ಹೆಚ್ಚು ಬಂಜೆತನ ಪ್ರಕರಣಗಳನ್ನು ಹೊಂದಿದೆ. ಪ್ರಸ್ತುತದ ಅಂದಾಜಿನ ಪ್ರಕಾರ ಭಾರತದಲ್ಲಿ 15ರಿಂದ 20 ಮಿಲಿಯನ್ ಬಂಜೆತನದ ದಂಪತಿ ಇದ್ದಾರೆ. ಆ ಮೂಲಕ ವಿಶ್ವದಲ್ಲೇ ಭಾರತ ಶೇ.25ರಷ್ಟು ಬಂಜೆತನ ಪ್ರಮಾಣವನ್ನು ಹೊಂದಿದೆ.

ಭಾರತೀಯ ಸಮಾಜದಲ್ಲಿ ಬಂಜೆತನ ಮತ್ತು ಫರ್ಟಿಲೈಸೇಷನ್ ಗರ್ಭಧಾರಣೆಯನ್ನು ಬಹುತೇಕರು ಇಂದಿಗೂ ಕಳಂಕವೆಂದೇ ಭಾವಿಸಿದ್ದಾರೆ. ಮದುವೆ ಮತ್ತು ಆ ಬಳಿಕ ಸಾಂಪ್ರದಾಯಿಕವಾಗಿ ಮಕ್ಕಳನ್ನು ಹಡೆಯುವುದಕ್ಕೆ ಭಾರತೀಯ ಸಮಾಜದಲ್ಲಿ ವಿಶೇಷ ಪ್ರಾಮುಖ್ಯತೆ ನೀಡಲಾಗಿದೆ. ಹಾಗಾಗಿ ಬಂಜೆತನದ ಬಗ್ಗೆ ನಮ್ಮಲ್ಲಿ ತಪ್ಪು ಭಾವನೆಯೇ ಹೆಚ್ಚು. ಸಂತಾನೋತ್ಪತ್ತಿ ಸಂಬಂಧ ಪ್ರಗತಿಗಳಾಗಿದ್ದರೂ, ಐವಿಎಫ್, ಐಯುಐ ಮತ್ತು ಐಸಿಎಸ್‌ಐನಂತಹ ಚಿಕಿತ್ಸೆಗಳು ಲಭ್ಯವಿದ್ದರೂ ಭಾರತೀಯ ಸಮಾಜದಲ್ಲಿ ಬಂಜೆತನ ಇನ್ನು ಭಾರೀ ಸಮಸ್ಯೆಯಾಗಿಯೇ ಪರಿಣಮಿಸಿದೆ.

ಭಾರತೀಯ ಸಂಸ್ಕೃತಿಯಲ್ಲಿ ಮಕ್ಕಳಿಲ್ಲದ ದಂಪತಿ ದಾಂಪತ್ಯ ಅಪೂರ್ಣವೆಂದೇ ಪರಿಗಣಿಸಲಾಗುತ್ತದೆ. ಮಗು ಹೆರುವುದು ಇಲ್ಲಿ ವೈಯಕ್ತಿಕ ವಿಚಾರವಾಗಿರದೆ ಸಾಮಾಜಿಕ ಕರ್ತವ್ಯವೆಂದು ಪರಿಗಣಿಸಲಾಗುತ್ತದೆ.



ಬಂಜೆತನಕ್ಕೆ ಪುರುಷರು ಮತ್ತು ಮಹಿಳೆಯರು ಇಬ್ಬರೂ ಸಮಾನ ಕಾರಣಕರ್ತರಾದರೂ ದೂರುವುದು ಮಾತ್ರ ಕೇವಲ ಮಹಿಳೆಯರನ್ನೇ! ಐವಿಎಫ್, ಐಯುಐ ಮತ್ತು ಅಂಡಾಣು, ವೀರ್ಯ ದಾನದಂತಹ ಚಿಕಿತ್ಸೆಗಳು ಭಾರತದಲ್ಲಿಯೂ ವ್ಯಾಪಕವಾಗಿ ಲಭ್ಯವಿದ್ದರೂ ಅನೇಕ ದಂಪತಿಗಳು ಇದರ ಪ್ರಯೋಜನ ಪಡೆಯುವಲ್ಲಿ ವಂಚಿತರಾಗುತ್ತಿದ್ದಾರೆ. ಹತ್ತಿರದ ಸಂಬಂಧಿಕರಿಗೂ ಹೇಳದೇ ಬಂಜೆತನವನ್ನು ರಹಸ್ಯವಾಗಿಟ್ಟು ಕೊಳ್ಳುವುದರಿಂದ ಅನೇಕ ದಂಪತಿ ಅವಶ್ಯ ಸೂಕ್ತ ಮಾರ್ಗದರ್ಶನದಿಂದಲೂ ವಂಚಿತರಾಗುತ್ತಿದ್ದಾರೆ. ಇದೊಂದು ಅಪ್ರಯೋಜನಕಾರಿ ಎಂಬ ಸ್ವನಿರ್ಧಾರದಿಂದಲೂ ಇಂತಹ ಆಧುನಿಕ ಚಿಕಿತ್ಸೆ ತಪ್ಪಿಸುವುದೂ ಇದೆ. ಆರ್ಥಿಕ ಹೊರೆ ಹಾಗೂ ಸಾಮಾಜಿಕ ಅವಮಾನ ಎಂಬ ತಪ್ಪು ತಿಳುವಳಿಕೆ ಕಾರಣಕ್ಕೂ ಅನೇಕರು ಈ ಸೌಲಭ್ಯ ಬಳಸಿಕೊಳ್ಳುವಲ್ಲಿ ವಂಚಿತರಾಗುವುದೂ ಉಂಟು.

ಇಂದು ವಿಶ್ವ ಐವಿಎಫ್ ದಿನ

ವೀರ್ಯಾಣು ತ್ವರಿತ ಕುಸಿತ: ಕಳೆದ 50 ವರ್ಷಗಳಲ್ಲಿ ವೀರ್ಯಾಣು ಸಂಖ್ಯೆಯಲ್ಲಿ ಶೇ.50ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. 2000 ಇಸವಿಯಿಂದೀಚೆಗೆ ಇದು ಸಾಕಷ್ಟು ವೇಗವಾಗಿ ಕುಸಿತವಾಗುತ್ತಿದೆ. ಪರಿಸರ ಮಾಲಿನ್ಯ, ಕಳಪೆ ಆಹಾರ ಸೇವನೆ, ಒತ್ತಡ ಮೊದಲಾದ ಅಂಶಗಳು ಇಂತಹ ಸನ್ನಿವೇಶಕ್ಕೆ ಕಾರಣವೆಂದು ಅಧ್ಯಯನ ವರದಿಗಳು ಹೇಳುತ್ತಿವೆ.

ಅತಿಯಾದ ಡಿಜಿಟಲ್ ಗೀಳು: ದೀರ್ಘಾವಧಿ ಲ್ಯಾಪ್‌ಟಾಪ್ ಅನ್ನು ತೊಡೆ ಮೇಲೆ ಇಟ್ಟುಕೊಳ್ಳುವ ಹಾಗೂ ಪ್ಯಾಂಟ್ ಜೇಬಿನಲ್ಲಿ ಮೊಬೈಲ್ ಫೋನ್ ಇಟ್ಟುಕೊಳ್ಳುವ ಅಭ್ಯಾಸ ಸಂತಾನೋತ್ಪತ್ತಿ ಹಾರ್ಮೋನ್‌ಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಲಿದೆ.

ದೇಹದಲ್ಲಿ ಮೈಕ್ರೋ ಪ್ಲಾಸ್ಟಿಕ್: 2023ರಲ್ಲಿ ಮಾನವನ ಹೊಕ್ಕಳಬಳ್ಳಿ ಹಾಗೂ ವೃಷಣಗಳಲ್ಲಿ ಮೈಕ್ರೋ ಪ್ಲಾಸ್ಟಿಕ್‌ಗಳು ಕಂಡುಬಂದವು. ಆಹಾರ ಪ್ಯಾಕೇಜಿಂಗ್, ಸೌಂದರ್ಯವರ್ಧಕಗಳು ಹಾಗೂ ಪ್ಲಾಸ್ಟಿಕ್‌ಗಳಲ್ಲಿರುವ ಬಿಪಿಎ, ಥಾಲೇಟ್ ಮತ್ತು ಪ್ಯಾರಾಬೆನ್‌ಗಳು ನೈಸರ್ಗಿಕ ಹಾರ್ಮೋನ್ ಕಾರ್ಯದ ಮೇಲೆ ಅಡ್ಡ ಪರಿಣಾಮ ಉಂಟು ಮಾಡಲಿವೆ.

> “ 'ಐವಿಎಫ್' ಪ್ರಭಾವಶಾಲಿ ವೈಜ್ಞಾನಿಕ ಅನ್ವೇಷಣೆ...
> ಐವಿಎಫ್ ಕೇವಲ ಔಷಧವನ್ನು ಬದಲಾಯಿಸಿಲ್ಲ, ಬದಲಿಗೆ ಇದು ಜೀವನ, ಕುಟುಂಬಗಳು ಹಾಗೂ ಭವಿಷ್ಯವನ್ನೇ ಬದಲಾಯಿಸಿದೆ. ಇದು 20ನೇ ಶತಮಾನದ ಅತ್ಯಂತ ಪ್ರಭಾವಶಾಲಿ ವೈಜ್ಞಾನಿಕ ಸಾಧನೆ–ಅನ್ವೇಷಣೆಯಲ್ಲಿ ಒಂದಾಗಿದೆ. ಇಷ್ಟು ಮಾತ್ರವಲ್ಲದೆ, ಇದು ವಿಕಸನಗೊಳ್ಳುತ್ತಲೇ ಸಾಗಿದೆ. ಜುಲೈ 25ರ ವಿಶ್ವ ಐವಿಎಫ್ ದಿನದ ಆಚರಣೆಯೆಂದರೆ, ಅದು ವಿಜ್ಞಾನ–ತಂತ್ರಜ್ಞಾನದಲ್ಲಿ ಶ್ರಮಿಸುತ್ತಿರುವ ತಜ್ಞರು ಹಾಗೂ ಅವರ ಮೂಲಕ ಜನ್ಮತಾಳಿದ ಜೀವಗಳಿಗೆ ಗೌರವ ಸಲ್ಲಿಸುವುದೇ ಆಗಿದೆ.

ಕೋವಿಡ್ 19ರ ಪರಿಣಾಮ: ವೀರ್ಯದ ಗುಣಮಟ್ಟದಲ್ಲಿ ಕುಸಿತ, ನಿಯಮಿತ ಋತುಚಕ್ರದಲ್ಲಿ ಏರುಪೇರು, ಹಾರ್ಮೋನ್‌ಗಳ ಅಸಮತೋಲನ, ಸಂತಾನೋತ್ಪತ್ತಿ ಅಂಗಗಳಲ್ಲಿ ಹೆಚ್ಚಿದ ಆಕ್ಸಿಡೇಟಿವ್ ಒತ್ತಡದ ಸಮಸ್ಯೆಗಳು ಕೋವಿಡ್ 19ರ ಕಾರಣಕ್ಕೂ ಉಂಟಾಗಿವೆ. ಹವಾಮಾನ ಬದಲಾವಣೆ ಪುರುಷರ ವೀರ್ಯ ಉತ್ಪಾದನೆ ಹಾಗೂ ಮಹಿಳೆಯರ ಹಾರ್ಮೋನ್ ಚಕ್ರಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಲಿದೆ.

ಜಂಕ್ ಫುಡ್: ಅತಿಯಾಗಿ ಸಂಸ್ಕರಿಸಿದ ಆಹಾರ ಪದಾರ್ಥಗಳ ಸೇವನೆಯು ವೀರ್ಯ ಗುಣಮಟ್ಟ ಕುಸಿಯಲು ಕಾರಣವಾಗಲಿದೆ. ದೇಹದಲ್ಲಿನ ಹೆಚ್ಚಿನ ಸಕ್ಕರೆ ಪ್ರಮಾಣವು ಸಂತಾನೋತ್ಪತ್ತಿ ಹಾಗೂ ಹಾರ್ಮೋನ್‌ಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಲಿವೆ.

ಮಾನಸಿಕ ಆರೋಗ್ಯದ ಸಮಸ್ಯೆ: ಆತಂಕ ಹಾಗೂ ಖಿನ್ನತೆಯಲ್ಲಿನ ಉಲ್ಬಣವು ಸಂತಾನೋತ್ಪತ್ತಿ ಸಾಮರ್ಥ್ಯಕ್ಕೆ ಸಂಬಂಧಿಸಿದ ಹಾರ್ಮೋನ್‌ಗಳ ಮೇಲೆ ಅಡ್ಡಪರಿಣಾಮ ಉಂಟು ಮಾಡುವುದು ಸಾಬೀತಾಗಿದೆ.

ಸ್ಟೀರಾಯ್ಡ್ ಬಳಕೆ: ಪ್ರೋಟಿನ್ ಪೌಡರ್, ಜೀಮ್ ಪೂರಕ ಆಹಾರ ಹಾಗೂ ಸ್ಟೀರಾಯ್ಡ್‌ಗಳ ಅತಿಯಾದ ಬಳಕೆಯು ನಿಧಾನವಾಗಿ ಪುರುಷರಲ್ಲಿ ಬಂಜೆತನ ಉಂಟು ಮಾಡಲಿದೆ. ಪರಿಸರದ ಮೇಲಿನ ಒತ್ತಡಗಳಿಂದ ವಂಶವಾಹಿ ಅಭಿವ್ಯಕ್ತಿಯಲ್ಲಿ ಬದಲಾವಣೆ ಉಂಟಾಗುತ್ತಿದ್ದು, ಇದು ಭವಿಷ್ಯದ ಪೀಳಿಗೆಯಲ್ಲಿ ಸಂತಾನೋತ್ಪತ್ತಿಯ ಸಾಮರ್ಥ್ಯದ ಮೇಲೆ ಅಡ್ಡ ಪರಿಣಾಮ ಉಂಟು ಮಾಡಲಿದೆ ಎಂದು ಹೊಸ ಸಂಶೋಧನೆಗಳ ವರದಿಗಳು ಹೇಳುತ್ತಿವೆ.



ಡಾ. ಸಿ. ವಿ. ಶಿಲ್ಪಾ
ಬಂಜೆತನ ಚಿಕಿತ್ಸಾ ತಜ್ಞರು

ಇಂತಹ ಸನ್ನಿವೇಶದಲ್ಲಿ ಮಾಡಬೇಕಿರುವುದೇನು?: ಸಂತಾನ ಸಾಮರ್ಥ್ಯದ ಸಂಬಂಧ ನಿಯಮಿತವಾಗಿ ತಪಾಸಣೆ ಮಾಡಿಕೊಳ್ಳುವುದು. ಅಲ್ಲದೆ, ಪ್ಲಾಸ್ಟಿಕ್‌ನಿಂದ ಕಟ್ಟಿದ ಹಾಗೂ ಅತಿಯಾದ ಸಂಸ್ಕರಿಸಿದ ಆಹಾರ ಸೇವನೆ ಮಿತಗೊಳಿಸಬೇಕು. ಒತ್ತಡಮುಕ್ತ ಜೀವನ ಶೈಲಿ ರೂಪಿಸಿಕೊಳ್ಳಬೇಕು. ಯಾವುದೇ ಪೂರಕ ಆಹಾರ ಉತ್ಪನ್ನಗಳನ್ನು ತೆಗೆದುಕೊಳ್ಳುವಾಗ ತಜ್ಞರ ಅಭಿಪ್ರಾಯ ಪಡೆಯಬೇಕಿದೆ.

ಕನಸು ನನಸು: ಐವಿಎಫ್‌ಗೂ ಮೊದಲು ಬಂಜೆತನದಿಂದ ಬಳಲುತ್ತಿರುವ ದಂಪತಿಗೆ ಸೀಮಿತ ಆಯ್ಕೆಗಳಿದ್ದವು. ಆದರೆ ಐವಿಎಫ್ ಜೈವಿಕ ಪೋಷಕರಾಗುವ ಅವಕಾಶ ಕಲ್ಪಿಸುವ ಮೂಲಕ ಶಾಶ್ವತ ಬದಲಾವಣೆ ತಂದಿದೆ. ಐವಿಎಫ್ ಕುಟುಂಬದ ವ್ಯಾಖ್ಯಾನ ವಿಸ್ತರಿಸಿದ್ದು, ಏಕ ಪೋಷಕರಾಗಲು ಅಧಿಕಾರ ನೀಡಿದೆ.

ಪುರುಷರ ತೀವ್ರ ಬಂಜೆತನ ನಿವಾರಣೆಗೆ ಇಂಟ್ರಾಸೈಟೋಪ್ಲಾಸ್ಮಿಕ್ ವೀರ್ಯ ಇಂಜೆಕ್ಷನ್ (ಐಸಿಎಸ್‌ಐ), ವಿಳಂಬ ಗರ್ಭಧಾರಣೆ ತಡೆಗಟ್ಟಲು ಭ್ರೂಣ ಘನೀಕರಣ, ಆನುವಂಶಿಕ ಅಸ್ವಸ್ಥತೆಗಳನ್ನು ತಡೆಗಟ್ಟಲು ಪ್ರೀಇಂಪ್ಲಾಂಟೇಷನ್ ಜೆನೆಟಿಕ್ ಪರೀಕ್ಷೆ (ಪಿಜಿಟಿ) ಹಾಗೂ ಕ್ಯಾನ್ಸರ್ ರೋಗಿಗಳಿಗಾಗಿ ಫಲವತ್ತತೆ ಸಂರಕ್ಷಣೆಯ ಸೌಲಭ್ಯಗಳನ್ನು ಐವಿಎಫ್ ಕಲ್ಪಿಸಿದೆ. ಐವಿಎಫ್ ಬಂಜೆತನ ಸಮಸ್ಯೆ ಮೇಲೆ ಬೆಳಕು ಚೆಲ್ಲುವ ಮೂಲಕ ಸಾರ್ವಜನಿಕ ಚರ್ಚೆಗೆ ಅನುವು ಮಾಡಿದೆ. ಬಂಜೆತನ ತೊಡೆದು ಹಾಕಲು ನೆರವಾಗುತ್ತಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕುಡುಕರ ತಾಣವಾಗುತ್ತಿದೆಯಾ ಚಾಮುಂಡಿಬೆಟ್ಟ!

●ಎರಡು ಟ್ರ್ಯಾಕ್ಟರ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯ, 7 ಚೀಲಗಳಷ್ಟು ಮದ್ಯದ ಬಾಟಲಿ ಸಂಗ್ರಹ ●ಯುವ ಬ್ರಿಗೇಡ್ ಸ್ವಯಂ ಸೇವಕರಿಂದ ಸೇವಾ ಕಾರ್ಯ



ಚಾಮುಂಡಿಬೆಟ್ಟದಲ್ಲಿ ಇತ್ತೀಚೆಗೆ ನಡೆದ ಸ್ವಚ್ಛತಾ ಶ್ರಮದಾನದಲ್ಲಿ ಯುವ ಬ್ರಿಗೇಡ್ ಸ್ವಯಂ ಸೇವಕರು ಪ್ಲಾಸ್ಟಿಕ್ ಮತ್ತು ಖಾಲಿ ಮದ್ಯದ ಬಾಟಲಿಗಳನ್ನು ಸಂಗ್ರಹಿಸಿರುವುದು

ಮೈಸೂರು,ಜು.24(ಬಿಸಿಟಿ/ಪಿಎಂ)– ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನ ಆವರಣದಲ್ಲಿ ಮದ್ಯಪಾನಿಗಳ ಹಾವಳಿ ಜೊತೆಗೆ ಅನೈರ್ಮಲ್ಯದ ವಾತಾವರಣ ಕಂಡುಬಂದಿತ್ತು. ಇದೀಗ ಚಾಮುಂಡಿ ಬೆಟ್ಟದಲ್ಲೂ ಕುಡುಕರ ತಾಣಗಳು ಕಂಡುಬಂದಿವೆ.

ಯುವ ಬ್ರಿಗೇಡ್ ಮೈಸೂರು ಘಟಕವು ಇತ್ತೀಚೆಗೆ ಚಾಮುಂಡಿ ಬೆಟ್ಟದಲ್ಲಿ ಬೃಹತ್ ಸ್ವಚ್ಛತಾ ಕಾರ್ಯ ನಡೆಸಿತು. ನೂರಾರು ಸ್ವಯಂ ಸೇವಕರು ಬೆಟ್ಟದಪಾದದಲ್ಲಿ ಸಮಾವೇಶಗೊಂಡು 1,008 ಮೆಟ್ಟಿಲುಗಳಲ್ಲಿ ಹರಡಿದ್ದ ಪ್ಲಾಸ್ಟಿಕ್ ಬಾಟಲಿ, ಹೊದಿಕೆ ಸೇರಿದಂತೆ ಇನ್ನಿತರ ತ್ಯಾಜ್ಯ ಸಂಗ್ರಹ ಮಾಡಿದರು.

ಸತತ ಆರು ಗಂಟೆಗಳ ಕಾಲ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ ಸ್ವಯಂ ಸೇವಕರು, ಮಧ್ಯಾಹ್ನದ ವೇಳೆಗೆ ಬೆಟ್ಟದ ತುದಿಯನ್ನು ತಲುಪಿದರು. ಆಘಾತಕಾರಿ ಸಂಗತಿಯೆಂದರೆ, ಪೊದೆಗಳ ನಡುವೆ, ರಸ್ತೆಬದಿಯಲ್ಲಿ, ವ್ಯೂ ಪಾಯಿಂಟ್ಸ್ ಬಳಿ ಹಾಗೂ ಪೊಲೀಸರು ಗಸ್ತು ತಿರುಗುವ ಸ್ಥಳಗಳಲ್ಲಿಯೂ ನೂರಾರು ಮದ್ಯದ ಬಾಟಲಿಗಳು ಕಂಡು ಬಂದವು. ಒಟ್ಟಾರೆಯಾಗಿ ಏಳು ಗೋಣಿ ಚೀಲಗಳಷ್ಟು ಮದ್ಯದ ಖಾಲಿ ಬಾಟಲಿಗಳನ್ನು ಸಂಗ್ರಹಿಸಲಾಯಿತು. ಅಲ್ಲದೆ, ಎರಡು ಟ್ರ್ಯಾಕ್ಟರ್‌ನಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸಲಾಯಿತು.

ಇದೇ ವೇಳೆ ಸ್ವಯಂ ಸೇವಕರು ಸ್ವಚ್ಛತೆ ಬಗ್ಗೆ ಜಾಗೃತಿ ಸಹ ಮೂಡಿಸಿದರು. ಭಕ್ತರು ಹಾಗೂ ಚಾರಣಿಗರಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಸದಂತೆ ಅರಿವು ಮೂಡಿಸಿದರು. ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ ವತಿಯಿಂದ ಈ ಸ್ವಚ್ಛತಾ ಶ್ರಮದಾನಕ್ಕೆ ಅಗತ್ಯ ಸಹಕಾರ ನೀಡಲಾಯಿತು. ಕಸದ ವಿಲೇವಾರಿಗೆ ಪಂಚಾಯಿತಿಯಿಂದ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು.




ಚಾಮುಂಡಿಬೆಟ್ಟದಲ್ಲಿ ಸಂಗ್ರಹಿಸಿದ ತ್ಯಾಜ್ಯವನ್ನು ಚೀಲಗಳಲ್ಲಿ ತುಂಬಿರುವುದು.

ಇದೇ ಸಂದರ್ಭದಲ್ಲಿ ಯುವ ಬ್ರಿಗೇಡ್ ರಾಜ್ಯ ಸಂಯೋಜಕ ಚಂದ್ರಶೇಖರ್, ಭಾರೀ ಪ್ರಮಾಣದ ತ್ಯಾಜ್ಯ ಕಂಡು ಕಳವಳ ವ್ಯಕ್ತಪಡಿಸಿದರು. ಪ್ಲಾಸ್ಟಿಕ್ ಬಾಟಲಿ ಸೇರಿದಂತೆ ಇನ್ನಿತರ ತ್ಯಾಜ್ಯ ಇರುವುದು ಸಾಮಾನ್ಯ ಸಂಗತಿ. ಆದರೆ ಇಂತಹ ಪವಿತ್ರ ಸ್ಥಳದಲ್ಲಿ ನೂರಾರು ಮದ್ಯದ ಬಾಟಲಿಗಳು ಕಂಡು ಬಂದಿದ್ದು ಮಾತ್ರ ಅತ್ಯಂತ ಬೇಸರದ ಸಂಗತಿ. ಮದ್ಯ ಸೇವಿಸಬೇಕಿದ್ದರೆ, ಅದಕ್ಕಾಗಿಯೇ ಇರುವ ಸ್ಥಳಗಳಿಗೆ ಹೋಗಲಿ. ಅದನ್ನು ಬಿಟ್ಟು ಇಂತಹ ಪವಿತ್ರ ಸ್ಥಳಗಳಿಗೆ ಬರುವುದನ್ನು ಸಹಿಸಲು ಸಾಧ್ಯವಿಲ್ಲ. ಇಲ್ಲಿ ಮದ್ಯಪಾನ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಯುವ ಬ್ರಿಗೇಡ್‌ನ ಮೈಸೂರು ವಿಭಾಗದ ಸಂಯೋಜಕ ಪ್ರಮೋದ್, ಜಿಲ್ಲಾ ಸಂಯೋಜಕ ನಿತಿನ್, ಸ್ವಯಂ ಸೇವಕರಾದ ಸಾಗರ್, ರಾಮನುಜ, ಪ್ರಶಾಂತ್, ಅಶ್ವಥ್, ಯೋಗೇಶ್, ಸೂರಿ, ಸ್ಕಂದ, ಪರೀಕ್ಷಿತ್, ಶಶಾಂಕ್, ಓಂ, ರಮೇಶ್, ನಾರಾಯಣ್, ಮಂಜುನಾಥ್, ನರಸಿಂಹಮೂರ್ತಿ, ಸುಹಾಸ್, ಸುಶ್ಮಿತಾ, ಸುರಭಿ, ರಚನಾ ಶಿವಕುಮಾರ್, ದರ್ಶಿನಿ, ಶಿಲ್ಪಾ ರವಿ ಸೇರಿದಂತೆ ಮತ್ತಿತರರು ಸಕ್ರಿಯವಾಗಿ ಭಾಗವಹಿಸಿದ್ದರು.

ಮೈಸೂರಲ್ಲಿ ವಿಜ್ಞಾನ ನಾಟಕೋತ್ಸವಕ್ಕೆ ಚಾಲನೆ

●ವಿಶಿಷ್ಟ ರೀತಿಯಲ್ಲಿ ನಾಟಕೋತ್ಸವ ಉದ್ಘಾಟಿಸಿದ ಖಭೌತ ವಿಜ್ಞಾನ ಸಂಸ್ಥೆ ನಿರ್ದೇಶಕಿ ಅನ್ನಪೂರ್ಣಿ ಸುಬ್ರಮಣ್ಯನ್ ●ಮೊದಲ ದಿನ ದ ಟ್ರಯಲ್ ಆಫ್ ಅಬ್ದುಸ್ ನಾಟಕ ಪ್ರದರ್ಶನ



ಭಾರತೀಯ ಖಭೌತ ವಿಜ್ಞಾನ ಸಂಸ್ಥೆ ನಿರ್ದೇಶಕಿ ಪ್ರೊ. ಅನ್ನಪೂರ್ಣಿ ಸುಬ್ರಮಣ್ಯನ್ ವಯೋಲಿನ್ ವಾದನದ ಮೂಲಕ ನಾಟಕೋತ್ಸವಕ್ಕೆ ಚಾಲನೆ ನೀಡಿದರು.

ಮೈಸೂರು, ಜು.24(ವಿವಿಹೆಚ್)–ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಸ್ಟ್ರೋಫಿಸಿಕ್ಸ್ ಮತ್ತು ಎಸ್‌ವಿವೈಎಂ ಸಹಯೋಗದೊಂದಿಗೆ ಆಯೋಜಿಸಲಾಗಿರುವ 8ನೇ ಮೈಸೂರು ವಿಜ್ಞಾನ ನಾಟಕೋತ್ಸವಕ್ಕೆ ಭಾರತೀಯ ಖಭೌತ ವಿಜ್ಞಾನ ಸಂಸ್ಥೆ ನಿರ್ದೇಶಕಿ ಪ್ರೊ. ಅನ್ನಪೂರ್ಣಿ ಸುಬ್ರಮಣ್ಯನ್ ಅವರು ವಯೋಲಿನ್ ವಾದನದ ಮೂಲಕ ಚಾಲನೆ ನೀಡಿದರು.

ತಮ್ಮ ವಯೋಲಿನ್ ವಾದನದಲ್ಲಿ ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಅವರ ಅಟಾನ ರಾಗದ 'ಶ್ರೀ ಮಹಾಗಣಪತಿಂ ಭಜೇಹಂ' ಕೃತಿ, ಸರಸ್ವತಿ ರಾಗದ ಜಿ.ಎನ್.ಬಾಲಸುಬ್ರಹ್ಮಣ್ಯಂ ಅವರ 'ಸರಸ್ವತಿ' ಕೃತಿ, ವ್ಯಾಸರಾಯರ 'ಕೃಷ್ಣ ನೀ ಬೇಗನೆ ಬಾರೋ' ಕೃತಿಯನ್ನು ವಯೋಲಿನ್ ವಾದನದಲ್ಲಿ ನುಡಿಸಿದರು. ಇವರಿಗೆ ತಬಲ ವಾದನಕಾರ ಸ್ಕಂದ ಸಾಥ್ ನೀಡಿದರು.

ಬಳಿಕ ಮಾತನಾಡಿದ ಅವರು, ವಿಜ್ಞಾನ ಮತ್ತು ಕಲೆ ಪ್ರತ್ಯೇಕ ಎಂಬ ಶತಮಾನಗಳ ನಂಬಿಕೆಯನ್ನು ಬದಿಗಿಟ್ಟು ಅವುಗಳಲ್ಲಿ ಏಕತೆಯನ್ನು ಬಿಂಬಿಸುವ ಉದ್ದೇಶದಿಂದ ಆಯೋಜಿಸಲಾಗಿರುವ ವಿಜ್ಞಾನ ನಾಟಕೋತ್ಸವದಲ್ಲಿ ಭಾಗವಹಿಸಿರುವುದು ನಿಜಕ್ಕೂ ಹೆಮ್ಮೆಯ ಸಂಗತಿಯಾಗಿದೆ. ವಿಜ್ಞಾನ ಸಂವಹನ ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕಿದೆ. ಖಗೋಳ ವಿಜ್ಞಾನವು ಜನರ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದೆ. ಇವುಗಳ ಬಗ್ಗೆ ಅರಿವು ಮೂಡಿಸಲು ಕಲೆ ಒಂದು ಉತ್ತಮ ಸಾಧನವಾಗಿದೆ ಎಂದು ತಿಳಿಸಿದರು.

ಮೈಸೂರಿನಲ್ಲಿ ಅತ್ಯಾಧುನಿಕ ತಾರಾಲಯ ನಿರ್ಮಾಣವಾಗುತ್ತಿದೆ. ಈ ತಾರಾಲಯವು ಭಾರತದ ಮೊದಲ ಡಿಜಿಸ್ಟಾರ್ 7 ಸಿಸ್ಟಂ ಮತ್ತು ಡೊಮೆಕ್ಸ್ ಸ್ಕ್ರೀನ್ ಅನ್ನು ಹೊಂದಿರುತ್ತದೆ. ಇದು ಯುವ ಸಮೂಹಕ್ಕೆ ಖಗೋಳಶಾಸ್ತ್ರದ ಬಗ್ಗೆ ತರಬೇತಿ ನೀಡುತ್ತದೆ ಎಂದರು.

ವಿಜ್ಞಾನ ಸಂವಹನಕಾರ ನಿಲಾಂಜನ್ ಚೌಧರಿ ಮಾತನಾಡಿ, ಯುವ ಪೀಳಿಗೆ ರಂಗಭೂಮಿಯತ್ತ ಹೆಚ್ಚಿನ ಸಂಖ್ಯೆಯಲ್ಲಿ ಮುಖ ಮಾಡಬೇಕು. ರಂಗಭೂಮಿ ಮಾನಸಿಕ ಸ್ಥಿಮಿತತೆ ಮತ್ತು ಪರಿಪೂರ್ಣ ವ್ಯಕ್ತಿತ್ವ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳನ್ನು ಯಾಂತ್ರಿಕ ಬದುಕಿನಿಂದ ದೂರ ಉಳಿಸುವ ಮೂಲಕ ಮೂಲ ಸಂಸ್ಕೃತಿ, ವಿಜ್ಞಾನ ವಸ್ತು ವಿಷಯಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು. ಯುವ ಪೀಳಿಗೆ ಕೇವಲ ಮನರಂಜನಾ ವಿಷಯಗಳು, ಸೋಮಾರಿತನಕ್ಕೆ ಮಾರು ಹೋಗುತ್ತಿದ್ದಾರೆ. ಈ ಎಲ್ಲಾ ಪಿಡುಗುಗಳನ್ನು ಮೆಟ್ಟಿನಿಲ್ಲಲು ಮಕ್ಕಳು ರಂಗಭೂಮಿ ಕಡೆಗೆ ವಾಲಬೇಕು ಎಂದು ಸಲಹೆ ನೀಡಿದರು.

ಗಣಿತ ಕುಣಿತ ಚಟುವಟಿಕೆ ಮತ್ತು ಗಣಿತ ಕಲಿಕಾ ಮಾಹಿತಿಪೂರ್ಣ ತಾಂತ್ರಿಕ ಸ್ಫೂರ್ತಿ ಸಂವಹನ ಕಾರ್ಯಕ್ರಮವನ್ನು ವಿ.ಎಸ್.ಕೃಷ್ಣಮೂರ್ತಿ ನಡೆಸಿಕೊಟ್ಟರು.

ಬಳಿಕ ನಿಲಾಂಜನ್ ಚೌಧರಿ ನಿರ್ದೇಶನ ಮಾಡಿ, ರಿದ್ಧಿ ತಂಡದವರಿಂದ ವಿದ್ಯುತ್‌ಕಾಂತೀಯ ಹಾಗೂ ದುರ್ಬಲ ಬೀಜೀಯ ಬಲಗಳ ಏಕೀಕರಣ ವಿಷಯಕ್ಕೆ ನೋಬೆಲ್ ಪ್ರಶಸ್ತಿ ಪಡೆದ ಡಾ. ಅಬ್ದುಸ್ ಸಲಾಂ ಅವರ ಬಗೆಗಿನ 'ದ ಟ್ರಯಲ್ ಆಫ್ ಅಬ್ದುಸ್ ಸಲಾಮ್' ನಾಟಕವನ್ನು ಪ್ರದರ್ಶಿಸಲಾಯಿತು.

8ನೇ ಮೈಸೂರು ವಿಜ್ಞಾನ ನಾಟಕೋತ್ಸವ ಜು.14 ರಿಂದ 27 ವರೆಗೆ ನಡೆಯಲಿದ್ದು, ವಿಜ್ಞಾನಕ್ಕೆ ಸಂಬಂಧಿಸಿದ ನಾಟಕಗಳನ್ನು ಪ್ರದರ್ಶನ ಮಾಡಲಾಗುತ್ತದೆ. ಜು.25 ರಂದು ರಷ್ಯನ್ ವಿಜ್ಞಾನಿ ನಿಕೊಲಾಯ್ ವ್ಯಾವಿಲಾವ್ ಅವರ ಜೀವನಾಧಾರಿತ ನಾಟಕ 'ಹಸಿವು', ಜು.26 ರಂದು ಭಾರತದ ಮೊದಲ ನೊಬೆಲ್ ಪ್ರಶಸ್ತಿ ವಿಜೇತ ಸರ್ ಸಿ.ವಿ ರಾಮನ್ ಅವರ ಕುರಿತ 'ರಾಮನ್: ಬೆಳಕು, ಶಬ್ಧ, ಸಿಡಲು', ಜು.27 ರಂದು ಅಣ್ವಿಕ ಜೀವವಿಜ್ಞಾನಿ, ಕ್ವಿಜ್ ಮಾಸ್ಟರ್ ಆದ ಮೈಸೂರಿನ ಡಾ.ಬರ್ಟಿ ಆಶ್ಲೆ ಅವರು 'ವಿಜ್ಞಾನದಲ್ಲಿ ಆಕಸ್ಮಿಕಗಳು–ಒಂದು ಕ್ವಿಜ್' ಕಾರ್ಯಕ್ರಮಗಳು ನಡೆಯಲಿವೆ.

ಮೈಸೂರು ವಿವಿ ಜಾಗದಲ್ಲಿ ಕಾಸ್ಮೋಸ್ ಕೇಂದ್ರವನ್ನು ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆಯು ನಿರ್ಮಿಸುತ್ತಿದ್ದು, ಇದು ವಿಶ್ವದ ಮೊದಲ ಬಾಗಿದ(ಓರೆಯಾಕಾರದ) ಗುಮ್ಮಟ ತಾರಾಲಯವಾಗಿದೆ. ಕಾಸ್ಮೋಸ್ ಕೇಂದ್ರವು ಶಿಕ್ಷಣ ಮತ್ತು ತರಬೇತಿಗಾಗಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಕೇಂದ್ರವಾಗಿ ಕಾರ್ಯನಿರ್ವಹಿಸಲಿದ್ದು, ಜೊತೆಗೆ ಖಗೋಳಶಾಸ್ತ್ರದ ಬಗ್ಗೆ ಸಾರ್ವಜನಿಕ ಸಂಪರ್ಕ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲಿದೆ.
-ಅನ್ನಪೂರ್ಣಿ ಸುಬ್ರಮಣ್ಯನ್.
ಭಾರತೀಯ ಖಭೌತ ವಿಜ್ಞಾನ ಸಂಸ್ಥೆ ನಿರ್ದೇಶಕಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ. ಮೈಸೂರು ತಾಲ್ಲೂಕು, ವರುಣ ಹೋಬಳಿ, ವರುಣ ಗ್ರಾಮದಲ್ಲಿ ವಾಸವಾಗಿರುವ ಶ್ರೀ ವಿ.ಎಸ್. ದೊಡ್ಡಬಸವರಾಜುರವರ ಮಗನಾದ ಸುಮಾರು 51 ವರ್ಷ ವಯಸ್ಸಿನ ಶ್ರೀ ವರುಣ ಮಹೇಶ್ ಹಾಗೂ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ನಗುವಿನಹಳ್ಳಿ ಅಂಚೆ ಮತ್ತು ಗ್ರಾಮದಲ್ಲಿ ವಾಸವಾಗಿರುವ ರಾಮಯ್ಯರವರ ಮಗನಾದ ಸುಮಾರು 48 ವರ್ಷ ವಯಸ್ಸಿನ ಶ್ರೀ ಯೋಗೇಶ್ ರಾಮಯ್ಯ ರವರುಗಳ ಇರಾದೆಯ ಮೇರೆಗೆ ಪ್ರಕಟಿಸುತ್ತಿರುವ ಈ ಸಾರ್ವಜನಿಕ ಪ್ರಕಟಣೆಯ ಕ್ರಮವೇನೆಂದರೆ, ಆದಾಗಿ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಎಲ್.ವಿ. ಚನ್ನವೀರಾಚಾರ್ ರವರ ಮಗನಾದ ಸುಮಾರು 68 ವರ್ಷ ವಯಸ್ಸಿನ ಶ್ರೀ ಪುರುಷೋತ್ತಮ್ ಎಲ್.ಸಿ., ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಈ ಬಗ್ಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರೂ ಹಕ್ಕು, ಅಧಿಕಾರ, ಹಿತಾಸಕ್ತಿ, ಹೆಣ್ಣು ಮಕ್ಕಳ ಭಾಗಾಂಶ, ಅಡಮಾನ, ಮೈನರ್ ಕ್ಲೈಮ್ ಇತ್ಯಾದಿ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ 7 ದಿನಗಳೆ ಒಳಗಾಗಿ ತಮ್ಮ ತಕರಾರನ್ನು ಲಿಖಿತ ರೂಪದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರುಗಳು ಇರುವುದಿಲ್ಲವೆಂದು ತಿಳಿದು ನಮ್ಮ ಕಕ್ಷಿದಾರರು ಸ್ವತ್ತಿನ ಸಂಬಂಧಿಸಿದಂತೆ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಬಾಧ್ಯರಾಗಿರುತ್ತಾರೆ. ಒಂದು ವೇಳೆ ನಿಗಧಿತ ಅವಧಿಯ ನಂತರ ಬರುವಂತಹ ಯಾವುದೇ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಷೆಡ್ಯೂಲ್ ಸ್ವತ್ತಿನ ವಿವರ: ನಂಜನಗೂಡು ತಾಲ್ಲೂಕು, ಚಿಕ್ಕಯ್ಯನ ಛತ್ರ ಹೋಬಳಿ, ಕುರಹಟ್ಟಿ ಕಾವಲ್ ಗ್ರಾಮಕ್ಕೆ ಸೇರಿದ ಖುಷ್ಕಿ ಸರ್ವೆ ನಂ. 4 (ನಾಲ್ಕು)ರಲ್ಲಿನ ವಿಸ್ತೀರ್ಣ 9 ಎಕರೆ 31 ಗುಂಟೆ ಪೂಟ್ ಖರಾಬು 30 ಗುಂಟೆ ಜಾತಾ ಉಳಿಕೆ ಸಾಗುವಳಿ 9 ಎಕರೆ 01 ಗುಂಟೆ ಆಕಾರ ಪೈಸೆ ಉಳ್ಳ ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ: ಹದಿನಾರು ಗ್ರಾಮದ ಗಡಿ; ಪಶ್ಚಿಮಕ್ಕೆ: ಸರ್ವೆ ನಂ. 3 ಮತ್ತು 5 ರ ಜಮೀನು ; ಉತ್ತರಕ್ಕೆ: ಸರ್ವೆ ನಂ. 1 ಬ್ಲಾಕ್ 31ರ ಜಮೀನು ; ದಕ್ಷಿಣಕ್ಕೆ: ಹದಿನಾರು ಗ್ರಾಮದ ಗಡಿ.

Sd/- H.S. Kumar, B.A.L., LL.B.,
Advocate, Law Lexicon Associates,
No. 1411, 1st Floor, 6th Cross, Thyagaraja Road, Mysuru. Mob: 9448797546

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಕಾರ್ಯದರ್ಶಿಯವರ ಕಛೇರಿ, ಮೈಸೂರು

ಸಂಖ್ಯೆ: ಮೈಅ.ಪ್ರಾ/ಆಅಸಶಾ/ಪ.ಪ್ರ–4/ತು.ಜಾ/2025–26 ದಿನಾಂಕ: 23.07.2025

ಪತ್ರಿಕಾ ಪ್ರಕಟಣೆ


ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿಸಲಾದ ಬಡಾವಣೆಗಳಲ್ಲಿ ತುಂಡು ಭೂಮಿ ಅಥವಾ ಉಳಿದಿರುವ ಭೂಮಿಯನ್ನು ವಿಲೇವಾರಿ ಮಾಡುವ ಸಂಬಂಧ ಮಾನ್ಯ ಸರ್ಕಾರವು ಸಂಖ್ಯೆ **ನಅಇ 2 ಎಸಿಬಿ 2022, ದಿನಾಂಕ: 22.11.2024** ರಂದು ಮಾರ್ಗಸೂಚಿಗಳನ್ನು ತಿಳಿಸಿ ತುಂಡುಭೂಮಿ ಅಥವಾ ಉಳಿದ ಭೂಮಿಯನ್ನು ಒಂದು ವರ್ಷದೊಳಗೆ ತುಂಡು ಭೂಮಿ ಹಂಚಿಕೆಯ ಕಾರ್ಯವಿಧಾನಗಳನ್ನು ಪೂರ್ಣಗೊಳಿಸಲು ನಿರ್ದೇಶಿಸಿರುತ್ತದೆ. ಅದರಂತೆ ಪ್ರಾಧಿಕಾರದಿಂದ ರಚಿತವಾದ ಬಡಾವಣೆಗಳಲ್ಲಿ ಮಂಜೂರಾತಿ ಪಡೆದಿರುವ ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಮಂಜೂರು ಮಾಡುವ ಸಂಬಂಧ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಎರಡು ಬಾರಿ ಕಾಲಾವಕಾಶವನ್ನು ನೀಡಲಾಗಿತ್ತು. ಮುಂದುವರೆದು, ಸಾರ್ವಜನಿಕರು ತಮ್ಮ ನಿವೇಶನ/ಮನೆಗಳಿಗೆ ಹೊಂದಿಕೊಂಡಂತೆ ತುಂಡುಜಾಗ ಲಭ್ಯವಿದ್ದಲ್ಲಿ ಅಂತಹ ತುಂಡುಜಾಗವನ್ನು ಕೋರಿ ಅರ್ಜಿ ಸಲ್ಲಿಸಲು ಅಂತಿಮವಾಗಿ **ದಿನಾಂಕ:23.07.2025 ರಿಂದ 30.09.2025** ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದೆ. ನಿಗಧಿತ ಕಾಲಾವಕಾಶ ನಂತರ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆದುದರಿಂದ ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದೆ. ತದನಂತರ ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/–
ಕಾರ್ಯದರ್ಶಿ,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/KAVITA/03/2025-26

ಪರ್ವತಾರೋಹಿ ಪ್ರೀತ್ ಅಪ್ಪಯ್ಯ ಶೂಟಿಂಗ್‌ನಲ್ಲೂ ಅಪ್ರತಿಮ ಸಾಧನೆ

ಸಂಗೀತ, ನೃತ್ಯದಲ್ಲೂ ಛಾಪು ಮೂಡಿಸಲು ದಾಪುಗಾಲು





ಮೈಸೂರು, ಜು.24(ಎಂಕೆ)– ವಿಶ್ವದ ಅತಿ ಎತ್ತರದ ಆಫ್ರಿಕಾದ ಕಿಲಿ ಮಂಜಾರೋ ಪರ್ವತವೇರಿ ಸಾಧನೆಗೈದ ಕೊಡಗಿನ ಪರ್ವತಾರೋಹಿ ಪ್ರೀತ್ ಅಪ್ಪಯ್ಯ, ಶೂಟಿಂಗ್‌ನಲ್ಲಿಯೂ ಹೊಸ ಛಾಪು ಮೂಡಿಸಿದ್ದಾರೆ.

ಹವ್ಯಾಸಿ ಟ್ರೆಕ್ಕಿಂಗ್ ಜೊತೆಗೆ ನಿರಂತರ ಕ್ರೀಡಾಭ್ಯಾಸದೊಂದಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಶೂಟಿಂಗ್ ಚಾಂಪಿಯನ್‌ಶಿಪ್‌ನ ಮಹಿಳಾ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಅಲ್ಲದೇ ಇವರು ಪ್ರತಿನಿಧಿಸಿದ್ದ ಮೈಸೂರು ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ ಸರ್ವೋತ್ತಮ ಪ್ರಶಸ್ತಿಗೆ ಭಾಜನವಾಗುವಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ.

ತರಬೇತುದಾರ ವಿವೇಕ್ ಮಾರ್ಗದರ್ಶನದಲ್ಲಿ ಶೂಟಿಂಗ್ ನಿಖರತೆ ಹೆಚ್ಚಿಸಿಕೊಂಡಿದ್ದಾರೆ. ಇದೇ ವರ್ಷ ಜನವರಿ ತಿಂಗಳಲ್ಲಿ ನಡೆದ 2ನೇ ನಾಗರಾಜ್ ರಾವ್ ಜಗದಾಳೆ ಶೂಟಿಂಗ್ ಚಾಂಪಿಯನ್‌ಶಿಪ್‌ನ ಸೀನಿಯರ್ ಮಾಸ್ಟರ್ಸ್ ಮಹಿಳಾ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು. ಹಾಗೆಯೇ 2024ರ ಜುಲೈನಲ್ಲಿ ನಡೆದ 12ನೇ ಶೂಟಿಂಗ್ ಚಾಂಪಿಯನ್ ಶಿಪ್‌ನ ಮಹಿಳಾ ಮಾಸ್ಟರ್ಸ್ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು. ಟ್ರೆಕ್ಕಿಂಗ್, ಶೂಟಿಂಗ್ ಜೊತೆಗೆ ವಿದುಷಿ ವೀಣಾ ಪಂಡಿತ್ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ವಿದ್ವಾನ್ ಮೈಸೂರು ಬಿ.ನಾಗರಾಜ್ ಅವರಿಂದ ಕಥಕ್ ನೃತ್ಯದ ತರಬೇತಿ ಪಡೆಯುತ್ತಿರುವ ಪ್ರೀತ್ ಅಪ್ಪಯ್ಯ, ತಮ್ಮ ವಿಶಿಷ್ಟ ಸಾಧನೆಯಿಂದ ಇತರರಿಗೆ ಪ್ರೇರಣೆಯಾಗಿದ್ದಾರೆ.

ಮನುಷ್ಯ ಧರ್ಮವನ್ನು ಪ್ರಚಾರಪಡಿಸುವುದೇ ವಚನಗಳ ಮುಖ್ಯ ಉದ್ದೇಶ

'ವಚನ ಜಿಜ್ಞಾಸೆ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಶಂಕರ ದೇವನೂರು ಪ್ರತಿಪಾದನೆ

ಮೈಸೂರು, ಜು.24(ಜಿಎ)–ವರ್ಣ, ಜಾತಿ, ಲಿಂಗ, ಧರ್ಮವನ್ನು ದೂರ ಇಟ್ಟು ಮನುಷ್ಯ ಧರ್ಮವನ್ನು ಪ್ರಚಾರ ಪಡಿಸುವುದೇ ವಚನಗಳ ಮುಖ್ಯ ಉದ್ದೇಶವಾಗಿತ್ತು ಎಂದು ಚಿಂತಕ ಶಂಕರ ದೇವನೂರು ಪ್ರತಿಪಾದಿಸಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನಾ ವಿಸ್ತರಣ ಕೇಂದ್ರ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿದ್ದ ವಿಶೇಷ ಉಪನ್ಯಾಸ, 'ವಚನ ಜಿಜ್ಞಾಸೆ' ಪುಸ್ತಕ ಬಿಡುಗಡೆ ಹಾಗೂ ವಚನ ವಿಮರ್ಶೆಯ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವಣ್ಣನವರ ಕಾಲದಲ್ಲಿ ಕತ್ತಲೆಯಲ್ಲಿ ಇದ್ದವರು ಬೆಳಕಿಗೆ ಬಂದರು. ಶರಣ ಸಾಹಿತ್ಯಕ್ಕೆ ಚಲನಶೀಲತೆ ದೊರೆಯಿತು. ಸ್ಥಾವರ ಸಂಸ್ಕೃತಿ ಅಲ್ಲ. ಜಂಗಮ ಸಂಸ್ಕೃತಿ ಎಂಬ ನಿಜದ ದರ್ಶನ ಮಾಡಿಸಿದರು. ಪ್ರಶ್ನೆಯ ಮುಖಾಂತರವೇ ಜ್ಞಾನದ ವಿಕಾಸ ಎಂದು ತೋರಿಸಿಕೊಟ್ಟರು. ಎಷ್ಟೋ ಮಹಿಳೆಯರು ಅಡುಗೆ ಮನೆಯಿಂದ ಮಹಾಮನೆಗೆ ಬಂದರು. ಬಹುತ್ವದ ನೆಲೆಯನ್ನು ಸಾರಿ ಪ್ರಜಾಪ್ರಭುತ್ವಕ್ಕೆ ಅರ್ಥ ಕಲ್ಪಿಸಿದರು ಎಂದರು.

ವಚನಗಳು ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿದ್ದು, ಮನುಷ್ಯನ ಬೌದ್ಧಿಕ ವಿಕಾಸಕ್ಕೆ ದಾರಿಮಾಡಿಕೊಟ್ಟಿದೆ. ಬದುಕು ಹೊರಗಿನವರಿಗೆ ಪ್ರದರ್ಶನ ಆಗಬಾರದು. ಅದು ಇತರರಿಗೆ ನಿದರ್ಶನ ಆಗಬೇಕು. ಅಂತರಂಗ ಶಕ್ತಿ, ಸತ್ಯದ ಸ್ವರೂಪ, ನಿಜದ ನೆಲೆ ಎಲ್ಲವನ್ನೂ ಅನಾವರಣಗೊಳಿಸುವ ಶರಣ ಸಾಹಿತ್ಯ ಲಿಂಗ ಬೇಧವನ್ನು ತೊಡೆದು ಸಮ ಸಮಾಜದ ನಿರ್ಮಾಣಕ್ಕೆ ಎಡೆ ಮಾಡಿಕೊಡುತ್ತದೆ ಎಂದು ತಿಳಿಸಿದರು.

ಬದುಕು ಬೆಳಗಬೇಕು, ಬದಲಾಗಬೇಕು. ಆಗ ನೂರಾರು ಜನರಿಗೆ ಆಧಾರವಾಗುತ್ತದೆ. ಮನುಷ್ಯರಾದ ನಾವು ಹಾಗೇ ಬದುಕಬೇಕು. ಬಸವಣ್ಣನವರ ಕ್ರಾಂತಿ ಎಂದರೆ ಕೂಗುವುದು, ಪ್ರತಿಭಟನೆ ಅಲ್ಲ. ಕ್ರಾಂತಿಗೆ ಕೊನೆ ಇಲ್ಲ. 12ನೇ ಶತಮಾನದಲ್ಲಿ ನಿಜದ ಕ್ರಾಂತಿ ಆಯಿತು. ಹಲವರು ಶರಣ ಸಾಹಿತ್ಯ ಹರಿವ ನದಿಯಂತೆ. ಅದನ್ನು ಪಾಲಿಸಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಅರವಿಂದ ಮಾಲಗತ್ತಿ ಮಾತನಾಡಿ, ಬಸವಣ್ಣನವರ ಚಿಂತನೆಗಳ ಬಗ್ಗೆ ಮಾತನಾಡುವಾಗ ಅವರ ಚಳವಳಿಗಳು ನಿತ್ಯ ಹರಿದ್ವರ್ಣ ಸ್ವರೂಪದ್ದು ಎಂಬ ಸಂಗತಿ ಗೋಚರಿಸುತ್ತದೆ. 21ನೇ ಶತಮಾನದ ಚಿಂತನೆಗಳನ್ನು 12ನೇ ಶತಮಾನದಲ್ಲೇ ಬಿತ್ತಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಆದರೆ, ಇಂದು ಎಷ್ಟೋ ಜನ ಬಸವಣ್ಣನವರ ಆಶಯಗಳನ್ನು ಪಾಲಿಸುತ್ತಿಲ್ಲ. ಬಸವಣ್ಣನವರ ಭವ್ಯ ಕರ್ನಾಟಕದ ಕನಸು ಇನ್ನೂ ನನಸಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರಾಧ್ಯಾಪಕಿ ಡಾ.ಎಸ್.ಡಿ.ಶಶಿಕಲಾ, ಪುಸ್ತಕ ಸಹ ಸಂಪಾದಕರಾದ ದಿವ್ಯಶ್ರೀ ಮತ್ತು ಅನಿತಾ, ಪ್ರೊ.ನೀಲಗಿರಿ ತಳವಾರ್, ಪ್ರೊ. ನಂದಕುಮಾರ್ ಉಪಸ್ಥಿತರಿದ್ದರು.



ಮೈಸೂರಿನ ಮಾನಸಗಂಗೋತ್ರಿಯ ಶ್ರೀಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನಾ ವಿಸ್ತರಣಾ ಕೇಂದ್ರ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವಚನ ಜಿಜ್ಞಾಸೆ' ಪುಸ್ತಕ ಬಿಡುಗಡೆಗೊಳಿಸಲಾಯಿತು.

ಲೋಕಾಯುಕ್ತ ದಾಳಿ ವೇಳೆ ಮೈಸೂರು ಇಬ್ಬರು ಅಧಿಕಾರಿಗಳ ಬಳಿ ಪತ್ತೆಯಾದ ಆಸ್ತಿ–ಪಾಸ್ತಿ ವಿವರ

ಮೈಸೂರು, ಜು.24(ಬಿಎಲ್‌ಯು)– ಮೈಸೂರಿನ ಇಬ್ಬರು ಸರ್ಕಾರಿ ಅಧಿಕಾರಿಗಳ ಮನೆ ಮೇಲೆ ನಿನ್ನೆ ದಾಳಿ ವೇಳೆ ಪತ್ತೆಯಾದ ಆಸ್ತಿ–ಪಾಸ್ತಿ ವಿವರಗಳನ್ನು ಲೋಕಾಯುಕ್ತ ಅಧಿಕಾರಿಗಳು ಅಧಿಕೃತವಾಗಿ ಪ್ರಕಟಿಸಿದ್ದಾರೆ.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಂ.ಮಂಜುನಾಥ ಸ್ವಾಮಿ ಅವರಿಗೆ ಸೇರಿದ 4 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆಸಿದ್ದು, 4,45,07,000 ಮೌಲ್ಯದ 3 ನಿವೇಶನ, 2 ವಾಸದ ಮನೆ, 4 ಎಕರೆ ಕೃಷಿ ಜಮೀನು, 2.27,100 ರೂ.ನಗದು, 46,04,800 ಬೆಲೆಬಾಳುವ ಚಿನ್ನಾಭರಣ, 17,00,000 ಮೌಲ್ಯದ ವಾಹನಗಳು, 10,00,000 ಬೆಲೆಬಾಳುವ ಇತರೆ ವಸ್ತುಗಳು ಸೇರಿ ಒಟ್ಟು 5,20,38,900 ಮೌಲ್ಯದ ಆಸ್ತಿ–ಪಾಸ್ತಿ ಪತ್ತೆಯಾಗಿದೆ. ಈ ಸಂಬಂಧ ಕೊಡಗು ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು ನಗರಪಾಲಿಕೆಯ ವಲಯ ಸಹಾಯಕ ಆಯುಕ್ತ ಬಿ. ವೆಂಕಟರಾಮು ಅವರಿಗೆ ಸೇರಿದ 5 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆದಿದ್ದು, 2,56,25,000 ರೂ. ಮೌಲ್ಯದ 3 ವಾಸದ ಮನೆಗಳು, 2 ಎಕರೆ 2 ಗುಂಟೆ ಕೃಷಿ ಜಮೀನು, 2,01,300 ನಗದು, 37,00,100 ಬೆಲೆ ಬಾಳುವ ಚಿನ್ನಾಭರಣ, 43,60,000 ಮೌಲ್ಯದ ವಾಹನಗಳು, 32,72,738 ರೂಪಾಯಿ ಬೆಲೆಬಾಳುವ ಗೃಹೋಪಯೋಗಿ ವಸ್ತುಗಳು ಸೇರಿ ಒಟ್ಟು 3,71,59,138 ಆಸ್ತಿಯನ್ನು ವೆಂಕಟರಾಮು ಹೊಂದಿರುವುದು ಪತ್ತೆಯಾಗಿದೆ. ಈ ಸಂಬಂಧ ಮೈಸೂರು ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಪ್ರೇಮಲೋಕದಿಂದ ತಂದ ಪ್ರೇಮದ ಸಂದೇಶ' ಸಂಗೀತ ಕಾರ್ಯಕ್ರಮ ಇಂದು

ಮೈಸೂರು, ಜು.24(ಜಿಎ)– ಅಮೃತ ವರ್ಷಿಣಿ ಗಾನ ವೃಂದದ ವತಿಯಿಂದ ಜು.25ರಂದು ಸಂಜೆ 5ಕ್ಕೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಟ ರವಿಚಂದ್ರನ್ ಚಿತ್ರಗಳ 'ಪ್ರೇಮಲೋಕದಿಂದ ತಂದ ಪ್ರೇಮದ ಸಂದೇಶ' ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಅಮೃತೇಶ್ ಈ ವಿಷಯ ತಿಳಿಸಿ, ಇದು ಕರೋಕೆ ಕಾರ್ಯಕ್ರಮವಾಗಿದ್ದು, ನಟ ರವಿಚಂದ್ರನ್ ಅವರ ಚಿತ್ರಗಳಿಂದ ಆಯ್ದ ಸುಮಾರು 35 ಗೀತೆಗಳನ್ನು 12 ಮಂದಿ ಗಾಯಕ, ಗಾಯಕಿಯರು ಪ್ರಸ್ತುತ ಪಡಿಸಲಿದ್ದಾರೆ. ಯಾವುದೇ ಸಭಾ ಕಾರ್ಯಕ್ರಮ ಇರುವುದಿಲ್ಲ ಎಂದರು. ಗೋಷ್ಠಿಯಲ್ಲಿ ತಂಡದ ಕನಕರಾಜು, ನರಸಿಂಹ ಮೂರ್ತಿ, ಸುಜಾತ ಉಪಸ್ಥಿತರಿದ್ದರು.

ಆರತಿ ಉಕ್ಕಡ ಭಕ್ತರಿಗೆ ಪಾಂಡವಪುರ ರೈಲು ನಿಲ್ದಾಣದಲ್ಲಿ 5 ಎಕ್ಸ್‌ಪ್ರೆಸ್ ರೈಲು ನಿಲುಗಡೆ;

ಸುಮಾರು 16 ಸಾವಿರ ಜನರಿಗೆ ಪ್ರಯೋಜನ

ಮೈಸೂರು, ಜು.24(ಬಿಎಲ್‌ಯು)– ಭೀಮನ ಅಮಾವಾಸ್ಯೆ ದಿನವಾದ ಇಂದು ಪಾಂಡವಪುರ ಬಳಿಯ ಆರತಿ ಉಕ್ಕಡಕ್ಕೆ ತೆರಳುವ ಭಕ್ತರ ಅನುಕೂಲಕ್ಕಾಗಿ ಪಾಂಡವಪುರ ರೈಲು ನಿಲ್ದಾಣದಲ್ಲಿ 5 ಎಕ್ಸ್‌ಪ್ರೆಸ್ ರೈಲುಗಳನ್ನು ನಿಲುಗಡೆ ಮಾಡಲಾಯಿತು. ಇದರಿಂದ ಸಾವಿರಾರು ಪ್ರಯಾಣಿಕರು ಇದರ ಪ್ರಯೋಜನ ಪಡೆದರು.

ಮೈಸೂರು–ಕೆಎಸ್‌ಆರ್ ಬೆಂಗಳೂರು ಒಡೆಯರ್ ಎಕ್ಸ್‌ಪ್ರೆಸ್, ಮೈಸೂರು–ಕೆಎಸ್‌ಆರ್ ಬೆಂಗಳೂರು ರಾಜಧಾನಿ ಎಕ್ಸ್‌ಪ್ರೆಸ್, ಮೈಸೂರು–ಕಡಲೂರು ಪೋರ್ಟ್ ಎಕ್ಸ್‌ಪ್ರೆಸ್, ಬೆಂಗಳೂರು–ಮೈಸೂರು ರಾಜಧಾನಿ ಎಕ್ಸ್‌ಪ್ರೆಸ್ ಹಾಗೂ ಬೆಂಗಳೂರು–ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪಾಂಡವಪುರ ರೈಲು ನಿಲ್ದಾಣದಲ್ಲಿ ನಿಲುಗಡೆ ಅವಕಾಶ ನೀಡಲಾಗಿತ್ತು.

ಭೀಮನ ಅಮಾವಾಸ್ಯೆ ದಿನವಾದ ಇಂದು ಸುಮಾರು 14ರಿಂದ 16 ಸಾವಿರ ಪ್ರಯಾಣಿಕರು ಪಾಂಡವಪುರ ರೈಲು ನಿಲ್ದಾಣದಲ್ಲಿ ಇಳಿದಿದ್ದು, ಇವರಲ್ಲಿ ಬಹುತೇಕ ಮಂದಿ ಆರತಿ ಉಕ್ಕಡಕ್ಕೆ ತೆರಳಿದ್ದಾರೆ.

ಕಳೆದ ವರ್ಷ ಇದೇ ಅಮಾವಸ್ಯೆ ದಿನದಂದು ಎಕ್ಸ್‌ಪ್ರೆಸ್ ರೈಲುಗಳಿಗೆ ಪಾಂಡವಪುರ ನಿಲ್ದಾಣದಲ್ಲಿ ರೈಲು ನಿಲುಗಡೆಗೆ ಅವಕಾಶ ನೀಡಿದಾಗ 14,879 ಪ್ರಯಾಣಿಕರು ಇದರ ಸೌಲಭ್ಯ ಪಡೆದಿದ್ದರು. ಆದರೆ ಈ ಬಾರಿ 14ರಿಂದ 16 ಸಾವಿರ ಪ್ರಯಾಣಿಕರು ಪಾಂಡವಪುರ ರೈಲು ನಿಲ್ದಾಣದಲ್ಲಿ ಇಳಿದಿದ್ದಾರೆ ಎಂದು ನೈರುತ್ಯ ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯ ದಿನಗಳಂದು ಪಾಂಡವಪುರ ರೈಲು ನಿಲ್ದಾಣದಲ್ಲಿ ಸರಾಸರಿ ಸುಮಾರು 6 ಸಾವಿರ ಜನರು ಇಳಿಯುತ್ತಾರೆ. ನಿನ್ನೆ 5,960 ಪ್ರಯಾಣಿಕರು ಪಾಂಡವಪುರ ರೈಲು ನಿಲ್ದಾಣದಲ್ಲಿ ಇಳಿದಿದ್ದಾರೆ. ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರಿಗೆ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವಿರುವ ಹಿನ್ನೆಲೆಯಲ್ಲಿ ಸಾವಿರಾರು ಜನರು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಆರತಿ ಉಕ್ಕಡಕ್ಕೆ ತೆರಳಿದ್ದರು.

ಜು.27, ಕದಳಿ ಮಹಿಳಾ ವೇದಿಕೆ ರಜತ ಮಹೋತ್ಸವ

'ಕದಳಿಶ್ರೀ' ಪ್ರಶಸ್ತಿ ಪ್ರದಾನ

ಮೈಸೂರು,ಜು.24(ಎಂಟಿವೈ)–ಮೈಸೂರಿನ ಕಲಾಮಂದಿರದಲ್ಲಿ ಜು.27 ರಂದು ಬೆಳಗ್ಗೆ 10.30ಕ್ಕೆ ಕದಳಿ ಮಹಿಳಾ ವೇದಿಕೆಯ ರಜತ ಮಹೋತ್ಸವ ಹಾಗೂ 'ಕದಳಿಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಕದಳಿ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶರಣ ಸಾಹಿತ್ಯ ಪರಿಷತ್ ಜಿಲ್ಲಾ, ನಗರ ಘಟಕ ಹಾಗೂ ಕದಳಿ ಮಹಿಳಾ ವೇದಿಕೆಗಳ ವತಿಯಿಂದ ಕದಳಿ ಮಹಿಳಾ ವೇದಿಕೆಯ ರಜತ ಮಹೋತ್ಸವ ಹಾಗೂ ಕದಳಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದ್ದು, ಅಂದು ಬೆಳಗ್ಗೆ 10.30ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗದಗದ ಎಡೆಯೂರು ಜಗದ್ಗುರು ತೋಂಟದಾರ್ಯ ಸಂಸ್ಥಾನದ ಡಾ. ತೋಂಟದ ಸಿದ್ದರಾಮ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಮಾಜಿ ಸಚಿವರಾದ ಡಾ.ಲೀಲಾದೇವಿ ಆರ್.ಪ್ರಸಾದ್ ಉದ್ಘಾಟಿಸಲಿದ್ದಾರೆ ಎಂದರು.

ಅಕ್ಕಮಹಾದೇವಿ ಜೀವನ ಯಾತ್ರೆ ಕುರಿತ 'ವೈರಾಗ್ಯನಿಧಿ–ಜಗದ ಸೋಜಿಗ' ಕೃತಿಯನ್ನು ನಾಡೋಜ ಗೊ.ರು. ಚನ್ನಬಸಪ್ಪ ಬಿಡುಗಡೆ ಮಾಡಲಿದ್ದಾರೆ. ರಜತ ಮಹೋತ್ಸವ ನೆನಪಿಗಾಗಿ ಪ್ರಕಟಿಸಿರುವ 'ಬೆಳದಿಂಗಳು' ಸ್ಮರಣ ಸಂಚಿಕೆಯನ್ನು ಮಾಳವಿಕಾ ಅವಿನಾಶ್ ಲೋಕಾರ್ಪಣೆ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ವಹಿಸುವರು. ಈ ಬಾರಿ 'ಕದಳಿಶ್ರೀ' ಪ್ರಶಸ್ತಿಯನ್ನು ಪದ್ಮಶ್ರೀ ಪುರಸ್ಕೃತರಾದ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ಪ್ರದಾನ ಮಾಡಲಾಗುತ್ತಿದೆ ಎಂದರು.

ಮಧ್ಯಾಹ್ನ 3 ಗಂಟೆಗೆ ನಡೆಯುವ ಸಮಾರೋಪ ಸಮಾರಂಭ ಸಾನಿಧ್ಯವನ್ನು ಮುರುಘ ರಾಜೇಂದ್ರ ಮಹಾಸಂಸ್ಥಾನದ ಡಾ.ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ ವಹಿಸಲಿದ್ದು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಉದ್ಯಮಿ ಛಾಯಾ ನಂಜಪ್ಪ, ಜೆಎಸ್‌ಎಸ್ ದಂತ ವೈದ್ಯ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಉಷಾ ಹೆಗ್ಡೆ ಅವರನ್ನು ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಹೆಳವರ ಹುಂಡಿ ಸಿದ್ದಪ್ಪ, ಕದಳಿ ಮಹಿಳಾ ವೇದಿಕೆಯ ಪದಾಧಿಕಾರಿಗಳಾದ ವಾಗ್ದೇವಿ, ಸುಧಾ ಮೃತ್ಯುಂಜಯಪ್ಪ, ರಾಜೇಶ್ವರಿ ಮಲ್ಲಿಕಾರ್ಜುನಪ್ಪ ಹಾಗೂ ಜಯಾ, ಛಾಯಾಗೌಡ ಇದ್ದರು.

ಭೀಮನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ



ಜಯಪುರದ ಮಲೆಯ ಋಷಿ ಕೋಣಪ್ಪಸ್ವಾಮಿ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ, ನಡೆಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಪುಟ್ಟಬುದ್ಧಿ, ಮಹದೇವೇಗೌಡ, ಕೆಂಪರಾಜು, ಸ್ವಾಮಿನಾಯಕ, ಚಾಮರಾಜು, ದಂಡನಾಯಕ, ಚನ್ನನಾಯಕ, ಕುಮಾರ, ಸಂತೋಷ್ ಇದ್ದರು.

ರಾಷ್ಟ್ರಪತಿ ಭವನದ ಹಸ್ತಪ್ರತಿ ಸಂಗ್ರಹಾಲಯಕ್ಕೆ ಕನ್ನಡದ 'ಅಧ್ಯಾತ್ಮ ರಾಮಾಯಣ'

ಮೈಸೂರು, ಜು. 24– ರಾಷ್ಟ್ರಪತಿ ಭವನದಲ್ಲಿನ ಹಸ್ತಪ್ರತಿ ಸಂಗ್ರಹಾಲಯವು ಭಾರತದ ಎಲ್ಲ ಭಾಷೆಗಳ ಹಸ್ತಪ್ರತಿಗಳನ್ನು ಸಂಗ್ರಹಿಸುವ ಮತ್ತು ಪ್ರದರ್ಶನವನ್ನು ಆಯೋಜಿಸುವ ಯೋಜನೆ ಹಾಕಿಕೊಂಡಿದೆ.

ಈ ಸಂಬಂಧವಾಗಿ ಕನ್ನಡದ ತಾಳೆಯೋಲೆಯ ಗ್ರಂಥವೊಂದನ್ನು ಕಳುಹಿಸುವಂತೆ ಮೈಸೂರಿನ ಬಿಎಂಶ್ರೀ ಪ್ರತಿಷ್ಠಾನಕ್ಕೆ ರಾಷ್ಟ್ರಪತಿ ಭವನದಿಂದ ಆಹ್ವಾನ ನೀಡಲಾಗಿದೆ. ಈ ಸಂಬಂಧ ಕನ್ನಡದ 'ಅಧ್ಯಾತ್ಮ ರಾಮಾಯಣ' ಎಂಬ ತಾಳೆಯೋಲೆಯ ಗ್ರಂಥವನ್ನು ಆಯ್ಕೆ ಮಾಡಿ ವರ್ಣನಾತ್ಮಕ ಸೂಚಿಯೊಂದಿಗೆ ಭಾರತದ ರಾಷ್ಟ್ರಪತಿಭವನದ ಹಸ್ತಪ್ರತಿ ಸಂಗ್ರಹಾಲಯಕ್ಕೆ ಕಳುಹಿಸಲಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ರಾಷ್ಟ್ರಪತಿ ಭವನದಲ್ಲಿ ನಡೆಯುವ ಹಸ್ತಪ್ರತಿಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಈ ಗ್ರಂಥವು ಅಲ್ಲಿನ ಹಸ್ತಪ್ರತಿ ಸಂಗ್ರಹಾಲಯ ಸೇರಲಿದೆ ಎಂದು ಪ್ರತಿಷ್ಠಾನ ತಿಳಿಸಿದೆ. ಹರಿದಾಸ ಸಾಹಿತ್ಯ ಸಂಶೋಧಕರಾದ ಡಾ.ಅನಂತ ಪದ್ಮನಾಭರಾವ್ ಅವರು ತಮ್ಮ ಕ್ಷೇತ್ರ ಕಾರ್ಯದಲ್ಲಿ ದೊರೆತ ತಾಳೆಯೋಲೆಯ ಈ ಗ್ರಂಥವನ್ನು ಬಿಎಂಶ್ರೀ ಪ್ರತಿಷ್ಠಾನಕ್ಕೆ ಎರಡು ವರ್ಷದ ಹಿಂದೆ ಗ್ರಂಥದಾನವಾಗಿ ನೀಡಿದ್ದು, ಅದು ರಾಷ್ಟ್ರಪತಿ ಭವನದ ಹಸ್ತಪ್ರತಿ ಸಂಗ್ರಹಾಲಯ ಸೇರುತ್ತಿದೆ.

ಇಂದು ಸಂಸ್ಥಾಪನಾ ದಿನಾಚರಣೆ

ಮೈಸೂರು,ಜು.24–ಜು.25ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಭಾಂಗಣದಲ್ಲಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮುಂಬೈ, ಮಹಾರಾಷ್ಟ್ರ, ಸಿಗ್ನೆಟ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು, ಬಿನಾ ಶಾ ಫೌಂಡೇಷನ್‌ನ ಹರೀಶ್ ಮತ್ತು ಅಧ್ಯಕ್ಷ ಹರೀಶ್ ಶಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿ 'ಪರಂಪರೆಯಿಂದ ಕಲಿಕೆ: ಜಯಲಕ್ಷ್ಮಿ ವಿಲಾಸ ಅರಮನೆ ವಸ್ತು ಸಂಗ್ರಹಾಲಯ ಮತ್ತು ಸಾಂಸ್ಕೃತಿಕ ವೇಗವರ್ಧಕವಾಗಿ ವಿಶ್ವವಿದ್ಯಾನಿಲಯದ ಪಾತ್ರ' ಕುರಿತು ಉಪನ್ಯಾಸ ನೀಡಲಿದ್ದಾರೆ. ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವಿ ಕುಲಸಚಿವೆ ಎಂ.ಕೆ.ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.07.2025 ಶುಕ್ರವಾರ, ಮಳೆ ನಕ್ಷತ್ರ: ಪುಷ್ಯ, 20.07.2025 ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ಗ್ರೀಷ್ಮ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋ ಥೈರಾಯ್ಡಿಸಮ್, ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್, ಇಸುಬು, ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಮುಖ್ಯ ಅತಿಥಿಗಳು : ಕೆ.ಆರ್. ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ. ಆರ್. ಯೋಗೀಶ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ (ಪ್ರಭಾರ) ಎಂ.ಎಲ್. ಚಿದಾನಂದ ಕುಮಾರ್, ಉಪಸ್ಥಿತರು : ಪ್ರಾಂಶುಪಾಲ ಡಾ. ಅನಿಲ್ ಎಸ್. ಕರಭೀಮಗೋಳ, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೀತಿಬಕುಷ್ಟ (ಸೋರಿಯಾಸಿಸ್), ಮಕ್ಕಳಲ್ಲಿ ಕಂಡುಬರುವ ನೆಗಡಿ, ಕೆಮ್ಮು, ಅಸ್ತಮಾ ಮತ್ತು ಅಲರ್ಜಿ ಚಿಕಿತ್ಸಾ ಶಿಬಿರ, ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲೆ ಸಮಾಜ ಶಾಸ್ತ್ರ ಉಪನ್ಯಾಸಕರ ವೇದಿಕೆ :** ದ್ವಿತೀಯ ಪಿಯುಸಿ ಸಮಾಜಶಾಸ್ತ್ರ ಪ್ರಶ್ನೋತ್ತರ ಕೈಪಿಡಿ ಬಿಡುಗಡೆ ಹಾಗೂ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ, ಉದ್ಘಾಟನೆ : ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಮೈಸೂರು ಜಿಲ್ಲೆಯ ಉಪನಿರ್ದೇಶಕ ಎಂ.ಎಲ್ ಚಿದಾನಂದ ಕುಮಾರ್, ಖ್ಯಾತ ಸಮಾಜಶಾಸ್ತ್ರಜ್ಞೆ ಪ್ರೊ.ಆರ್.ಇಂದಿರಾ ವಿಶೇಷ ಉಪನ್ಯಾಸ, ಕೈಪಿಡಿ ಬಿಡುಗಡೆ : ಮಂಡ್ಯ ಜಿಲ್ಲೆಯ ಉಪನಿರ್ದೇಶಕ ಸಿ ಚಲುವಯ್ಯ, ವಿಶೇಷ ಆಹ್ವಾನಿತರು : ರಾಮನಗರ ಜಿಲ್ಲೆಯ ಉಪದೇಶಕರಾದ ಶ್ರೀಮತಿ ಎಂ.ಪಿ ನಾಗಮ್ಮ, ಅಧ್ಯಕ್ಷತೆ : ಜಿಲ್ಲಾ ಸಮಾಶಾಸ್ತ್ರ ವೇದಿಕೆಯ ಗೌರವಾಧ್ಯಕ್ಷ ಸಿ.ಆರ್. ದಿನೇಶ್, ಉಪಸ್ಥಿತರು : ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎನ್. ಉದಯ ಶಂಕರ್, ಸರಗೂರು ಕಾಲೇಜಿನ ಪ್ರಾಂಶುಪಾಲ ಎಚ್.ವಿ.ರಾಘವೇಂದ್ರ, ವೇದಿಕೆಯ ಅಧ್ಯಕ್ಷ ಎಚ್.ಎಸ್ ರವಿಶಂಕರ್, ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಹಾಲಪ್ಪ, ಸ್ಥಳ: ಸರ್ಕಾರಿ ಮಹಾರಾಜ ಪದವಿ ಪೂರ್ವ ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ :** ಮುತ್ತು ಬಂದಿದೆ ಕೇರಿಗೆ ರಸಗ್ರಹಣ ಶಿಬಿರ, ಉದ್ಘಾಟನೆ: ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ದೇವಿಕಾ, ನಾಗರಾಜು ಬೀಜಗನಹಳ್ಳಿ ಅವರಿಂದ ಕನಕದಾಸರ ಬಗ್ಗೆ ವಿಶೇಷ ಉಪನ್ಯಾಸ, ನಿತಿನ್ ರಾಜಾರಾವ್ ಶಾಸ್ತ್ರಿ ಮತ್ತು ತಂಡದಿಂದ ಕನಕ ಕೀರ್ತನೆ, ಉಪಸ್ಥಿತರು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್.ನರಸಿಂಹ, ಸ್ಥಳ: ಶ್ರೀ ವೆಂಕಟಕೃಷ್ಣಯ್ಯ ಸಭಾಂಗಣ, ಶಾರದಾ ವಿಲಾಸ ಕಾಲೇಜು, ಬೆಳಗ್ಗೆ 10.30ಕ್ಕೆ

■ **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ (ಪದವಿ ಪೂರ್ವ ಶಿಕ್ಷಣ) ಇಲಾಖೆ, ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು :** 2025–26ನೇ ಸಾಲಿನ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ, ನೂತನ ಕಟ್ಟಡ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಿದಾನಂದಕುಮಾರ್, ಜೆನೆಟಿಕ್ಸ್ ವಿಭಾಗದ ಅಧ್ಯಕ್ಷೆ ಶ್ರೀಮತಿ ಸುತ್ತೂರು ಎಸ್.ಮಾಲಿನಿ ಅವರಿಂದ ವಿಶೇಷ ಉಪನ್ಯಾಸ, ಉಪಸ್ಥಿತರು: ಉಪಪ್ರಾಂಶುಪಾಲರಾದ ಶ್ರೀಮತಿ ತಿರುಮಲಾಂಬ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಮಹದೇವು, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಪಿ. ಸೋಮಣ್ಣ, ಸ್ಥಳ: ಕಾಲೇಜಿನ ಕೆಂಪನಂಜಮ್ಮಣ್ಣಿ ವೇದಿಕೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಸಂಸ್ಥಾಪನಾ ದಿನಾಚರಣೆ, ಹರೀಶ್ ಮತ್ತು ಬಿನಾ ಶಾ ಫೌಂಡೇಷನ್ ಅಧ್ಯಕ್ಷರು ಮತ್ತು ಸಿಗ್ನೆಟ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರಾದ ಹರೀಶ್ ಶಾ ಅವರಿಂದ ಪರಂಪರೆಯಿಂದ ಕಲಿಕೆ : ಜಯಲಕ್ಷ್ಮೀ ವಿಲಾಸ ಅರಮನೆ ವಸ್ತು ಸಂಗ್ರಹಾಲಯ ಮತ್ತು ಸಾಂಸ್ಕೃತಿಕ ವೇಗವರ್ಧಕವಾಗಿ ವಿಶ್ವವಿದ್ಯಾನಿಲಯದ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಕ್ರಾಫರ್ಡ್ ಭವನ, ಮೈಸೂರು ವಿವಿ, ಬೆಳಗ್ಗೆ 11ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 7.30ಕ್ಕೆ ತೈಲಾಭಿಷೇಕ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ರಾತ್ರಿ 7.30ಕ್ಕೆ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ಉತ್ಸವ, ಪ್ರಸಾದ ವಿನಿಯೋಗ, ಸ್ಥಳ : ದೇವಸ್ಥಾನ, ಕೆ.ಆರ್. ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು, ಶ್ರೀ ಪ್ರಣವ್ ಎಜುಕೇಷನಲ್ ಟ್ರಸ್ಟ್ :** ಹತ್ತನೆ ವರುಷ ಬತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಡಾ. ಜೆ. ರೋಹಿತ್, ಸ್ಥಳ: ಕಾಲೇಜು ಆವರಣ, ಮಧ್ಯಾಹ್ನ 2.45ಕ್ಕೆ.

■ **ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಮತ್ತು ಎಸ್‌ವಿವೈಎಂ :** 8ನೇ ಮೈಸೂರು ವಿಜ್ಞಾನ ನಾಟಕೋತ್ಸವ, ಸಂಜೆ 5ರಿಂದ ಖಗೋಳ ವಿಜ್ಞಾನ ಹಾಗೂ ಮಾನವರ ಅವರೋಹಣ, ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆ ಸಾರ್ವಜನಿಕ ಸಂಪರ್ಕ, ಮುಖ್ಯಸ್ಥ ಡಾ. ನೀರುಜ್ ಮೋಹನ್ ರಾಮಾನುಜಂ, ಬಿ.ಎಸ್. ಕೃಷ್ಣಮೂರ್ತಿ ಅವರಿಂದ ಗಣಿತ ಕುಣಿತ, ಸೂರ್ಯ ಕಲೆಯ ವೀಕ್ಷಣೆ, ಮಹಿಳಾ ವಿಜ್ಞಾನಿಗಳು, ಪುಸ್ತಕ ಪ್ರದರ್ಶನ, ಸಂಜೆ 6.30ಕ್ಕೆ ಅರಿವು ರಂಗ ತಂಡದಿಂದ ಹಸಿವು ನಾಟಕ ಪ್ರದರ್ಶನ, ರಚನೆ : ಸಂತೋಷ್ ತಾಮ್ರಪರ್ಣಿ, ನಿರ್ದೇಶನ : ಪ್ರವೀಣ್ ಬೆಳ್ಳಿ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ಶ್ರೀಕಾರ್ಯಸ್ವಾಮಿ ಮಠದ ಶ್ರೀ ಮಹೇಶ್ವರ ಸ್ವಾಮೀಜಿ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ. ಅನಂತರಾಮು ಅವರಿಂದ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಕೊಳ್ಳೇಗಾಲ ನಗರದಲ್ಲಿಂದು

■ **ಸ್ವಸ್ತಿ ಆರ್ಥೋ ಮತ್ತು ಇಎನ್‌ಟಿ ಕ್ಲಿನಿಕ್ ವಿದ್ಯಾರಣ್ಯಪುರಂ:** ಉಚಿತ ಮೂಳೆ ಖನಿಜ ಸಾಂದ್ರತೆ ಪರೀಕ್ಷೆ ಹಾಗೂ ಮೂಳೆ, ಕೀಲು ರೋಗ ತಪಾಸಣಾ ಶಿಬಿರ, ಸ್ಥಳ: ಡಾ.ರವಿಕುಮಾರ್ ಕ್ಲಿನಿಕ್, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ.ಎಂ.ಎನ್. ಚಿಕ್ಕಮಾಧು, ಪ್ರಸ್ತುತಿ: ಡಾ.ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸರ್ಕೋವಮ–ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.10 ನಮ್ಮ ಆರೋಗ್ಯ– ಅಧಿಕ ರಕ್ತದೊತ್ತಡ ಮತ್ತು ಸಕ್ಕರ್ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವಿಕೆಗೆ ಕಾರಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಪಿ. ಹರಿದಾಸ್ ಉಪಾಧ್ಯ ಅವರೊಂದಿಗೆ ಮಾತುಕತೆ ಮತ್ತು ರಿಯಾಕ್ಟಿವ್ ಆರ್ಥ್ರೈಟಿಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ರುಮೆಟಾಲಜಿಸ್ಟ್ ಡಾ. ಕೆ.ಎನ್. ಸಂಗೀತಾ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಮಹಿಳಾ ಸಾಹಿತ್ಯರಂಗ ಪತ್ರಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ .ಬಿ., 4.30 ವೃತ್ತಿ ಮಾರ್ಗದರ್ಶನ ಡಿಪ್ಲೋಮಾ ಇನ್ ಕೋ–ಆಪರೇಟಿವ್, ಮ್ಯಾನೇಜ್‌ಮೆಂಟ್ ಕೋರ್ಸ್ ಕುರಿತು ಮೈಸೂರಿನ ಕರ್ನಾಟಕ ಇನ್ ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್ ಮೆಂಟ್ ಸಂಸ್ಥೆಯ ಪ್ರಾಂಶುಪಾಲರಾದ ಪುಟ್ಟಸ್ವಾಮಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, 7.20 ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಸತ್ ಸಮೀಕ್ಷಾ, 8.15 ಸಂಧ್ಯಾರಾಗ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ನಾಳೆ ಕಾರ್ಗಿಲ್ ವಿಜಯೋತ್ಸವ



ಮೈಸೂರು,ಜು.24(ಎಂಟಿವೈ)– ಕಾರ್ಗಿಲ್ ವಿಜಯೋತ್ಸವದ ಅಂಗವಾಗಿ ಜು.26ರಂದು ಬೆಳಗ್ಗೆ 10 ಗಂಟೆಗೆ ಮೆಟ್ರೋಪೋಲ್ ವೃತ್ತದಿಂದ ಬೈಕ್ ರ್ಯಾಲಿ ಹಾಗೂ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ವಿಜಯೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1999ರಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಕಾರ್ಗಿಲ್ ಯುದ್ಧದಲ್ಲಿ ಐತಿಹಾಸಿಕ ಗೆಲುವು ಸಾಧಿಸಿತ್ತು. ಈ ಗೆಲುವಿನಲ್ಲಿ ಭಾರತೀಯ ಯೋಧರು ಶೌರ್ಯ ಪ್ರದರ್ಶಿಸಿ ದೇಶಕ್ಕೆ ಗೆಲುವು ತಂದಿದ್ದರು. ಈ ಹಿನ್ನೆಲೆಯಲ್ಲಿ ಕಾರ್ಗಿಲ್ ವಿಜಯೋತ್ಸವ ಮೂಲಕ ಹೆಮ್ಮೆಯ ಭಾರತೀಯ ಯೋಧರನ್ನು ಸ್ಮರಿಸುವ ನಿಟ್ಟಿನಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ, ರೋಟರಿ ಕ್ಲಬ್ ಆಫ್ ಹೆರಿಟೇಜ್ ವತಿಯಿಂದ ಜು.26ರಂದು ಬೆಳಗ್ಗೆ 10ಕ್ಕೆ ಮೈಸೂರಲ್ಲಿ ಕಾರ್ಗಿಲ್ ವಿಜಯ ದಿವಸ್ ಆಯೋಜಿಸಿದೆ. 500 ಮಾಜಿ ಸೈನಿಕರು ಮತ್ತು ಆಸಕ್ತ ನಾಗರಿಕರು ಬೈಕ್ ರ್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮೆಟ್ರೋಪೋಲ್ ವೃತ್ತದಿಂದ ಹೊರಟು ರೈಲ್ವೆ ನಿಲ್ದಾಣ, ಆಯುರ್ವೇದ ಆಸ್ಪತ್ರೆ, ಸುಭಾಷ್‌ಚಂದ್ರ ವೃತ್ತ, ಅಬ್ದುಲ್ ಕಲಾಂ ಆಜಾದ್ ವೃತ್ತ, ಟಿ.ಎಸ್.ನರಸಿಂಹಸ್ವಾಮಿ ವೃತ್ತ, ಬಿಎಂ ರಸ್ತೆ, ಫೌಂಟೇನ್ ವೃತ್ತ, ಡಾ.ಅಂಬೇಡ್ಕರ್ ವೃತ್ತ, ಅಬ್ಬಾ ರಸ್ತೆ, ವೆಂಕಟಲಿಂಗಯ್ಯ ವೃತ್ತ, ಥಿಯೋಬಾಲ್ಡ್ ರಸ್ತೆ, ಹುತಾತ್ಮ ಹೇಮಚಂದ್ರ ವೃತ್ತ, ಹಾರ್ಡಿಂಗ್ ವೃತ್ತ, ಬಿ.ಎನ್. ರಸ್ತೆ, ಗನ್ ಹೌಸ್ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ, ಮುಡಾ ವೃತ್ತದ ಮೂಲಕ ಸಾಗಿ ಜಗನ್ಮೋಹನ ಅರಮನೆ ಬಳಿ ಸಮಾರೋಪಗೊಳ್ಳಲಿದೆ ಎಂದರು.

ಬಳಿಕ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಡೆಯುವ ವಿಜಯೋತ್ಸವದ ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ಪ್ರಭಾಕರ್, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ರೊ.ಎಂ.ಎಸ್.ರಾಜು ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ನಟರಾಜು, ಉಪಾಧ್ಯಕ್ಷ ನೀಲಕಂಠಕುಮಾರ್ ಶೆಟ್ಟಿ, ರೋಟರಿ ಹೆರಿಟೇಜ್ ಅಧ್ಯಕ್ಷ ಎಂ.ಎಸ್.ರಾಜು ಇದ್ದರು.

ಆ.17, ಪ.ಜಾತಿ ವಧು–ವರರ ಸಮಾವೇಶ

ಮೈಸೂರು,ಜು.24(ಜಿಎ)–ನವೋದಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಆ.17ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಬಲ್ಲಾಳ್ ವೃತ್ತದ ಬಳಿ ಇರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಪರಿಶಿಷ್ಟ ಜಾತಿ ವಧು–ವರರ (ಬಲಗೈ ಮಾತ್ರ) ಸಮಾವೇಶ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ಎ.ಎಂ.ಉಮೇಶ್ ಚಂದ್ರ ಈ ವಿಷಯ ತಿಳಿಸಿ, ಅಂದು ಜ್ಞಾನಪ್ರಕಾಶ ಸ್ವಾಮೀಜಿ ಸಮಾವೇಶದ ಸಾನ್ನಿಧ್ಯ ವಹಿಸುವರು. ಮಾಜಿ ಮೇಯರ್ ಪುರುಷೋತ್ತಮ್, ಡಾ.ಡಿ.ಜಗನ್ನಾಥ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪೋಷಕರಿಗೆ ತಮ್ಮ ಪುತ್ರ, ಪುತ್ರಿಗೆ ಉತ್ತಮ ಸಂಗಾತಿ ಹುಡುಕಲು ಸಹಾಯವಾಗಲೆಂದು ಈ ಸಮಾವೇಶ ಆಯೋಜಿಸಲಾಗಿದೆ. ಪೂರ್ವ ನೋಂದಣಿ ಕಡ್ಡಾಯವಾಗಿದ್ದು, ಪ್ರತ್ಯೇಕ ಶುಲ್ಕವಿದೆ. ಹೆಚ್ಚಿನ ಮಾಹಿತಿಗೆ ದೂ. 90358 22341ನ್ನು ಸಂಪರ್ಕಿಸಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಪ್ರದೀಪ್‌ಕುಮಾರ್, ನವಿಲೂರು ರಂಗಸ್ವಾಮಿ, ರಾಘವೇಂದ್ರ ಸ್ವರೂಪ್, ಸಿ.ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ಸಾರಿಗೆ ಬಸ್ ಹರಿದು ಸ್ಕೂಟರ್ ಸವಾರ ಸಾವು

ಮೈಸೂರು, ಜು.24(ಬಿಎಲ್‌ಯು)– ಸಾರಿಗೆ ಬಸ್ ಹರಿದು ಸ್ಕೂಟರ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮೈಸೂರಿನ ವಿವೇಕಾನಂದನಗರದಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದೆ.



ನಗರದ ಶ್ರೀರಾಂಪುರ ನಿವಾಸಿ ಡಿ.ಜೆ. ಪಾರ್ಶ್ವನಾಥಯ್ಯ (70) ಮೃತಪಟ್ಟ ವೃದ್ಧರು. ಅವರು ಹಾಲು ಮತ್ತು ತರಕಾರಿ ಖರೀದಿಸಿ ಎಲೆಕ್ಟ್ರಿಕ್ ಸ್ಕೂಟರ್ (ಕೆಎ 09 ಜಿಎ 2829) ನಲ್ಲಿ ಹೋಗುವಾಗ ಪಕ್ಕದಲ್ಲಿ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ (ಕೆಎ 57 ಎಫ್ 1658) ಬಸ್‌ಗೆ ಸ್ಕೂಟರ್ ತಾಗಿದೆ. ಈ ವೇಳೆ ನಿಯಂತ್ರಣ ಕಳೆದುಕೊಂಡ ಪಾರ್ಶ್ವನಾಥಯ್ಯ ಅವರು ಬಲಗಡೆಗೆ ಬಿದ್ದಿದ್ದಾರೆ. ಈ ವೇಳೆ ಬಸ್‌ನ ಹಿಂಬದಿ ಚಕ್ರ ಅವರ ತಲೆ ಮೇಲೆ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪುನಗರ ಸಂಚಾರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಅಲ್ಲದೆ ಬಸ್ ಹಾಗೂ ಪಾರ್ಶ್ವನಾಥಯ್ಯ ಅವರ ಸ್ಕೂಟರ್ ಅನ್ನು ವಶಕ್ಕೆ ಪಡೆದಿದ್ದಾರೆ.

ರಸ್ತೆಬದಿ ವ್ಯಾಪಾರವೇ ಈ ದುರಂತಕ್ಕೆ ಕಾರಣ

ವಿವೇಕಾನಂದನಗರದಲ್ಲಿ ಗುರುವಾರ ಬಸ್‌ನ ಹಿಂದಿನ ಚಕ್ರಕ್ಕೆ ಸಿಲುಕಿ ಸ್ಕೂಟರ್ ಸವಾರನ ಸಾವಿಗೆ ರಸ್ತೆಬದಿ ವ್ಯಾಪಾರ ಕಾರಣ. ಇದರ ವಿರುದ್ಧ ಕ್ರಮ ಕೈಗೊಳ್ಳದ ನಗರಪಾಲಿಕೆ ಅಧಿಕಾರಿಗಳು ಹಾಗೂ ಸಂಚಾರಿ ಪೊಲೀಸರೇ ಕಾರಣ ಎಂದು ಪ್ರತ್ಯಕ್ಷದರ್ಶಿಗಳು ದೂರಿದ್ದಾರೆ. ಸ್ಕೂಟರ್‌ನಲ್ಲಿ ಬಂದು, ತರಕಾರಿ, ಹಾಲು ಖರೀದಿಸಿ ಹೋಗುತ್ತಿದ್ದ ವೃದ್ಧರು ಎಡ ಬದಿ ರಸ್ತೆ ಬದಿ ವ್ಯಾಪಾರ, ಬಲ ಬದಿ ಬಸ್ ಮಧ್ಯದಲ್ಲಿ ಪುಟ್ಟ ಸ್ಥಳಾವಕಾಶದಲ್ಲಿ ಸಾಗುವಾಗ ವಯೋಸಹಜ ದುರ್ಬಲತೆಯಿಂದ ಆಯತಪ್ಪಿ ಬಸ್‌ಗೆ ಸ್ಕೂಟರ್ ತಾಗಿ ಕೆಳಗೆ ಬಿದ್ದರು. ಇಲ್ಲಿ ಹೆಚ್ಚಿನ ಸ್ಥಳಾವಕಾಶವಿದ್ದಿದ್ದರೆ ಪಾಪ, ಈ ಹಿರಿಯ ಜೀವ ಸರಾಗವಾಗಿ ಸಾಗಿ, ಪಾರಾಗುತ್ತಿತ್ತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ನೋವು ತೋಡಿಕೊಂಡಿದ್ದಾರೆ.

ಇಲ್ಲಿ ಮಾತ್ರವಲ್ಲ ಮೈಸೂರಿನಾದ್ಯಂತ ಪಾದಚಾರಿಗಳು ಹಾಗೂ ವಾಹನ ಚಾಲಕರಿಗೆ ಯಾವುದೇ ಕಟ್ಟುನಿಟ್ಟಿಲ್ಲದೆ ನಡೆಯುತ್ತಿರುವ ರಸ್ತೆ ಬದಿ ವ್ಯಾಪಾರವೇ ಸಂಚಕಾರವಾಗಿದೆ. ಇದರ ಬಗ್ಗೆ ಮೈಸೂರು ಪಾಲಿಕೆ ಅಧಿಕಾರಿಗಳಾಗಲೀ, ಸಂಚಾರಿ ಪೊಲೀಸರಾಗಲೀ ಗಮನವನ್ನೇ ಹರಿಸುತ್ತಿಲ್ಲ ಎಂದು ತಮ್ಮ ದುಗುಡ ವ್ಯಕ್ತಪಡಿಸಿದ್ದಾರೆ.

ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬ ಅದ್ಧೂರಿ ಆಚರಣೆ

● ಆರೋಗ್ಯ ತಪಾಸಣಾ ಶಿಬಿರ, ಉದ್ಯೋಗ ಮೇಳ ಆಯೋಜನೆ ● ಕ್ಯಾನ್ಸರ್ ಸೇರಿ ಹಲವು ರೋಗಗಳ ತಪಾಸಣೆ ● ರೋಗಿಗಳಿಗೆ ಉಚಿತ ಔಷಧಿ ವಿತರಣೆ ● ಉದ್ಯೋಗ ಮೇಳದಲ್ಲಿ ಸಾವಿರಾರು ಮಂದಿ ಭಾಗಿ ● ಒಂದೇ ದಿನ 2,062 ಮಂದಿಗೆ ಉದ್ಯೋಗಾವಕಾಶ





ಮೈಸೂರಿನ ಜೆ.ಕೆ.ಮೈದಾನದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಶಾಸಕರಾದ ಹರೀಶ್‌ಗೌಡ, ತನ್ವೀರ್ ಸೇಠ್, ರವಿಶಂಕರ್, ಅನಿಲ್ ಚಿಕ್ಕಮಾದು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್ ಚಿತ್ರದಲ್ಲಿದ್ದಾರೆ. ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಉದ್ಯೋಗಾಕಾಂಕ್ಷಿಗಳನ್ನು (ಬಲಚಿತ್ರ) ಕಾಣಬಹುದು.



ಮೈಸೂರಿನ ಬಂದಂತಮ್ಮ ಕಾಳಮ್ಮ ಆದಿಶಕ್ತಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶಾಸಕ ಕೆ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಬಾಲು, ಗೌರವಾಧ್ಯಕ್ಷ ಕೆ.ಜಿ.ಕೊಪ್ಪಲು ರಾಜಣ್ಣ, ವಿಕ್ರಾಂತ್ ಪಿ.ದೇವೇಗೌಡ, ಶಿವಪ್ಪ, ಬಿ.ಕೆ.ಪ್ರಕಾಶ್, ಶ್ರೀನಿವಾಸ್, ದೀಪು, ಸತ್ಯಮೂರ್ತಿ, ಭಾಸ್ಕರ್ ಇನ್ನಿತರರಿದ್ದರು.



ಶಾಸಕ ಕೆ.ಹರೀಶ್‌ಗೌಡರಿಗೆ ಯುವ ಮುಖಂಡ ಸಿ.ಭಾಸ್ಕರ್, ಕೇಬಲ್ ಪುಟ್ಟರಾಜು, ಪ್ರಸಾದ್, ರಾಜೇಶ್, ಸಂತೋಷ್, ಚಂದ್ರು, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸತೀಶ್, ಅಭಿಷೇಕ್, ಕೌಶಿಕ್, ರಾಜೇಂದ್ರ ಇನ್ನಿತರರು ಹುಟ್ಟುಹಬ್ಬದ ಶುಭ ಹಾರೈಸಿದರು.



ಯುವ ಮುಖಂಡ ಸಿ.ಭಾಸ್ಕರ್ ಅವರು ಶಾಸಕ ಕೆ.ಹರೀಶ್‌ಗೌಡ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರಿಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಮಾದೇಗೌಡ, ಕೆಆರ್ ಮಾರ್ಕೆಟ್ ದಿನೇಶ್, ಹೆಚ್.ಡಿ.ಕೋಟೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಆನಂದ್, ಪಿರಿಯಾಪಟ್ಟಣ ತಾಲೂಕು ಕುರುಬರ ಸಂಘದ ಕಾರ್ಯದರ್ಶಿ ಸುನಿಲ್, ಮುಖಂಡರಾದ ಕಾಂಜೀಗೌಡ, ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಜು.24(ಬಿಎಲ್‌ಯು)– ಮೈಸೂರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ 53ನೇ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಹರೀಶ್ ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಜೆ.ಕೆ.ಮೈದಾನದಲ್ಲಿ ಉದ್ಯೋಗ ಮೇಳ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆ ಸೇರಿದಂತೆ 52 ಆಸ್ಪತ್ರೆಗಳು ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ್ದವು. ಹೃದ್ರೋಗ, ಮಧುಮೇಹ ಸಮಸ್ಯೆ, ನರರೋಗ, ಮೂತ್ರಪಿಂಡ, ಕಿವಿ, ಮೂಗು, ಗಂಟಲು ಸಮಸ್ಯೆ, ಮಾನಸಿಕ ರೋಗ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಗೆ ತಜ್ಞ ವೈದ್ಯರು ತಪಾಸಣೆ ಮಾಡಿ ಉಚಿತ ಔಷಧಿಗಳನ್ನು ನೀಡಿದರು.


ಇದೇ ವೇಳೆ ಉದ್ಯೋಗ ಮೇಳ ಸಹ ನಡೆಯಿತು. ಪ್ರತಿಷ್ಠಿತ ಕಂಪನಿಗಳು, ಕಾರ್ಖಾನೆಗಳು, ಉದ್ಯಮಗಳು, ಕೌಶಲ್ಯ ತರಬೇತಿ ಕೇಂದ್ರಗಳು ಸೇರಿದಂತೆ 110 ಸಂಸ್ಥೆಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದವು. ಸಾವಿರಾರು ಮಂದಿ ಸಂದರ್ಶನದಲ್ಲಿ ಭಾಗವಹಿಸಿದ್ದರು. ಇವರಲ್ಲಿ 2,062 ಅಭ್ಯರ್ಥಿಗಳು ಆಯ್ಕೆಗೊಂಡಿದ್ದಾರೆ. ಅಲ್ಲದೆ ತರಬೇತಿಗೆ 384 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ಇದೇ ವೇಳೆ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ ಅವರು, ಕಳೆದ 2008 ರಿಂದ ಉದ್ಯೋಗ ಮೇಳ ಆಯೋಜಿಸುತ್ತಾ ಬಂದಿದ್ದೇನೆ. ಪ್ರತಿ ವರ್ಷ ಹಲವು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿ ಸಾವಿರಾರು ನಿರುದ್ಯೋಗಿಗಳಿಗೆ ಉದ್ಯೋಗ ನೀಡಿವೆ ಎಂದರು.

ಪ್ರತಿ ವರ್ಷ 8 ಸಾವಿರ ವಿದ್ಯಾರ್ಥಿಗಳು ಮೈಸೂರು ನಗರದಲ್ಲಿ ಪದವಿ ಪಡೆಯುತ್ತಿದ್ದಾರೆ. ಇವರಿಗಾಗಿಯೇ ಉದ್ಯೋಗ ಮೇಳ ಆಯೋಜಿಸಲಾಗಿದೆ. ಇದರಿಂದ ಉದ್ಯೋಗಕ್ಕಾಗಿ ಅಲೆಯುವುದು ತಪ್ಪಲಿದ್ದು, ನಿರುದ್ಯೋಗ ಸಮಸ್ಯೆಯೂ ನಿವಾರಣೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಬಹಳಷ್ಟು ಜನರು ಕಡು ಬಡವರಿರುತ್ತಾರೆ. ಅನಾರೋಗ್ಯದಿಂದ ಬಳಲುವ ಅವರಿಗೆ ಆರೋಗ್ಯ ತಪಾಸಣೆ ಹಾಗೂ ಔಷಧ ಪಡೆಯಲು ಆರ್ಥಿಕ ಸಂಕಷ್ಟ ಕಾಡುತ್ತದೆ. ಆದ ಕಾರಣ ಒಂದೇ ಸೂರಿನಡಿ ಇಂದು ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಇದರಿಂದ ಉಚಿತ ತಪಾಸಣೆಯ ಸೌಲಭ್ಯ ಪಡೆಯುವ ರೋಗಿಗಳಿಗೆ ಉಚಿತ ಔಷಧಿ ಕೂಡ ನೀಡಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಮಾತನಾಡಿದ ಆದಿಚುಂಚನಗಿರಿ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ, ಹರೀಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆ ಉದ್ಯೋಗ ಮೇಳ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿರುವುದು ಒಳ್ಳೆಯ ಕಾರ್ಯಕ್ರಮ. ಇಂತಹ ಕಾರ್ಯಕ್ರಮ ಇತರರಿಗೂ ಮಾದರಿಯಾಗಿದ್ದು, ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.



ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಅಧ್ಯಕ್ಷ ಎಸ್.ಬಸವಣ್ಣ, ಶಾಸಕ ಹರೀಶ್ ಗೌಡರಿಗೆ ಹಾರ ಹಾಕಿ ಹುಟ್ಟುಹಬ್ಬದ ಶುಭ ಕೋರಿದರು. ನೃತ್ಯ ನಿರ್ದೇಶಕ ನಂದಕುಮಾರ್ ಇತರರು ಇದ್ದರು.

ನಂತರ ಮೌಲ್ವಿ ಮೌಲಾನ ಉಸ್ಮಾನ್ ಷರೀಫ್ ಸರ್ ಖಾಜಿ ಅವರು ಮಾತನಾಡಿ, ಜನಪರ ಕೆಲಸ ಮಾಡುವ ಹರೀಶ್ ಗೌಡ ಅವರಿಗೆ ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಒಳ್ಳೆಯ ಸ್ಥಾನಮಾನ ದೊರೆಯಲಿದೆ ಎಂದು ಹಾರೈಸಿದರು.

ತರುವಾಯ ಮಾತನಾಡಿದ ಶಾಸಕ ತನ್ವೀರ್ ಸೇಠ್ ಅವರು, ನಮಗೆ ಇಂತಹ ಉದ್ಯೋಗವೇ ಬೇಕು ಎಂದು ಕಾಲ ಹರಣ ಮಾಡುವ ಬದಲು, ಸಿಕ್ಕ ಉದ್ಯೋಗದಲ್ಲಿ ದುಡಿಮೆ ಮಾಡಿ ಆರ್ಥಿಕ ಸಂಕಷ್ಟದಿಂದ ಮುಕ್ತವಾಗಬೇಕು ಎಂದು ಸಲಹೆ ನೀಡಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಶಾಸಕ ಹರೀಶ್‌ಗೌಡ ಅವರು ಕಳೆದ ಎರಡು ವರ್ಷದ ಅವಧಿಯಲ್ಲಿ 900 ಕೋಟಿ ರೂ. ಅನುದಾನ ತಂದು ಚಾಮರಾಜ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಜನಪರ ಕೆಲಸ ಮಾಡುತ್ತಿರುವ ಹರೀಶ್‌ಗೌಡರ ಜನಪ್ರಿಯತೆಗೆ ಇಲ್ಲಿ ಸೇರಿರುವ ಅಪಾರ ಜನಸ್ತೋಮವೇ ನಿದರ್ಶನ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಹರೀಶ್ ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ವ್ಯಾಪಾರಸ್ಥರಿಗೆ 30 ತಳ್ಳುವ ಗಾಡಿ ಹಾಗೂ 175 ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಯಿತು. ರವಿಶಂಕರ್, ಅನಿಲ್ ಚಿಕ್ಕಮಾದು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ಇತಿಹಾಸ ತಜ್ಞ ಪ್ರೊ.ನಂಜರಾಜೇ ಅರಸ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಮೇಯರ್‌ಗಳಾದ ಪುಷ್ಪಲತಾ, ಚಿಕ್ಕಣ್ಣ, ಮೋದಾಮಣಿ, ಮಂಚೇಗೌಡನಕೊಪ್ಪಲು ಮುಖಂಡರಾದ ರವಿ(ಡೆಲ್ಲಿ), ಕೇಬಲ್ ಪುಟ್ಟರಾಜು, ಮಂಜು, ಪ್ರಸಾದ್, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಾಸಕ ಹರೀಶ್‌ಗೌಡರ ಹುಟ್ಟುಹಬ್ಬ; ಅಭಿಮಾನಿಗಳಿಂದ ಭರ್ಜರಿ ಬಾಡೂಟ

ಮೈಸೂರು, ಜು. 24– ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಯುವ ಬಳಗ ಹಾಗೂ ಅವರ ಅಭಿಮಾನಿಗಳು ದೇವರಾಜ ಅರಸು ರಸ್ತೆಯಲ್ಲಿ ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ ನಂತರ ಸಾರ್ವಜನಿಕರಿಗೆ ಭರ್ಜರಿ ಬಾಡೂಟ ಬಡಿಸಿದರು. ಇದಕ್ಕೆ ಶಾಸಕ ಹರೀಶ್‌ಗೌಡ ಚಾಲನೆ ನೀಡಿದರು.



ಬಳಿಕ ಮಾತನಾಡಿದ ಅವರು, ಬಡವರಿಗೆ ಸಹಾಯ ಮಾಡುವ ಸದವಕಾಶ ದೊರೆತಿದ್ದು, ನನಗೆ ತೃಪ್ತಿ. ಅದರಲ್ಲೇ ಧನ್ಯತೆ ಇರುವುದು. ಅಧಿಕಾರ ಇರಲಿ, ಬಿಡಲಿ, ಮೊದಲಿಂದಲೂ ಜನರ ಸಮಸ್ಯೆಗೆ ಸ್ಪಂದಿಸುತ್ತಾ ಬಂದಿದ್ದೇನೆ. ಮುಂದಕ್ಕೂ ನಿಮ್ಮ ಜೊತೆ ನಿರಂತರವಾಗಿ ಸಂಪರ್ಕದಲ್ಲಿ ಇರುತ್ತೇನೆ. ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ನನ್ನ ಜನುಮ ದಿನದ ಶುಭ ಕೋರಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು ತಿಳಿಸಿದರು.

ಮೈಸೂರು ಯುವ ಬಳಗದ ಅಧ್ಯಕ್ಷ ನವೀನ್, ರಾಮರಾಜ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಜಿ.ರಾಘವೇಂದ್ರ ಸಂದೀಪ್, ರಾಮಕೃಷ್ಣ ಗುರುರಾಜ್, ಸಂತೋಷ್, ಪ್ರಶಾಂತ್, ಪ್ರಮೋದ್, ನಿತಿನ್, ರವಿಚಂದ್ರ ಎಸ್.ಎನ್.ರಾಜೇಶ್, ಕುಮಾರ್, ಲೋಕೇಶ್, ಹರ್ಷ ರಘು ಮತ್ತಿತರರು ಈ ವೇಳೆ ಉಪಸಿತರಿದ್ದರು.

ದೇಶ - ವಿದೇಶ

ರಷ್ಯಾದ ವಿಮಾನ ಪತನ: ಐವರು ಮಕ್ಕಳು ಸೇರಿ 49 ಮಂದಿ ಸಾವು




ಮಾಸ್ಕೋ: ಚೀನಾದ ಗಡಿಯಲ್ಲಿ ರಷ್ಯಾದ ಆಂಟೋನೊವ್–24 ವಿಮಾನ (An–24) ಪತನಗೊಂಡಿದ್ದು, ಆರು ಮಂದಿ ಸಿಬ್ಬಂದಿ ಸೇರಿದಂತೆ 49 ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ವಿಮಾನದ ಅವಶೇಷಗಳು ಅಮುರ್ ಪ್ರದೇಶದ ಟಿಂಡಾ ನಗರದ ಬಳಿ ಪತ್ತೆಯಾಗಿವೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ರಷ್ಯಾ–ಚೀನಾದ ಗಡಿಯಲ್ಲಿರುವ ಬ್ಲಾಗೊವೆಶ್‌ಚೆನ್ಸ್ಕ ನಗರದಿಂದ ಟಿಂಡಾ ನಗರಕ್ಕೆ ಹೋಗುತ್ತಿದ್ದ ವೇಳೆ ವಿಮಾನ ಸಂಪರ್ಕ ಕಳೆದುಕೊಂಡಿದೆ. ಟಿಂಡಾದಿಂದ 15 ಕಿಲೋಮೀಟರ್ ದೂರದಲ್ಲಿ ಇಳಿಜಾರು ಪ್ರದೇಶದಲ್ಲಿ ವಿಮಾನದ ಅವಶೇಷಗಳು ಪತ್ತೆಯಾಗಿವೆ. ವಿಮಾನ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗಾರ ಏರ್‌ಲೈನ್ಸ್ ನಿರ್ವಹಿಸುತ್ತಿದ್ದ ಈ ವಿಮಾನದಲ್ಲಿ 5 ಮಕ್ಕಳು ಸೇರಿದಂತೆ 43 ಪ್ರಯಾಣಿಕರು, 6 ಸಿಬ್ಬಂದಿ ಇದ್ದರು ಎಂದು ಪ್ರಾದೇಶಿಕ ಗವರ್ನರ್ ವಾಸಿಲಿ ಓರ್ಲೋವ್ ತಿಳಿಸಿದ್ದಾರೆ.

ಪಿಸ್ತೂಲ್, ಹೆರಾಯಿನ್ ಸಾಗಿಸುತ್ತಿದ್ದ ಪಾಕ್‌ನ 6 ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್



ಚಂಡೀಗಢ: ಪಂಜಾಬ್‌ನ ಅಂತರರಾಷ್ಟ್ರೀಯ ಗಡಿ ಮೂಲಕ ಭಾರತದತ್ತ ಸಾಗಿ ಬರುತ್ತಿದ್ದ ಪಾಕಿಸ್ತಾನದ ಆರು ಡ್ರೋನ್‌ಗಳನ್ನು ಗಡಿ ಭದ್ರತಾ ಪಡೆ ಸಿಬ್ಬಂದಿ (ಬಿಎಸ್‌ಎಫ್) ಹೊಡೆದುರುಳಿಸಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರೊಬ್ಬರು ತಿಳಿಸಿದ್ದಾರೆ.

ಅಮೃತಸರದ ಮೋಧೆ ಗ್ರಾಮದ ವ್ಯಾಪ್ತಿಯಲ್ಲಿ 5 ಡ್ರೋನ್‌ಗಳು ಕಾಣಿಸಿಕೊಂಡಿದ್ದವು. ಗಸ್ತಿನಲ್ಲಿದ್ದ ಸಿಬ್ಬಂದಿ ಗುಂಡು ಹಾರಿಸಿ ಅವುಗಳನ್ನು ನೆಲಕ್ಕುರುಳಿಸಿದ್ದು, ಮೂರು ಪಿಸ್ತೂಲ್‌ಗಳು, ಮೂರು ಮ್ಯಾಗಜೀನ್‌ಗಳು ಮತ್ತು ಒಂದು ಕೆಜಿಗೂ ಹೆಚ್ಚು ತೂಕದ 4 ಹೆರಾಯಿನ್ ಪ್ಯಾಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ಮುಂಜಾನೆ ಅಟ್ಟಾರಿ ಬಳಿ ಮತ್ತೊಂದು ಡ್ರೋನ್ ಅನ್ನು ಹೊಡೆದುರುಳಿಸಿದ್ದು, 2 ಮ್ಯಾಗಜೀನ್ ವಶಪಡಿಸಿಕೊಳ್ಳಲಾಗಿದೆ. ತರಣ್ ಜಿಲ್ಲೆಯ ದಾಲ್ ಗ್ರಾಮದ ಬಳಿ ನಡೆದ ಕಾರ್ಯಾಚರಣೆ ವೇಳೆ ಭತ್ತದ ಗದ್ದೆಯಲ್ಲಿ ಪಿಸ್ತೂಲ್ ಮತ್ತು ಮ್ಯಾಗಜೀನ್ ಬಿಡಿ ಭಾಗಗಳನ್ನು ವಶಪಡಿಸಿಕೊಂಡಿದ್ದೇವೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

5 ವರ್ಷಗಳ ನಂತರ ಚೀನಾ ನಾಗರಿಕರಿಗೆ ಪ್ರವಾಸಿ ವೀಸಾ ಪುನರಾರಂಭಿಸಿದ ಭಾರತ



ಬೀಜಿಂಗ್: ಗಾಲ್ವಾನ್ ಕಣಿವೆಯಲ್ಲಿ ನಡೆದ ಮಿಲಿಟರಿ ಘರ್ಷಣೆ ನಂತರ ತೀವ್ರ ಒತ್ತಡಕ್ಕೆ ಸಿಲುಕಿದ್ದ ದ್ವಿಪಕ್ಷೀಯ ಸಂಬಂಧವನ್ನು ಸುಧಾರಿಸುವ ಪ್ರಯತ್ನದ ಭಾಗವಾಗಿ ಈ ವಾರದಿಂದ ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವುದನ್ನು ಪುನರಾರಂಭಿಸುವುದಾಗಿ ಭಾರತ ಘೋಷಿಸಿದೆ. ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಭಾರತ 2020ರಲ್ಲಿ ಚೀನೀ ಪ್ರಜೆಗಳಿಗೆ ಪ್ರವಾಸಿ ವೀಸಾ ನೀಡುವುದನ್ನು ಸ್ಥಗಿತಗೊಳಿಸಿತ್ತು. ಬಳಿಕ ಪೂರ್ವ ಲಡಾಖ್ ಗಡಿ ವಿವಾದದ ಹಿನ್ನೆಲೆಯಲ್ಲಿ ಈ ನಿರ್ಬಂಧಗಳು ಮುಂದುವರೆದಿದ್ದವು. ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಗುರುವಾರದಿಂದ ಚೀನಾ ಪ್ರಜೆಗಳು ಪ್ರವಾಸಿ ವೀಸಾಗೆ ಅರ್ಜಿ ಸಲ್ಲಿಸಬಹುದು. ಭಾರತೀಯ ರಾಯಭಾರ ಕಚೇರಿಯು ತನ್ನ ಅಧಿಸೂಚನೆಯಲ್ಲಿ ಪ್ರವಾಸಿ ವೀಸಾಗಳಿಗೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಪ್ರಕ್ರಿಯೆ, ಬೀಜಿಂಗ್, ಶಾಂಘೈ ಮತ್ತು ಗುವಾಂಗ್‌ಝೌನಲ್ಲಿರುವ ಭಾರತೀಯ ವೀಸಾ ಅರ್ಜಿ ಕೇಂದ್ರಗಳಲ್ಲಿ ಚೀನೀ ಪ್ರಜೆಗಳು ಸಲ್ಲಿಸಬೇಕಾದ ದಾಖಲೆಗಳನ್ನು ಸಹ ವಿವರಿಸಿದೆ. ಪ್ರವಾಸಿ ವೀಸಾ ನೀಡುವುದನ್ನು ಪುನರಾರಂಭಿಸುವ ಭಾರತದ ನಿರ್ಧಾರವನ್ನು ಚೀನಾ ವಿದೇಶಾಂಗ ಸಚಿವಾಲಯ ಸ್ವಾಗತಿಸಿದೆ.

ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಟಿಎಂಸಿ ಕಾರ್ಯಕರ್ತನ ಕೊಲೆ



ಕೋಲ್ಕತ್ತ: ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಭರತ್ ಪುರದಲ್ಲಿ ಟಿಎಂಸಿ ಕಾರ್ಯಕರ್ತನೊಬ್ಬನನ್ನು ಅಪರಿಚಿತ ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಸ್ತಿ ಘೋಷ್ ಕೊಲೆಯಾದ ಕಾರ್ಯಕರ್ತ. ಬುಧವಾರ ರಾತ್ರಿ ಮನೆಗೆ ಹಿಂತಿರುಗುತ್ತಿದ್ದಾಗ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಸಸ್ತಿ ಘೋಷ್ ಮೇಲೆ ದಾಳಿ ನಡೆಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಬೀದಿ ಬದಿಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಘೋಷ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಸಸ್ತಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು ಎಂದು ತಿಳಿಸಿದ್ದಾರೆ. ಆಸ್ತಿ ವಿಚಾರಕ್ಕೆ ಕೊಲೆ ನಡೆದಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಟಿಎಂಸಿಗೆ ಬೆಂಬಲ ವ್ಯಕ್ತಪಡಿಸಿದ್ದಕ್ಕೆ ಕೊಲೆ ನಡೆದಿದೆ ಎಂದು ಮೃತನ ಕುಟುಂಬ ಆರೋಪಿಸಿದೆ.

ಮತ್ತೊಂದು ಘಟನೆಯಲ್ಲಿ, ದಕ್ಷಿಣ 24 ಪರಗಣ ಜಿಲ್ಲೆಯ ಕಾಕ್‌ದ್ವೀಪ್ ಪ್ರದೇಶದ ಮಧುಸೂದನ್‌ಪುರದಲ್ಲಿ ಪಂಚಾಯತ್ ಸದಸ್ಯರೊಬ್ಬರ ಸೋದರಳಿಯನನ್ನು ಕೊಲೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾಸಗಿ ಅಭಯಾರಣ್ಯದಲ್ಲಿ ಆನೆ ದಾಳಿಯಿಂದ ಮೃತಪಟ್ಟ ಉದ್ಯಮಿ



ಬೆಂಗಳೂರು: ದಕ್ಷಿಣ ಆಫ್ರಿಕಾದ ಕೇಪ್ ಟೌನ್ ಬಳಿಯ ತಮ್ಮದೇ ಸಹ ಒಡೆತನದ ಖಾಸಗಿ ಅಭಯಾರಣ್ಯದಲ್ಲಿ ಉದ್ಯಮಿಯೊಬ್ಬರು ಆನೆ ದಾಳಿಯಿಂದ ಮೃತಪಟ್ಟಿರುವ ಘಟನೆ ನಡೆದಿದೆ. ಫ್ರಾಂಕೋಯಿಸ್ ಕ್ರಿಶ್ಚಿಯನ್ ಕಾನ್ರಾಡಿ (39) ಮೃತ ದುರ್ದೈವಿ. ಅವರು ಪತ್ನಿ ಹಾಗೂ ಮೂವರು ಮಕ್ಕಳನ್ನು ಅಗಲಿದ್ದಾರೆ.

ಗೊಂಡವಾನಾ ಎಂಬ ಖಾಸಗಿ ಅಭಯಾರಣ್ಯದಲ್ಲಿ ಜುಲೈ 22ರಂದು ಬೆಳಿಗ್ಗೆ ಕಾನ್ರಾಡಿ ಅವರು ರೆಸಾರ್ಟ್ ಕೋಣೆ ಬಳಿ ಬಂದಿದ್ದ ಆನೆಗಳನ್ನು ಓಡಿಸಲು ಮುಂದಾದರು. ಈ ವೇಳೆ ದೊಡ್ಡ ಆನೆಯೊಂದು ಕಾನ್ರಾಡಿ ಅವರ ಮೇಲೆ ದಾಳಿ ಮಾಡಿ ದಂತದಿಂದ ತಿವಿದು ಕಾಲಿನಿಂದ ತುಳಿದು ಸಾಯಿಸಿದೆ. ಸಿಬ್ಬಂದಿ ಕಾನ್ರಾಡಿ ಅವರನ್ನು ಉಳಿಸಲು ಸಾಕಷ್ಟು ಪ್ರಯತ್ನಪಟ್ಟರೂ ಕೆರಳಿದ್ದ ಆನೆ ಆ ಸಿಬ್ಬಂದಿಯನ್ನು ಬಳಿ ಬರಲು ಬಿಡಲಿಲ್ಲ ಎಂದು ವರದಿಯಾಗಿದೆ.

ಕಾನ್ರಾಡಿ ಅವರು ಗೊಂಡವಾನಾ ಎಂಬ ಖಾಸಗಿ ಅಭಯಾರಣ್ಯದ ಸಿಇಒ ಹಾಗೂ ಸಹ ಮಾಲೀಕರಾಗಿದ್ದರು. Caylix Group ಎಂಬ ಬಹುಕೋಟಿ ಮೌಲ್ಯದ ಸ್ಪೋರ್ಟ್ ಮ್ಯಾನೇಜ್‌ಮೆಂಟ್ ಕಂಪನಿಯ ಮುಖ್ಯಸ್ಥರೂ ಆಗಿದ್ದರು.

ಮೈಸೂರು ಮಿತ್ರ ಶುಕ್ರವಾರ 25 ಜುಲೈ 2025

ಅರ್ಜಿ ಸಮಿತಿ ಅಧ್ಯಕ್ಷ ರುದ್ರಪ್ಪ ಲಮಾಣಿ ಅವರಿಂದ ಮಡಿಕೇರಿಯ ತಡೆಗೋಡೆ ಕಾಮಗಾರಿ ಪರಿಶೀಲನೆ

ತಂತ್ರಜ್ಞಾನ, ಮಳೆ ನೀರು ಹರಿಯುವಿಕೆ, ಕಾಮಗಾರಿ ಮೊತ್ತ, ಕಾಮಗಾರಿಗಳ ಪ್ರಗತಿ ಬಗ್ಗೆ ಮಾಹಿತಿ ಸಂಗ್ರಹ

ಮಡಿಕೇರಿ,ಜು.24– ವಿಧಾನಸಭೆಯ ಉಪ ಸಭಾಧ್ಯಕ್ಷರು ಹಾಗೂ ಅರ್ಜಿ ಸಮಿತಿಯ ಅಧ್ಯಕ್ಷ ರುದ್ರಪ್ಪ ಲಮಾಣಿ ಅವರು ನಗರದ ಜಿಲ್ಲಾಡಳಿತ ಕಚೇರಿ ಮುಂಭಾಗ ನಿರ್ಮಿಸಿರುವ ತಡೆಗೋಡೆ ಕಾಮಗಾರಿ ವೀಕ್ಷಿಸಿದರು. ತಡೆಗೋಡೆ ನಿರ್ಮಾಣಕ್ಕೆ ಬಳಸಲಾಗಿರುವ ತಂತ್ರಜ್ಞಾನ, ಕಟ್ಟಡದ ಮಳೆ ನೀರು ಹರಿಯುವಿಕೆಗೆ ಮಾಡಲಾಗಿರುವ ವ್ಯವಸ್ಥೆ, ಕಾಮಗಾರಿಗೆ ವೆಚ್ಚವಾಗಿರುವ ಮೊತ್ತ, ಕಾಮಗಾರಿ ಪ್ರಗತಿ ಮತ್ತಿತರ ವಿಚಾರಗಳ ಕುರಿತು ಲೋಕೋಪಯೋಗಿ ಇಲಾಖೆ ಉನ್ನತ ಅಧಿಕಾರಿಗಳಿಂದ ಮಾಹಿತಿ ಪಡೆದರು.



ಜಿಲ್ಲಾಡಳಿತ ಕಚೇರಿ ಮುಂಭಾಗದ ತಡೆ ಗೋಡೆ ಕಾಮಗಾರಿಯನ್ನು ವೀಕ್ಷಿಸುತ್ತಿರುವ ಉಪ ಸಭಾಧ್ಯಕ್ಷರು ಮತ್ತು ಅರ್ಜಿ ಸಮಿತಿಯ ಅಧ್ಯಕ್ಷ ರುದ್ರಪ್ಪ ಲಮಾಣಿ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅರ್ಜಿ ಸಮಿತಿಯ ಅಧ್ಯಕ್ಷ ರುದ್ರಪ್ಪ ಲಮಾಣಿ, ಈ ಹಿಂದೆ ಕಾಮಗಾರಿ ನಡೆಸಿದ ಸಂದರ್ಭ ಅದರ ಗುಣಮಟ್ಟ ಮತ್ತು ಜಿಲ್ಲಾಡಳಿತ ಕಟ್ಟಡದ ಭದ್ರತೆ ಕುರಿತು ಶಾಸಕ ಮಂತರ್ ಗೌಡ ಅವರು ಆತಂಕ ವ್ಯಕ್ತಪಡಿಸಿದ್ದರು. ಈ ಹಿಂದೆ ಕೂಡ ಅರ್ಜಿ ಸಮಿತಿ ಸ್ಥಳಕ್ಕಾಗಮಿಸಿ ತಡೆಗೋಡೆ ಪರಿಶೀಲನೆ ನಡೆಸಿದೆ. ಆ ವೇಳೆ ಲೋಕೋಪಯೋಗಿ ಹಿರಿಯ ಅಧಿಕಾರಿಗಳು ವಿನ್ಯಾಸವನ್ನು ಬದಲಿಸಿ ನೂತನ ತಂತ್ರಜ್ಞಾನದೊಂದಿಗೆ ಕಾಮಗಾರಿ ನಡೆಸಲಾಗುತ್ತದೆ ಎಂದು ಮಾಹಿತಿ ನೀಡಿದ್ದರು. ಇದೀಗ ನೂತನ ತಂತ್ರಜ್ಞಾನದಲ್ಲಿ ತಡೆಗೋಡೆಯ ಬಹುತೇಕ ಕಾಮಗಾರಿ ಮುಕ್ತಾಯ ಕಂಡಿದೆ. ಇನ್ನು ಶೇ.15ರಷ್ಟು ಕಾಮಗಾರಿ ನಡೆಸಲು ಬಾಕಿ ಉಳಿದಿದ್ದು, ಮಳೆಗಾಲ ಮುಕ್ತಾಯವಾದ ಬಳಿಕ ಅದನ್ನು ಕೂಡ ಪೂರ್ಣಗೊಳಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.


ಶಾಸಕ ಮಂತರ್ ಗೌಡ ಮಾತನಾಡಿ, 2023ರಲ್ಲಿ ಜಿಲ್ಲಾಡಳಿತ ಭವನ ತಡಗೋಡೆ ಕಾಮಗಾರಿ ಕುರಿತು ವಿಧಾನ ಸಭಾ ಅರ್ಜಿ ಸಮಿತಿಯ ಗಮನ ಸೆಳೆಯಲಾಗಿತ್ತು. ವಿಧಾನ ಸಭೆಯಲ್ಲೂ ಈ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿತ್ತು. ಆ ವೇಳೆ ನೂತನ ತಂತ್ರಜ್ಞಾನ ಬಳಸಿ ತಡೆಗೋಡೆ ನಿರ್ಮಿಸುವುದಾಗಿ ಸಂಬಂಧಿಸಿದ ಇಲಾಖೆ ಮಾಹಿತಿ ನೀಡಿತ್ತು. ಅದರಂತೆ ವಿವಿಧ ತಂತ್ರಜ್ಞ ಸಂಸ್ಥೆಗಳು ನೀಡಿದ ವಿನ್ಯಾಸದಂತೆ ಇದೀಗ ತಡೆಗೋಡೆ ನಿರ್ಮಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭ ಅರ್ಜಿ ಸಮಿತಿ ಸದಸ್ಯರೂ ಹಾಗೂ ಶಾಸಕರುಗಳಾದ ಎಸ್.ಸುರೇಶ ಕುಮಾರ, ಎಸ್.ಮುನಿರಾಜು, ಎ.ಮಂಜು, ಹೆಚ್.ಡಿ.ತಮ್ಮಯ್ಯ, ಕೆ.ಎಸ್.ಆನಂದ್, ಮಹೇಶ್ ಟೆಂಗಿನಕಾಯಿ, ಅವಿನಾಶ ಜಾದವ್, ಯು.ಬಿ. ಬಣಕಾರ, ಸಿ.ಎನ್.ಬಾಲಕೃಷ್ಣ ಡಿಸಿ ವೆಂಕಟರಾಜ್, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಲೋಕೋಪಯೋಗಿ ಇಲಾಖೆ ರಾಜ್ಯ ಕಾರ್ಯದರ್ಶಿ ಸತ್ಯನಾರಾಯಣ ಹಾಗೂ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಅತ್ತೆ, ಸೊಸೆ ಮೇಲೆ ಹಲ್ಲೆ ನಡೆಸಿ ಚಿನ್ನದ ಸರ ದೋಚಿದ ಪ್ರಕರಣಕ್ಕೆ ತಿರುವು

ಅಕ್ಕನ ಗಂಡನೇ ಈ ಸಂಚಿನ ರೂವಾರಿ

ಮಡಿಕೇರಿ,ಜು.24– ನೀರು ಕೇಳುವ ನೆಪದಲ್ಲಿ ಒಂಟಿ ಮನೆಗೆ ನುಗ್ಗಿ ಮನೆಯಲ್ಲಿದ್ದ ಅತ್ತೆ, ಸೊಸೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಚಿನ್ನದ ಸರವನ್ನು ದೋಚಿದ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಪ್ರಕರಣದ ಸೂತ್ರಧಾರಿ ಪಾಲಿಬೆಟ್ಟ ಗ್ರಾಮದ ನಿವಾಸಿ ಮುಜೀದ್ ಎಂಬಾತನನ್ನು ಬಂಧಿಸಲಾಗಿದೆ.



ಮುಜೀದ್

ಜು.21ರಂದು ಬೆಳಗಿನ 9 ಗಂಟೆಯ ವೇಳೆಗೆ ಕೊಂಡಂಗೇರಿಯ ಸಾರಮ್ಮ ಎಂಬವರ ಮನೆಗೆ ನುಗ್ಗಿದ ಪ್ರಮುಖ ಆರೋಪಿ ಮುನಾವರ್ ಎಂಬಾತ ತನಗೆ ಆಯಾಸವಾಗುತ್ತಿದೆ ಎಂದು ಹೇಳಿ ನೀರು ಕೇಳಿ ಕುಡಿದಿದ್ದ. ಮಧ್ಯಾಹ್ನ ವೇಳೆಗೆ ಮತ್ತೆ ಇದೇ ಮನೆಗೆ ಆಗಮಿಸಿದ ಮುನಾವರ್ ಸಾರಮ್ಮ ಅವರು ಮೇಲೆ ಏಕಾಏಕಿ ಚಾಕುವಿನಿಂದ ಹಲ್ಲೆ ನಡೆಸಿದ್ದು, ತಡೆಯಲು ಬಂದ ಸೊಸೆ ಸಫಾನ ಮೇಲೂ ಹಲ್ಲೆ ನಡೆಸಿ ಸಾರಮ್ಮ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಿತ್ತು ವ್ಯಕ್ತಿ ಸ್ಥಳದಿಂದ ಪರಾರಿಯಾಗಿದ್ದ. ಹಾಲಗುಂದದ ತೋಟದ ಬಳಿ ಮಹಿಳೆಯರ ಮೇಲೆ ಹಲ್ಲೆ ಮಾಡಿದ್ದ ಆರೋಪಿ ಮುನಾವರ್‌ನನ್ನು ಗ್ರಾಮಸ್ಥರು ಸೆರೆ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು.

ಪ್ರಕರಣದ ತನಿಖೆ ನಡೆಸಿದ ಸಂದರ್ಭ ಕೃತ್ಯದ ಹಿಂದಿದೆ ಮತ್ತೋರ್ವ ಆರೋಪಿ ಸಂಚು ರೂಪಿಸಿರುವುದು ಪತ್ತೆಯಾಗಿದೆ. ಸಫಾನ ಅವರ ಅಕ್ಕನ ಗಂಡ ಮುಜೀದ್ ಎಂಬಾತ ಆಟೋ ಚಾಲಕನಾಗಿದ್ದು, ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ. ಮುಜೀದ್ ಮುನಾವರ್ ಜೊತೆಯಲ್ಲಿ ಸೇರಿಕೊಂಡು ಶೀಘ್ರದಲ್ಲೇ ಹಣ ಮಾಡುವ ಉದ್ದೇಶದಿಂದ ಮುಜೀದ್ ಮುನಾವರ್‌ಗೆ ಸಾರಮ್ಮ ಅವರ ಮನೆಯಲ್ಲಿರುವ ಚಿನ್ನಾಭರಣ ದರೋಡೆ ಮಾಡುವ ಕುರಿತು 15 ದಿನಗಳ ಮುಂಚೆಯೇ ಯೋಜನೆ ರೂಪಿಸಿದ್ದ.

ಕೃತ್ಯದಲ್ಲಿ ಸಿಗುವ ಚಿನ್ನಾಭರಣಗಳನ್ನು ಹಂಚಿಕೊಳ್ಳುವ ಕುರಿತು ಆರೋಪಿಗಳು ನಿರ್ಧರಿಸಿದ್ದರು. ಅದರಂತೆ ಜು.21ರಂದು ಮುಜೀದ್ ಮುನಾವರ್ ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿದ್ದರು. ಮುಜೀದ್ ಮುನಾವರ್‌ನನ್ನು 2 ಗೌಸ್, 1 ಕತ್ತಿ ಹಾಗೂ 1 ಚಾಕು ಸಹಿತವಾಗಿ ಕಾರಿನಲ್ಲಿ ಕರೆತಂದು ಕೊಂಡಂಗೇರಿಯಲ್ಲಿ ಬಿಟ್ಟಿದ್ದ. ತದನಂತರ ಪೂರ್ವ ನಿಯೋಜಿತದಂತೆ ಮುನಾವರ್ ಸಾರಮ್ಮ ಅವರ ಮನೆಗೆ ನುಗ್ಗಿ ಹಲ್ಲೆ ನಡೆಸಿ ಚಿನ್ನಾಭರಣ ದರೋಡೆ ಮಾಡಿದ್ದ. ಇದೀಗ ಪ್ರಕರಣದ ಮಾಸ್ಟರ್ ಮೈಂಡ್ ಮುಜೀದ್ ಕೂಡ ಪೊಲೀಸ್ ಅತಿಥಿಯಾಗಿದ್ದಾನೆ. ಆರೋಪಿ ಮುಜೀದ್‌ನನ್ನು ಬಂಧಿಸಿರುವ ಪೊಲೀಸರು, ಕೃತ್ಯಕ್ಕೆ ಬಳಸಿದ್ದ ಚಾಕು, ಗೌಸ್ ಮತ್ತು ಕಾರನ್ನು ವಶಕ್ಕೆ ಪಡೆದು ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ನೇಣು ಬಿಗಿದ ಸ್ಥಿತಿಯಲ್ಲಿ ಶಿಕ್ಷಕಿ ಸಾವು

ಕುಟುಂಬದವರ ದೂರಿನನ್ವಯ ಸಂಶಯಾಸ್ಪದ ಸಾವೆಂದು ಪ್ರಕರಣ ದಾಖಲು

ಮಡಿಕೇರಿ: ನೇಣು ಬಿಗಿದ ಸ್ಥಿತಿಯಲ್ಲಿ ಶಿಕ್ಷಕಿಯೊಬ್ಬರು ಮೃತಪಟ್ಟಿರುವ ಘಟನೆ ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ಎಮ್ಮೆಮಾಡು ಗ್ರಾಮದಲ್ಲಿ ನಡೆದಿದೆ. ಎಮ್ಮೆಮಾಡು ಗ್ರಾಮದ ನಿವಾಸಿ ನಜೀರ್ ಎಂಬುವವರ ಪತ್ನಿ ಸಫ್ರೀನಾ ಶೇಕ್(32) ಸಾವನ್ನಪ್ಪಿರುವ ಶಿಕ್ಷಕಿ. ಮೃತರ ಕುಟುಂಬಸ್ಥರ ಆರೋಪದ ಹಿನ್ನೆಲೆ ಇದೊಂದು ಸಂಶಯಾಸ್ಪದ ಸಾವೆಂದು ಪ್ರಕರಣ ದಾಖಲಾಗಿದೆ.



ಸಫ್ರೀನಾ ಶೇಕ್

ಸಫ್ರೀನ ನಾಪೋಕ್ಲುವಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಬುಧವಾರ ಮಧ್ಯರಾತ್ರಿ ಎಮ್ಮೆಮಾಡುವಿನ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಸಫ್ರೀನಾ ಅವರನ್ನು ಪತಿ ನಜೀರ್ ನಾಪೋಕ್ಲುವಿನ ಆಸ್ಪತ್ರೆಗೆ ಕರೆತಂದರಾದರೂ ಅಷ್ಟೊತ್ತಿಗಾಗಲೇ ಸಫ್ರೀನಾ ಮೃತಪಟ್ಟಿದ್ದಾರೆ ಎಂದು ವೈದ್ಯರು ದೃಢಪಡಿಸಿರುವುದಾಗಿ ತಿಳಿದು ಬಂದಿದೆ. ಮರಣೋತ್ತರ ಪರೀಕ್ಷೆಗಾಗಿ ಮೃತ ದೇಹವನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ಸ್ಥಳಾಂತರಿಲಾಗಿದೆ. ಪತಿ ಹಾಗೂ ಪತ್ನಿ ನಡುವೆ ಕಲಹ ನಡೆಯುತ್ತಿತ್ತು ಎಂದು ಆರೋಪಿಸಲಾಗಿದೆ. ಮೃತರ ಸಹೋದರ ರುವೈಸ್ ನೀಡಿದ ದೂರನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ನಾಪೋಕ್ಲು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಭಾಗಮಂಡಲ ಶ್ರೀ ಭಗಂಡೇಶ್ವರ ಸನ್ನಿಧಿಯಲ್ಲಿ ಪೊಲಿಂಕಾನ ಉತ್ಸವ

ಮಡಿಕೇರಿ,ಜು.24– ಭಾಗಮಂಡಲ ಶ್ರೀ ಭಗಂಡೇಶ್ವರ ಸನ್ನಿಧಿಯಲ್ಲಿ ಪೊಲಿಂಕಾನ ಉತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಶ್ರೀ ಮಹಾ ಗಣಪತಿ, ಮಹಾ ವಿಷ್ಣು, ಸುಬ್ರಮಣ್ಯ, ಭಗಂಡೇಶ್ವರ ಗುಡಿಗಳಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಬಾಳೆ ದಿಂಡಿನಿಂದ ಸಿದ್ದಗೊಂಡ ಸುಮಂಗಲಿ ಮಂಟಪವನ್ನು ದೇವಾಲಯದ ಸುತ್ತ ಚಂಡೆ ವಾದ್ಯಗಳ ಸಹಿತ ಪ್ರದಕ್ಷಿಣೆ ನಡೆಸಲಾಯಿತು.

ನಂತರ ದೀಪ ಬೆಳಗಿ, ಮುತ್ಯೆದೆ ಆಭರಣಗಳಾದ ಕರಿಮಣಿ, ತಾಳಿ, ಬಳೆ, ಸೀರೆ, ಬೆಳ್ಳಿ ತಟ್ಟೆ ಸೇರಿದಂತೆ ಹೂವು ಹಣ್ಣುಗಳಿಂದ ಅಲಂಕರಿಸಿ ದೇವಾಲಯದ ಮುಖ್ಯ ದ್ವಾರದ ಮೂಲಕ ನೂರಾರು ಭಕ್ತರ ಸಮ್ಮುಖದಲ್ಲಿ ವಾದ್ಯಗೋಷ್ಠಿಯೊಂದಿಗೆ ಕಾವೇರಿ, ಕನ್ನಿಕೆ, ಸುಜ್ಯೋತಿ ಸಂಗಮಿಸುವ ತ್ರಿವೇಣಿ ಸಂಗಮಕ್ಕೆ ತರಲಾಯಿತು.

ಕಾವೇರಿ ಶಾಂತಳಾಗಿ, ಮಳೆಗಾಲದಲ್ಲಿ ಯಾವುದೇ ಹಾನಿ ಮಾಡದೇ ರೈತರು ಹಾಗೂ ನಾಡಿನ ಜನರ ಬದುಕು ಸುಭೀಕ್ಷವಾಗಲಿ ಎಂದು ಪೂಜೆ ಸಲ್ಲಿಸಿ ಮಂಟಪವನ್ನು ನದಿಯಲ್ಲಿ ತೇಲಿ ಬಿಡಲಾಯಿತು. ಈ ವೇಳೆ ತಲಕಾವೇರಿ ದೇವಾಲಯ ತಕ್ಕ ಮುಖ್ಯಸ್ಥ ಕೋಡಿ ಮೋಟಯ್ಯ, ಭಾಗಮಂಡಲ ದೇವಾಲಯದ ತಕ್ಕ ಮುಖ್ಯಸ್ಥ ಬಳ್ಳಡ್ಕ ಅಪ್ಪಾಜಿ, ದೇವಾಲಯಗಳ ಆಡಳಿತ ಮಂಡಳಿ ಮುಖ್ಯಸ್ಥರು, ಪ್ರಧಾನ ಅರ್ಚಕರು, ಸ್ಥಳೀಯ ಗ್ರಾಮಸ್ಥರು ಹಾಜರಿದ್ದರು.



ಹಾಲು ಉತ್ಪಾದಕರ ಸಂಘಗಳ ಕಾರ್ಯದರ್ಶಿ, ನೌಕರರಿಗೆ ಒಂದು ಲಕ್ಷ ರೂ. ಆರೋಗ್ಯ ವಿಮೆ

ಮನ್‌ಮುಲ್ ನಿರ್ದೇಶಕರಾದ ಯು.ಸಿ.ಶಿವಕುಮಾರ್, ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್‌ಗೆ ಅಭಿನಂದನೆ



ಮನ್‌ಮುಲ್ ನಿರ್ದೇಶಕರಾದ ಯು.ಸಿ.ಶಿವಕುಮಾರ್, ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮನ್‌ಮುಲ್ ನಿರ್ದೇಶಕರು ಮತ್ತು ಸದಸ್ಯರುಗಳು ಉಪಸ್ಥಿತರಿದ್ದರು.

ಮಂಡ್ಯ: ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿ ಹಾಗೂ ನೌಕರರಿಗೆ ಮನ್ಮುಲ್ ವತಿಯಿಂದ ವೇತನ ಹೆಚ್ಚಳ ಮಾಡುವ ಜೊತೆಗೆ 1 ಲಕ್ಷ ರೂಗಳ ಆರೋಗ್ಯ ವಿಮೆ ಜಾರಿ ಮಾಡಲಾಗಿದೆ ಎಂದು ಮನ್ಮುಲ್ ಅಧ್ಯಕ್ಷ ಯು.ಸಿ.ಶಿವಕುಮಾರ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಂಡ್ಯ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಯೂನಿಯನ್, ಮಂಡ್ಯ ಉಪ ಕಚೇರಿಯ ಸಿಬ್ಬಂದಿಗಳು ಹಾಗೂ ಕೃತಕ ಗರ್ಭಧಾರಣೆ ಕಾರ್ಯಕರ್ತರ ಸಹಯೋಗದೊಂದಿಗೆ ಮಂಡ್ಯ ತಾಲೂಕಿನ ಮನ್‌ಮುಲ್ ನಿರ್ದೇಶಕರಾದ ಯು.ಸಿ. ಶಿವಕುಮಾರ್, ಬಿ.ಆರ್.ರಾಮಚಂದ್ರ, ಎಂ.ಎಸ್.ರಘುನಂದನ್ ಅವರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸ್ವೀಕರಿಸಿ ಅವರು ಮಾತನಾಡಿದರು.

ಮಂಡ್ಯ ತಾಲೂಕಿನಿಂದ ಮೂವರು ನಿರ್ದೇಶಕರುಗಳನ್ನು ಪಕ್ಷಾತೀತವಾಗಿ ಗುರುತಿಸಿ ಅಭಿನಂದಿಸುತ್ತಿದ್ದೀರಿ, ನಾನು ಸಹ ಮೂರು ಬಾರಿ ನಿರ್ದೇಶಕರಾಗಲು ಕಾರ್ಯದರ್ಶಿಗಳ ಸಹಕಾರ ಕಾರಣ ಎಂದು ತಿಳಿಸಿದರು.

ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗೆ ಯಾರನ್ನು ಕಡೆಗಣಿಸಿಲ್ಲ ಎಲ್ಲರನ್ನೂ ಸಮತೋಲನವಾಗಿ ತೆಗೆದುಕೊಂಡು ಹೋಗಿದ್ದೇವೆ. ಮನ್‌ಮುಲ್‌ನಲ್ಲಿ ಹಾಲು ಉತ್ಪಾದಕರಿಗೆ ಸಿಗುವ ಮೇವು ಕತ್ತರಿಸುವ ಯಂತ್ರ, ರಬ್ಬರ್ ಮ್ಯಾಟ್, ಅನುದಾನಗಳು ಉತ್ಪಾದಕರಿಗೆ ತಲುಪಲು ಕಾರ್ಯದರ್ಶಿಗಳು ಕಾರಣ ಎಂದು ಹೇಳಿದರು.

ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಮಂಜೇಶ್ ಮಾತನಾಡಿ ಜಿಲ್ಲಾ ಹಾಲು ಒಕ್ಕೂಟದಲ್ಲಿ ಮಂಡ್ಯ ತಾಲೂಕು ಹಾಲಿನ ಗುಣಮಟ್ಟದಲ್ಲಿ, ಸೇವಾ ಕಾರ್ಯಚಟುವಟಿಕೆಗಳಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿದೆ ಎಂದು ಹೇಳಿದರು.

ಮಂಡ್ಯ ಹಾಲು ಒಕ್ಕೂಟದಿಂದ ಇ–ತಂತ್ರಾಂಶ ಅಳವಡಿಸುತ್ತಿದ್ದೇವೆ. ದೇಶದಲ್ಲಿ ಪಾರದರ್ಶಕವಾಗಿ ಮಂಡ್ಯ ಹಾಲು ಒಕ್ಕೂಟ ಬದಲಾವಣೆ ಕಂಡು ಪ್ರಗತಿ ಪಥದತ್ತ ಸಾಗುತ್ತಿದೆ. ಮಂಡ್ಯ ಹಾಲು ಒಕ್ಕೂಟದಲ್ಲಿ ಮಾರುಕಟ್ಟೆ ಅಭಿವೃದ್ಧಿಪಡಿಸಿದರೆ ರೈತರಿಗೆ ಹೆಚ್ಚು ಬೆಲೆ ಕೊಡಲು ಸಾಧ್ಯ ಎಂದು ತಿಳಿಸಿದರು.

ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕರಾದ ಬಿ.ಆರ್.ರಾಮಚಂದ್ರ ಎಂ.ಎಸ್. ರಘುನಂದನ್, ಮನ್‌ಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಮಂಜೇಶ್‌ಗೌಡ, ಹಣಕಾಸು ವಿಭಾಗದ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಲತಾ, ಹಾಲು ಉತ್ಪಾದಕರ ಸಹಕಾರ ಸಂಘಗಳ ನೌಕರರ ಯೂನಿಯನ್ ಅಧ್ಯಕ್ಷ ನಾಗರಾಜು, ನಿರ್ದೇಶಕ ಶಿವಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮಂಡ್ಯ ವೈದ್ಯಕೀಯ ಕಾಲೇಜು ಮೇಲ್ದರ್ಜೆಗೆ

ಸಚಿವರುಗಳಾದ ಚಲುವರಾಯಸ್ವಾಮಿ, ಶರಣು ಪ್ರಕಾಶ್ ಪಾಟೀಲ್ ಪ್ರಕಟ

ಬೆಂಗಳೂರು: ಮಂಡ್ಯ ವೈದ್ಯಕೀಯ ಕಾಲೇಜು ಮೇಲ್ದರ್ಜೆಗೆರಿಸುವ ಜೊತೆಗೆ ನವೀಕರಣ ಕಾಮಗಾರಿಗಳಿಗೆ ಅಗತ್ಯ ಅನುದಾನ ಒದಗಿಸಲಾಗುವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣು ಪ್ರಕಾಶ್ ಪಾಟೀಲ್ ತಿಳಿಸಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ನಡೆದ ಮಂಡ್ಯ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಅಭಿವೃದ್ಧಿ ಕುರಿತು ವಿಸ್ತøತ ಚರ್ಚೆ ನಡೆಸಿದ ನಂತರ ಉಭಯ ಸಚಿವರು, ಎಲ್ಲಾ ರೀತಿಯ ಅಗತ್ಯ ನೆರವು ನೀಡುವ ಭರವಸೆ ನೀಡಿದರು.



ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ನಡೆದ ಸಭೆ

ಹಾಲಿ ಆಸ್ಪತ್ರೆಯಲ್ಲಿ 400 ಹಾಸಿಗೆಗಳಿಗೆ ಅನುಮೋದನೆ ಇದ್ದರೂ ಸಹ 800ಕ್ಕೂ ಅಧಿಕ ರೋಗಿಗಳನ್ನು ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಹೀಗಾಗಿ ಇದನ್ನು 850 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಅಗತ್ಯ ಇದೆ ಎಂದು ಸಭೆಯಲ್ಲಿ ಸಚಿವರಾದ ಚಲುವರಾಯಸ್ವಾಮಿಯವರು ಗಮನ ಸೆಳೆದರು.

ಇದಕ್ಕೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವರು, ಪರಿಸರ ಇಲಾಖೆ ಪರವಾನಗಿ ನವೀಕರಿಸಿ 500 ಹಾಸಿಗೆಗಳ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ತಿಳಿಸಿದರು. ಇದೇ ರೀತಿ ತುರ್ತು ಚಿಕಿತ್ಸಾ ಘಟಕ ಹಾಗೂ ಲಘು ಶಸ್ತ್ರ ಚಿಕಿತ್ಸಾ ಘಟಕಗಳ ಕೊಠಡಿ ನಿರ್ಮಾಣ/ನವೀಕರಣ, ಕ್ಯಾನ್ಸರ್ ಚಿಕಿತ್ಸಾ ಘಟಕ, ಲಾಂಡ್ರಿ ಸೌಲಭ್ಯ, ಹೆಚ್ಚುವರಿ ಕೊಠಡಿಗಳ ನಿರ್ಮಾಣ, ವಿದ್ಯುತ್ ಪೂರೈಕೆ ಸೇರಿದಂತೆ ಆಸ್ಪತ್ರೆಗೆ ಅಗತ್ಯವಿರುವ ಎಲ್ಲಾ ಕಾಮಗಾರಿಗಳನ್ನು ಪಟ್ಟಿ ಮಾಡಿ ವಿಸ್ತøತ ಯೋಜನೆಯ ಪ್ರಸ್ತಾವನೆ ಸಲ್ಲಿಸುವಂತೆ ಸಚಿವರಾದ ಚಲುವರಾಯಸ್ವಾಮಿಯವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾದ ಶರಣ್ ಪ್ರಕಾಶ್ ಪಾಟೀಲ್ ರವರು ಆಸ್ಪತ್ರೆಯ ಅಧಿಕಾರಿಗಳಿಗೆ ತಿಳಿಸಿದರು.

ಇನ್ನೂ ಇದೇ ವೇಳೆ ಮಂಡ್ಯ ಜಿಲ್ಲೆಯ ಏಳು ತಾಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಉನ್ನತೀಕರಣಗೊಳಿಸುವ ಬಗ್ಗೆ ಅಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನಿರ್ದೇಶನ ನೀಡಿದರು.

ಶ್ರೀರಂಗಪಟ್ಟಣ ಶಾಸಕರು, ಚೆಸ್ಕಾಂ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ ಹಾಗೂ ಮಂಡ್ಯ ಶಾಸಕ ರವಿಕುಮಾರ್ ಗಣಿಗ, ಪಾಂಡವಪುರ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮದ್ದೂರು ಶಾಸಕ ಉದಯ್ ಗೌಡ, ವಿಧಾನಪರಿಷತ್ ಸದಸ್ಯ ಮಧು ಮಾದೇಗೌಡ, ಮಂಡ್ಯ ವೈದ್ಯಕೀಯ ಕಾಲೇಜಿನ ಅಭಿವೃದ್ಧಿ ಬಗ್ಗೆ ಸಲಹೆ ಸೂಚನೆ ನೀಡಿದರು.

ಮದ್ದೂರು ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ

ಮಂಡ್ಯ, ಜು.24– ಜಿಲ್ಲಾಧಿಕಾರಿ ಡಾ: ಕುಮಾರ ಗುರುವಾರ ಮದ್ದೂರು ತಾಲೂಕು ಕಚೇರಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಾಲೂಕು ಕಚೇರಿಯಲ್ಲಿ ಅರ್ಜಿ ಸಲ್ಲಿಸಲು ಹಾಜರಿದ್ದ ಸಾರ್ವಜನಿಕರು ಆರ್‌ಟಿಸಿ ತಿದ್ದುಪಡಿ, ಪೋಡಿ ತಿದ್ದುಪಡಿ, ಜನನ–ಮರಣ ಪ್ರಮಾಣ ಪತ್ರ ಕುರಿತು ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಖುದ್ದು ಸ್ವೀಕರಿಸಿ ಕುಂದು ಕೊರತೆಗಳನ್ನು ಆಲಿಸಿದರು.

ಜಿಲ್ಲಾಧಿಕಾರಿಗಳು ಅರ್ಜಿಗಳನ್ನು ತಹಸೀಲ್ದಾರ್, ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ನೀಡಿ ನಿಯಮಾನುಸಾರ ಅರ್ಜಿಗಳು ವಿಲೇವಾರಿ ಮಾಡಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರನ್ನು, ಸರ್ಕಾರಿ ಕೆಲಸಗಳಿಗೆ ತಾಲೂಕು ಕಚೇರಿಗೆ ವಿನಃ ಕಾರಣ ಅಲೆದಾಡಿಸಬಾರದು. ಈ ಬಗ್ಗೆ ದೂರುಗಳು ಕಂಡುಬಂದಲ್ಲಿ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.



ಜನರಿಂದ ಅಹವಾಲು ಸ್ವೀಕರಿಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್.

ನಂತರ ವಿವಿಧ ಶಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಸಭೆ ನಡೆಸಿ ಕಡತಗಳ ವಿಲೇವಾರಿ ಕುರಿತು ಪರಿಶೀಲನೆ ನಡೆಸಿದರು. ನಿಗದಿಪಡಿಸಿರುವ ಸಮಯಕ್ಕೆ ಎಲ್ಲಾ ಅರ್ಜಿಗಳು ವಿಲೇವಾರಿ ಮಾಡಬೇಕು ಎಂದರು.

ಆರ್‌ಟಿಸಿ ವಿತರಣ ಕೇಂದ್ರ ಸೇರಿದಂತೆ ವಿವಿಧ ಸರ್ವೇ ಶಾಖೆಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳಿಗೆ ನಿಯಮಿತ ಕಾಲಾವಧಿಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸೂಚನೆ ನೀಡಿದರು.

ಚಾ.ನಗರ ಜಿಲ್ಲೆಯಾದ್ಯಂತ ಭೀಮನ ಅಮಾವಾಸ್ಯೆ ಆಚರಣೆ


ಮಹದೇಶ್ವರಬೆಟ್ಟ ಸೇರಿ ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆ, ಹರಿದು ಬಂದ ಭಕ್ತಸಾಗರ

ಚಾಮರಾಜನಗರ, ಜು.24– ಭೀಮನ ಅಮಾವಾಸ್ಯೆ ಪ್ರಯುಕ್ತ ಜಿಲ್ಲೆಯಾದ್ಯಂತ ಎಲ್ಲಾ ದೇವಾಲಯಗಳಲ್ಲಿ ಗುರುವಾರ ವಿಶೇಷ ಪೂಜಾ ಕೈಂಕರ್ಯಗಳು, ಅನ್ನ ಸಂತರ್ಪಣೆ ನಡೆಯಿತು.

ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಭಕ್ತ ಸಾಗರವೇ ನೆರೆದಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಮಾದಪ್ಪನ ಸನ್ನಿಧಿಗೆ ಆಗಮಿಸಿದ್ದರು. ಉಘೇ... ಉಘೇ ಮಾದಪ್ಪ.. ಎಂದು ಕೂಗುವ ಮೂಲಕ ಮಾದಪ್ಪನ ಮೇಲಿನ ಭಕ್ತಿ ಸಮರ್ಪಿಸಿದರು.

ಇದಲ್ಲದೇ ಬಿಳಿಗಿರಿರಂಗನಬೆಟ್ಟ ಹಿಮವದ್ ಗೋಪಾಲಸ್ವಾಮಿಬೆಟ್ಟ, ಸಂತೇಮರಹಳ್ಳಿಯ ಶ್ರೀಮಹದೇಶ್ವರ, ಕಂದಹಳ್ಳಿಯ ಶ್ರೀಮಹದೇಶ್ವರ, ಕೂಡ್ಲೂರಿನ ಶ್ರೀಮಂಟೇಸ್ವಾಮಿ ಹಾಗೂ ಶ್ರೀಮಹದೇಶ್ವರ, ಯಡಬೆಟ್ಟದ ಶ್ರೀಮಹದೇಶ್ವ, ಚಾಮರಾಜನಗರದ ಶ್ರೀಆದಿಶಕ್ತಿ, ಶ್ರೀಮಂಟೇಸ್ವಾಮಿ, ಶ್ರೀಚಾಮರಾಜೇಶ್ವರ, ಕೊಳದ ಗಣಪತಿ, ಶ್ರೀವೀರಭದ್ರಸ್ವಾಮಿ ದೇವಸ್ಥಾನ, ರಾಮಸಮುದ್ರದ ಶ್ರೀಮಹದೇಶ್ವರ, ಚಂದಕವಾಡಿ ಶ್ರೀಲಕ್ಷ್ಮೀದೇವಿ ದೇವಸ್ಥಾನ, ಶ್ರೀಶನೇಶ್ವರಸ್ವಾಮಿ ದೇವಸ್ಥಾನ, ಹರದನಹಳ್ಳಿ ಶ್ರೀದಿವ್ಯಲಿಂಗೇಶ್ವರ ದೇವಸ್ಥಾನ, ದೇಮಹಳ್ಳಿಯ ಶ್ರೀಮಂಟೇಸ್ವಾಮಿ, ತೊರವಳ್ಳಿಯ ಶ್ರೀಮಹದೇಶ್ವರ, ಸೋಮವಾರಪೇಟೆಯ ಶಿರಗಳ್ಳಿ ಶ್ರೀಲಕ್ಷ್ಮೀದೇವಿ ದೇವಾಲಯ ಹಾಗೂ ಬೊಮ್ಮೇಶ್ವರ ದೇವಸ್ಥಾನ ಸೇರಿದಂತೆ ಜಿಲ್ಲೆಯ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ಬೆಳಗ್ಗೆಯಿಂದ ರಾತ್ರಿವರೆಗೂ ವಿಶೇಷ ಪೂಜಾ ಕಾರ್ಯಗಳು ಜರುಗಿದವು.

ಬೆಳಗ್ಗೆಯಿಂದಲೇ ತಂಡೋಪ ತಂಡವಾಗಿ ನೂರಾರು ಭಕ್ತರು ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಬಹುತೇಕ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ಅನ್ನ ಸಂತರ್ಪಣೆ ನಡೆಯಿತು. ಭೀಮನ ಅಮಾವಾಸ್ಯೆ ಪ್ರಯುಕ್ತ ದೇವಾಲಯಗಳನ್ನು ಬಣ್ಣ ಬಣ್ಣ ಹೂಗಳಿಂದ, ತಳಿರು ತೋರಣಗಳನ್ನು ಕಟ್ಟಿ ಅಲಂಕರಿಸಲಾಗಿತ್ತು. ಭಕ್ತರ ಅನುಕೂಲಕ್ಕಾಗಿ ಬ್ಲಾಂಕೆಟ್‌ಗಳನ್ನು ನಿರ್ಮಿಸಿ ಸರತಿ ಸಾಲಿನಲ್ಲಿ ಬರುವಂತೆ ವ್ಯವಸ್ಥೆ ಮಾಡಲಾಗಿತ್ತು. ಒಟ್ಟಾರೆ ಜಿಲ್ಲೆಯ ಎಲ್ಲಾ ದೇವಾಲಯಗಳಲ್ಲಿ ಭಕ್ತ ಸಮೂಹವೇ ನೆರೆದಿತ್ತು.



ಮಲೆ ಮಹದೇಶ್ವರಬೆಟ್ಟಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಭಕ್ತರು ಮಾದಪ್ಪನಿಗೆ ಉಘೇ... ಉಘೇ... ಎಂದು ಕೂಗಿದರು.

ಮನೆಗಳಲ್ಲಿ ಭೀಮನ ಅಮಾವಾಸ್ಯೆ ಸಂಭ್ರಮ: ಜಿಲ್ಲೆಯಾದ್ಯಂತ ಹೆಂಗಳೆಯರು ಶ್ರದ್ಧಾ–ಭಕ್ತಿಯಿಂದ ಜ್ಯೋತಿರ್ಭೀಮೇಶ್ವರ ವ್ರತ ಆಚರಣೆ ಮಾಡಿದರು. ಬೆಳಗ್ಗೆಯೇ ಎದ್ದು ಮನೆ ಶುಚಿಗೊಳಿಸಿದರು. ಮನೆಯಲ್ಲಿ ಸಿಹಿ ಖಾದ್ಯ ತಯಾರಿಸಿ ದೇವರಿಗೆ ನೈವೇದ್ಯ ಅರ್ಪಿಸಿದರು. ನಂತರ ತಮ್ಮ ಪತಿಯ ಆಯುಷ್ಯ ಆರೋಗ್ಯಕ್ಕಾಗಿ ಪತಿಯ ಪಾದ ಪೂಜೆ ಮಾಡುವ ಮೂಲಕ ಜ್ಯೋತಿರ್ಭೀಮೇಶ್ವರ ವ್ರತ ಆಚರಣೆ ಮಾಡಿದರು.

ವಿವಾಹವಾದ ಹೆಣ್ಣು ಮಕ್ಕಳು ತಮ್ಮ ಪತಿಗಾಗಿ ಈ ವ್ರತವನ್ನು ಆಚರಿಸಿದರೆ, ಅವಿವಾಹಿತ ಹೆಣ್ಣು ಮಕ್ಕಳು ತಮ್ಮ ತಂದೆ, ಸಹೋದರರ ಏಳಿಗೆ, ಆರೋಗ್ಯಕ್ಕಾಗಿ ಪ್ರಾರ್ಥಿಸಿ, ತಮಗೆ ಉತ್ತಮ ಪತಿ ದೊರೆಯಲಿ ಎಂದು ಜ್ಯೋತಿರ್ಭೀಮೇಶ್ವರ ವ್ರತವನ್ನು ಆಚರಿಸಿದರು.

ಮಾದಪ್ಪನ ಬೆಟ್ಟದಲ್ಲಿ ಭಕ್ತ ಸಾಗರ: ಜಿಲ್ಲೆಯ ಪ್ರಸಿದ್ಧ ಯಾತ್ರ ಕ್ಷೇತ್ರವಾದ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ಪೂಜಾ ಕೈಂಕರ್ಯಗಳು ಸಂಭ್ರಮದಿಂದ ನಡೆಯಿತು. ಸಾಗರೋಪಾದಿಯಲ್ಲಿ ಆಗಮಿಸಿದ್ದ ಅಸಂಖ್ಯಾತ ಭಕ್ತರು ಮಾದಪ್ಪನನ್ನು ಕಣ್ತುಂಬಿಕೊಂಡರು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದ್ದರಿಂದ ಪ್ರಾಧಿಕಾರವು ಅಲ್ಲಲ್ಲಿ ಕುಡಿಯುವ ನೀರು, ಶೌಚಾಲಯ ಮುಂತಾದ ಮೂಲ ಸೌಲಭ್ಯವನ್ನು ಕಲ್ಪಸಿತ್ತು. ಹರಕೆ ಹೊತ್ತ ಕಾಲ್ನಡಿಗೆಯಲ್ಲಿ ಬರುವ ಭಕ್ತರಿಗೆ ಅಲ್ಲಲ್ಲಿ ಅನ್ನದಾನ ಮಾಡಲಾಗುತಿತ್ತು.

ಅಂತರ ಗಂಗೆಯನ್ನು ಶುದ್ಧಿಕರಿಸಿದ್ದು ಮುಡಿಸೇವೆ ನಂತರ ಭಕ್ತರು ಅಂತರ ಗಂಗೆಯಲ್ಲಿ ಮಿಂದು ಪುನೀತರಾದರು. ಬೆಟ್ಟಕ್ಕೆ ಎರಡು ದಿನಗಳ ಮುಂಚೆಯೇ ಭಕ್ತರು ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿ ಮಾದಪ್ಪನಿಗೆ ಪೂಜೆ ಸಲ್ಲಿಸಿದರು.

ಕೊಳ್ಳೇಗಾಲ ಆಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ಹೆಣ್ಣು ಮಗುವಿನ ಬಗ್ಗೆ ತಾತ್ಸಾರ ಬೇಡ, ಗಂಡು ಮಗುವೇ ಬೇಕೆಂಬ ಹಠ ಬೇಡ

ಚಾಮರಾಜನಗರ, ಜು.24– ಹೆಣ್ಣಿನ ಬಗ್ಗೆ ಇರುವ ತಾತ್ಸರ ಹೋಗಬೇಕು. ಗಂಡು ಮಗುವೇ ಬೇಕು ಎಂಬ ಮನೋಭಾವ ಬದಲಾಗಬೇಕು. ಈ ಕುರಿತು ಜಾಗೃತಿ ಮೂಡಿಸುವ ಅವಶ್ಯವಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ತಿಳಿಸಿದ್ದಾರೆ.

ಕೊಳ್ಳೇಗಾಲ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಇಂದು ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ಸಮಾಜದಲ್ಲಿ ಇನ್ನೂ ಹೆಣ್ಣು ಮಕ್ಕಳ ಬಗ್ಗೆ ಇರುವ ತಾತ್ಸಾರವನ್ನು ನಿವಾರಿಸಬೇಕಿದೆ. ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡುತ್ತಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳು, ಜಿಪಂ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಇತರೆ ಉನ್ನತ ಹುದ್ದೆಗಳಲ್ಲಿ ಮಹಿಳೆಯರೇ ಇದ್ದಾರೆ. ಮಹಿಳೆ ಪುರುಷರಷ್ಟೇ ಸರಿ ಸಮಾನವಾಗಿ ಎಲ್ಲಾ ರಂಗದಲ್ಲೂ ಮುಂದಿದ್ದಾರೆ ಎಂದರು.

ಹೆಣ್ಣು ಮಗು ಜನಿಸಿದರೆ ನಿರಾಸೆ ಪಡುವುದು ಬೇಡ. ಗಂಡು ಮಕ್ಕಳೇ ಜನಿಸಬೇಕೆಂಬ ಮನಸ್ಥಿತಿಯನ್ನು ಬದಲಿಸಿಕೊಳ್ಳಬೇಕು. ಹೆಣ್ಣು ಬಗೆಗಿನ ನಿರ್ಲಕ್ಷ್ಯ ತಾತ್ಸಾರ ಬದಲಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಜಿಲ್ಲೆಯಲ್ಲಿ ಪರಿಣಾಮಕಾರಿಯಾದ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ ಎಂದು ತಿಳಿಸಿದರು.



ಜನರಿಂದ ಅಹವಾಲು ಸ್ವೀಕರಿಸುತ್ತಿರುವ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ

ಇಂದು ಆಸ್ಪತ್ರೆಗೆ ಭೇಟಿ ನೀಡಿ ಎಲ್ಲಾ ವಿಭಾಗಗಳನ್ನು ಪರಿಶೀಲಿಸಿದ್ದೇನೆ ರೋಗಿಗಳೊಂದಿಗೆ, ಮಹಿಳೆಯರೊಂದಿಗೆ ಮಾತನಾಡಿದ್ದೇನೆ. ವೈದ್ಯರು ಮತ್ತು ಶುಶ್ರೂಕರ ಸೇವೆ ಸಮರ್ಪಕವಾಗಿದೆ. ಆದರೆ ಆಸ್ಪತ್ರೆಯಲ್ಲಿ ಬಿಸಿನೀರು ಪೂರೈಕೆ ಆಗದಿರುವ ಕುರಿತು ಸಮಸ್ಯೆ ಹೇಳಿಕೊಂಡಿದ್ದಾರೆ. ವಿಶೇಷವಾಗಿ ಹೆರಿಗೆಯಾದಾಗ ಬಾಣಂತಿಯರಿಗೆ ಬಿಸಿನೀರಿನ ಅವಶ್ಯಕತೆ ಇರುತ್ತದೆ. ಈ ಸೌಲಭ್ಯವನ್ನು ಯಾವುದೇ ದೂರುಗಳು ಬಾರದಂತೆ ಒದಗಿಸಲು ಸೂಚಿಸಲಾಗಿದೆ ಕುಡಿಯಲು ಬಿಸಿ ನೀರು ಕಾಯಿಸುವ ಸಾಧನವು ಆಸ್ಪತ್ರೆಯಲ್ಲಿದ್ದು ರೋಗಿಗಳ ಅವಲಂಬಿತರಿಗೆ ಇದನ್ನು ಬಳಸಿಕೊಳ್ಳಲು ತಿಳಿಸಬೇಕು ಎಂದು ನಿರ್ದೇಶನ ನೀಡಲಾಗಿದೆ ಎಂದರು. ಬಳ್ಳಾರಿ ಬಾಣಂತಿಯರ ಸಾವಿನ ಪ್ರಕರಣದ ನಂತರ ಆಸ್ಪತ್ರೆಗಳಲ್ಲಿ ಅತಿ ಹೆಚ್ಚು ಕಾಳಜಿ ವಹಿಸಲಾಗುತ್ತಿದೆ. ಚಿಕಿತ್ಸೆ, ಶುಚಿತ್ವ, ಔಷದೋಪಚಾರಗಳ ಬಗ್ಗೆ ವಿಶೇಷವಾದ ಗಮನ ತೆಗೆದುಕೊಳ್ಳಲಾಗಿದೆ. ಎಲ್ಲಿಯೂ ಯಾವುದೇ ಕೊರತೆಯಾಗದಂತೆ ಅಚ್ಚುಕಟ್ಟಾಗಿ ಸೇವೆ ಒದಗಿಸಲಾಗುತ್ತಿದೆ. ಇಲ್ಲಿ ಆಸ್ಪತ್ರೆಯಲ್ಲಿಯೂ ತಿಂಗಳಿಗೆ 100 ರಿಂದ 125 ಹೆರಿಗೆಗಳು ಆಗುತ್ತಿವೆ. ರೇಡಿಯಲಾಜಿಸ್ಟ್, ನರ್ಸ್‌ಗಳ ಕೊರತೆ ಇರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಗಮನ ಹರಿಸಲಿದ್ದೇವೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ಇದಕ್ಕೂ ಮೊದಲು ಆಸ್ಪತ್ರೆಯ ಪ್ರತೀ ವಿಭಾಗಗಳಿಗೂ ಭೇಟಿ ನೀಡಿದ ಮಹಿಳಾ ಆಯೋಗದ ಅಧ್ಯಕ್ಷರು ರೋಗಿಗಳು ಮತ್ತು ಅವರ ಅವಲಂಬಿತರೊಂದಿಗೆ ಮಾತನಾಡಿದರು. ಆಸ್ಪತ್ರೆಯಲ್ಲಿ ಹೇಗೆ ಸೇವೆ ಲಭಿಸುತ್ತಿದೆ. ಔಷಧಗಳನ್ನು ಹೊರಗಡೆಯಿಂದ ತರಲು ಚೀಟಿ ನೀಡುತ್ತಿದ್ದಾರೆಯೇ, ಏನಾದರೂ ತೊಂದರೆಗಳು ಇವೆಯೇ ಎಂದು ಪ್ರಶ್ನಿಸಿದರು.

ಆಸ್ಪತ್ರೆ ಭೇಟಿಗೂ ಮೊದಲು ಅಧ್ಯಕ್ಷರು ಪಟ್ಟಣದಲ್ಲಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಮಹಿಳೆಯರು ಇತರೆ ಸಂಘಟನೆಗಳ ಮುಖಂಡರಿಂದ ಅಹವಾಲುಗಳನ್ನು ಆಲಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಲೋಕೇಶ್ವರಿ, ಇತರರು ಈ ಸಂದರ್ಭದಲ್ಲಿ ಇದ್ದರು.

ಮಿಡ್‌ನೈಟ್ ರಸ್ತೇಲಿ
ಮುತ್ತಣ್ಣನ ರೊಮ್ಯಾಂಟಿಕ್ ಸಾಂಗ್



ತಂದೆ ಮಗನ ಬಾಂಧವ್ಯದ ಕಥಾಹಂದರ ಒಳಗೊಂಡ ಸನ್ನಾಫ್ ಮುತ್ತಣ್ಣ ಚಿತ್ರದ ಮಿಡ್‌ನೈಟ್ ರಸ್ತೇಲಿ ಹಾಡು ಇತ್ತೀಚೆಗೆ ರಿಲೀಸಾಯಿತು. ಶ್ರೀಕಾಂತ್ ಹುಣಸೂರು ಅವರ ನಿರ್ದೇಶನದ ಈ ಚಿತ್ರದಲ್ಲಿ ಪ್ರಣಂ ದೇವರಾಜ್, ಖುಷಿ ರವಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ಯೋಗರಾಜ್‌ಭಟ್ ಅವರ ಲೇಖನಿಯಲ್ಲಿ ಮೂಡಿಬಂದಿರೋ ಈಹಾಡಿಗೆ ಸಂಜಿತ್ ಹೆಗ್ಡೆ ದನಿಯಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಸಂಯೋಜಿಸಿದ್ದಾರೆ.

ನಿರ್ದೇಶಕ ಶ್ರೀಕಾಂತ್ ಹುಣಸೂರು ಮಾತನಾಡುತ್ತಾ, ಅಪ್ಪ – ಮಗನ ನಡುವಿನ ಸಂಬಂಧ, ಆತ್ಮೀಯತೆ ಹೇಗಿರುತ್ತದೆ ಎಂದು ಮನಮಿಡಿಯುವ ಕಥನದೊಂದಿಗೆ ಹೇಳಲು ಪ್ರಯತ್ನಿಸಿದ್ದೇನೆ. ಹಿರಿಯನಟ ರಂಗಾಯಣ ರಘು ಹಾಗೂ ಪ್ರಣಂ ದೇವರಾಜ್ ಇಬ್ಬರೂ ತಂದೆ ಮಗನಾಗಿ ಕಾಣಿಸಿಕೊಂಡಿರುವ ಈ ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಈ ಹಿಂದೆ ರಿಲೀಸಾದ ಕಮ್ಮಂಗಿ ನನ್‌ಮಗನೇ ಹಾಡು ಎಲ್ಲಾ ಕಡೆ ವೈರಲ್ ಆಗಿದ್ದು, ಇದೀಗ ಎರಡನೇ ಸಾಂಗ್ ಬಿಡುಗಡೆಯಾಗಿದೆ, ಎರಡಕ್ಕೂ ಭಟ್ಟರೇ ಲಿರಿಕ್ ಬರೆದಿದ್ದಾರೆ. ನಮ್ಮ ಚಿತ್ರದ ಹೆಚ್ಚಿನ ಭಾಗವನ್ನು ವಾರಣಾಸಿಯಲೇ ಚಿತ್ರೀಕರಿಸಿದ್ದೇವೆ ಎಂದು ಹೇಳಿದರು.

ಸಂಗೀತ ನಿರ್ದೇಶಕ ಸಚಿನ್ ಬಸ್ರೂರ್ ಮಾತನಾಡುತ್ತಾ, ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಎರಡನೇ ಹಾಡು ಇದೀಗ ಬಿಡುಗಡೆಯಾಗಿದೆ. ಉಳಿದ ಎರಡು ಹಾಡುಗಳನ್ನೂ ಸದ್ಯದಲ್ಲೇ ರಿಲೀಸ್ ಮಾಡುತ್ತಿದ್ದೇವೆ ಎಂದರು.

ನಾಯಕಿ ಖುಷಿ ರವಿ ಮಾತನಾಡುತ್ತಾ, ನಾನೀ ಚಿತ್ರದಲ್ಲಿ ಸಾಕ್ಷಿ ಎಂಬ ವೈದ್ಯೆಯ ಪಾತ್ರ ಮಾಡಿದ್ದೇನೆ. ಒಂದೊಳ್ಳೆ ಚಿತ್ರದಲ್ಲಿ ನಟಿಸಿದ ಖುಷಿಯಿದೆ. ನಾಯಕಿಯಾಗಿ ನಟಿಸಿರುವ ಏಳನೇ ಚಿತ್ರವಿದು. ಬೇರೆ ಭಾಷೆಗಳಲ್ಲಿ ತುಂಬಾ ಅವಕಾಶ ಸಿಗುತ್ತಿದೆ. ಆದರೆ ಕನ್ನಡದಲ್ಲಿ ಹೆಚ್ಚು ಅವಕಾಶಗಳು ಸಿಗುತ್ತಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಪುರಾತನ ಫಿಲಂಸ್ ಹಾಗೂ ಎಸ್‌ಆರ್‌ಕೆ ಫಿಲಂಸ್ ಸಹಯೋಗದೊಂದಿಗೆ ಸನ್ನಾಫ್ ಮುತ್ತಣ್ಣ ನಿರ್ಮಾಣವಾಗಿದೆ

ಪ್ರೀತಿಗಾಗಿ ಹೋರಾಟ
ಓಂ ಶಿವಂ





ಒಬ್ಬ ತಂದೆ ತನ್ನ ಮಗನನ್ನು ಚಿತ್ರರಂಗಕ್ಕೆ ಪರಿಚಯಿಸಲು ನಿರ್ಮಿಸಿರುವ ಚಿತ್ರ ಓಂ ಶಿವಂ. ಅಲ್ವಿನ್ ನಿರ್ದೇಶನದ ಈ ಚಿತ್ರಕ್ಕೆ ಕೆ.ಎನ್. ಕೃಷ್ಣ ಬಂಡವಾಳ ಹೂಡಿದ್ದಾರೆ, ಇವರ ಪುತ್ರ ಭಾರ್ಗವ್ ಚಿತ್ರದ ನಾಯಕ. ಸೆ. 5 ಬಿಡುಗಡೆಯಾಗಲಿರುವ ಈ ಚಿತ್ರದ ಹಾಡುಗಳನ್ನು ನಿರ್ಮಾಪಕರದೇ ಕ್ರಿಶ್ ಆಡಿಯೋ ಮೂಲಕ ಬಿಡುಗಡೆಗೊಳಿಸಲಾಯಿತು. ವಿಜಯ್ ಯಾರ್ಡ್ಲಿ ಅವರ ಸಂಗೀತದ ನಾಲ್ಕು ಹಾಡುಗಳು ಚಿತ್ರದಲ್ಲಿದ್ದು, ಶಿವನ ಕುರಿತ ಗೀತೆಯೊಂದು ಸಂಸ್ಕೃತದಲ್ಲಿದೆ. ಉಳಿದ ಮೂರು ಹಾಡುಗಳಿಗೆ ಕವಿರಾಜ್, ಡಾ.ವಿ. ನಾಗೇಂದ್ರ ಪ್ರಸಾದ್ ಹಾಗೂ ಗೌಸ್‌ಪೀರ್ ಸಾಹಿತ್ಯ ಬರೆದಿದ್ದಾರೆ. ದೀಪಾ ಮೂವೀಸ್ ಬ್ಯಾನರ್ ಅಡಿ ಕೆ.ಎನ್. ಕೃಷ್ಣ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ವಿರಾಣಿಕಾ ಶೆಟ್ಟಿ ಚಿತ್ರದ ನಾಯಕಿಯಾಗಿದ್ದಾರೆ.

ನಿರ್ದೇಶಕ ಅಲ್ವಿನ್ ಮಾತನಾಡುತ್ತಾ, ಲವ್ ಕಮ್ ಆ್ಯಕ್ಷನ್ ಚಿತ್ರ ಇದಾಗಿದ್ದು ಎರಡು ಜಾನರ್‌ನಲ್ಲಿ ಸಾಗುವ ಚಿತ್ರಕಥೆಯಿದೆ. ಇಂದಿನ ಹುಡುಗ–ಹುಡುಗಿ ತಮ್ಮ ಪ್ರೀತಿ ಉಳಿಸಿಕೊಳ್ಳಲು ಹೇಗೆಲ್ಲಾ ಹೋರಾಡುತ್ತಾರೆ ಎಂದು ಚಿತ್ರದಲ್ಲಿ ತೋರಿಸಿದ್ದೇವೆ ಎಂದು ಹೇಳಿದರು.

ನಿರ್ಮಾಪಕ ಕೃಷ್ಣ ಮಾತನಾಡಿ, ದೊಡ್ಡ ಕನಸಿಟ್ಟುಕೊಂಡು ನಾನೀ ಸಿನಿಮಾ ಮಾಡಿದ್ದೇನೆ. 20 ವರ್ಷದ ಹಿಂದೆ ನನಗೂ ಸಿನಿಮಾದಲ್ಲಿ ಅಭಿನಯಿಸುವ ಆಸೆಯಿತ್ತು. ಆಗಿರಲಿಲ್ಲ. ನನ್ನ ಮಗನ ಮೂಲಕ ಅದನ್ನು ಈಡೇರಿಸಿಕೊಂಡಿದ್ದೇನೆ. ಜೊತೆಗೆ ಪಾತ್ರವೊಂದರಲ್ಲೂ ಕಾಣಿಸಿಕೊಂಡಿದ್ದೇನೆ. ಒಳ್ಳೇ ಫ್ಯಾಮಿಲಿಯಿಂದ ಬಂದ ಹುಡುಗನೊಬ್ಬ ಲವ್‌ನಲ್ಲಿ ಬಿದ್ದಾಗ ಏನೇನೆಲ್ಲಾ ಆಗುತ್ತೆ ಎಂಬುದೇ ಚಿತ್ರದ ಕಥೆ. ತಮ್ಮ ಘನತೆಗೋಸ್ಕರ ಮಕ್ಕಳ ಜೀವನ ಹಾಳು ಮಾಡಬೇಡಿ ಎಂದು ಚಿತ್ರದಲ್ಲಿ ಹೇಳಿದ್ದೇವೆ. ಬೆಂಗಳೂರು, ಮಂಗಳೂರು, ಮಂಡ್ಯ, ಶಿವಮೊಗ್ಗ, ಮೈಸೂರು, ಮಡಿಕೇರಿಯ ಸುತ್ತಮುತ್ತ 40 ದಿನಗಳ ಚಿತ್ರೀಕರಣ ನಡೆಸಲಾಗಿದೆ ಎಂದು ಹೇಳಿದರು.

ನಾಯಕ ಭಾರ್ಗವ್ ಕೃಷ್ಣ ಮಾತನಾಡಿ, ಇದು ನನ್ನ ಮೊದಲ ಚಿತ್ರ, ಇದರಲ್ಲಿ ಶಿವು ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಹುಡುಗಿಯ ಜತೆ ಲವ್ವಲ್ಲಿ ಬಿದ್ದಾಗ ಏನೇನೆಲ್ಲಾ ಆಗುತ್ತದೆ ಎನ್ನುವುದೇ ಮುಖ್ಯಕಥೆ. ಚಿತ್ರದಲ್ಲಿ ಒಳ್ಳೆಯ ಹಾಡುಗಳ ಜತೆ ಮನಕಲಕುವ ಲವ್‌ಸ್ಟೋರಿಯೂ ಇದೆ ಎಂದರು,

ನಾಯಕಿ ವಿರಾಣಿಕಾ ಶೆಟ್ಟಿ ಮಾತನಾಡುತ್ತಾ, ನಾನು ಈ ಚಿತ್ರಕ್ಕೆ ಆಡಿಶನ್ ಮೂಲಕ ಆಯ್ಕೆಯಾದೆ. ಇಂದಿನ ಜನರೇಷನ್‌ನ ಲವ್ ಇದರಲ್ಲಿದೆ ಎಂದು ಹೇಳಿದರು. ಸಂಗೀತ ನಿರ್ದೇಶಕ ವಿಜಯ್ ಯಾರ್ಡ್‌ಲೀ ಮಾತನಾಡಿ ಬೇರೆ ಬೇರೆ ಜಾನರ್‌ನ ನಾಲ್ಕು ಹಾಡುಗಳು ಚಿತ್ರದಲ್ಲಿವೆ. ಪ್ರಾರಂಭದಲ್ಲಿ ಶಿವನ ಹಾಡಿರಲಿಲ್ಲ, ನಂತರ ನಿರ್ಮಾಪಕರು ಹೇಳಿದ್ದರಿಂದ ರೆಡಿಮಾಡಿದೆವು ಎಂದರು.

ಸೈಕಲಾಜಿಕಲ್ ಥ್ರಿಲ್ಲರ್ ಹಿಕೋರಾ ಹಾಡುಗಳು



ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಹೊಂದಿದ ಹಿಕೋರಾ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ನೀನಾಸಂನಲ್ಲಿ ಮೆಸ್ ನಡೆಸುತ್ತಿದ್ದ ರತ್ನ ಶ್ರೀಧರ್ ನಿರ್ಮಾಣದ ಈ ಚಿತ್ರಕ್ಕೆ ನೀನಾಸಂ ಕಿಟ್ಟಿ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಜತೆಗೆ ಚಿತ್ರದ ನಾಯಕನಾಗೂ ನಟಿಸಿದ್ದಾರೆ. ಈ ಸಂದರ್ಭದಲ್ಲಿ ನಿರ್ದೇಶಕ ನೀನಾಸಂ ಕಿಟ್ಟಿ ಮಾತನಾಡುತ್ತಾ, ಕರೋನಾಕ್ಕೂ ಮುಂಚೆಯೇ ಈ ಚಿತ್ರವನ್ನು ಪಾರಂಭಿಸಿದ್ದೆವು. ಆನಂತರ ಸಾಕಷ್ಟು ಸಮಸ್ಯೆಗಳು ಎದುರಾದವು. ಅದೆಲ್ಲವನ್ನೂ ಬಗೆಹರಿಸಿಕೊಂಡು ಚಿತ್ರವನ್ನು ಬಿಡುಗಡೆ ಹಂತಕ್ಕೆ ತಂದಿದ್ದೇವೆ. ಜೋಗ, ಸಾಗರ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ, ತೇಜಸ್ವಿ ಅವರ ಹಿನ್ನೆಲೆ ಸಂಗೀತ ಚಿತ್ರಕ್ಕೆ ಹೊಸರೂಪ ನೀಡಿದೆ. ಕರೋನಾ ಎಂದರೆ ವೈರಸ್ ಎಂದು ಎಲ್ಲರಿಗೂ ಗೊತ್ತು. ಅದನ್ನು ಹೋಗಲಾಡಿಸಲು ಅನೇಕ ಆಂಟಿವೈರಸ್ ಕಂಡುಹಿಡಿಯಲಾಯಿತು. ಅದೇ ರೀತಿ ಹಿಕೋರಾ ಚಿತ್ರದಲ್ಲೂ ಒಂದು ಆಂಟಿವೈರಸ್ ಇದ್ದು, ಆ ವೈರಸ್ ಯಾವುದು ಎಂಬುದನ್ನು ತಿಳಿಯಲು ನೀವು ಸಿನಿಮಾ ನೋಡಬೇಕು. ಈಗಾಗಲೇ ಒಂದಷ್ಟು ಜನರಿಗೆ ಸಿನಿಮಾ ತೋರಿಸಿದೆವು. ಯಾವ ಮಲಯಾಳಂ ಸಿನಿಮಾಗೂ ಕಮ್ಮಿಯಿಲ್ಲ ಎಂದೇ ಎಲ್ಲರೂ ಅಭಿಪ್ರಾಯ ನೀಡಿದ್ದಾರೆ ಎಂದು ಹೇಳಿದರು.

ನಿರ್ಮಾಪಕಿ ರತ್ನ ಶ್ರೀಧರ್ ಮಾತನಾಡುತ್ತಾ, ಮುಹೂರ್ತಕ್ಕೆ ದರ್ಶನ್ ಬಂದು ಚಾಲನೆ ನೀಡಿದ್ದರು. ಅವರೂ ನೀನಾಸಂನಲ್ಲಿದ್ದವರು. ಸರ್ದಾರ್ ಸತ್ಯ ಸಂಭಾವನೆ ಪಡೆಯದೆ ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರತುಂಬಾ ಚೆನ್ನಾಗಿ ಬಂದಿದ್ದು ಎಲ್ಲೂ ಬೋರಾಗುವುದಿಲ್ಲ ಎಂದರು.

ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ಸಂಯೋಜನೆ ಚಿತ್ರಕ್ಕಿದ್ದು ಅವರ ನೂತನ 'ಹಾಡಿಯೋ' ಹೆಸರಿನ ಧ್ವನಿಸುರುಳಿ ಮೂಲಕ ಹಿಕೋರಾ ಹಾಡುಗಳು ಹೊರಬಂದಿವೆ. ನಾಯಕಿ ಸ್ಪಂದನ ಪ್ರಸಾದ್ ಮಾತನಾಡುತ್ತಾ, ನಾನು ನಟಿಸಿದ ಕಟಕ ಚಿತ್ರ ನೋಡಿದ ಪುನೀತ್ ಸರ್ ನನಗೆ ಹೇಳಿದ ಮಾತೇ ನಾನೀ ಚಿತ್ರದಲ್ಲಿ ನಟಿಸಲು ಸ್ಫೂರ್ತಿ, ಕನ್ನಡದಲ್ಲಿ ವಿಭಿನ್ನ ಎಕ್ಸ್‌ಪರಿಮೆಂಟಲ್ ಚಿತ್ರವಿದು ಎಂದರು.

ಬಿಗ್‌ಬಾಸ್ ಪ್ರಥಮ್ ಮೇಲೆ ಫೈರಿಂಗ್!



ಬಿಗ್‌ಬಾಸ್ ಪ್ರಥಮ್ ನಾಯಕನಾಗಿ ನಟಿಸಿರುವ 'ನೋ ಕೊಕೇನ್' ಚಿತ್ರದ ಸಾಹಸ ದೃಶ್ಯದ ಚಿತ್ರೀಕರಣ ಬನ್ನೇರುಘಟ್ಟ ರಸ್ತೆಯ ವೈಟ್‌ಹೌಸ್ ಬಿಲ್ಡಿಂಗ್‌ನಲ್ಲಿ ನಡೆಯುತ್ತಿತ್ತು. ಕೌರವ ವೆಂಕಟೇಶ್ ಅವರ ನಿರ್ದೇಶನದ ಪ್ರಥಮ ಚಿತ್ರ ಇದಾಗಿದ್ದು, ಶೂಟಿಂಗ್ ವೀಕ್ಷಣೆಗೆ ಮಾಧ್ಯಮದವರನ್ನು ಆಹ್ವಾನಿಸಲಾಗಿತ್ತು. ಕಲಾವಿದರಾದ ಶೋಭರಾಜ್, ಸಿದ್ಲಿಂಗು ಶ್ರೀಧರ್, ಜಗದೀಶ್ ಕೊಪ್ಪ ಮತ್ತು ತೆಲುಗುನಟ ಸೂರ್ಯ ಭಗವಾನ್‌ದಾಸ್ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು.

ರಕ್ತಸಿಕ್ತ ಮುಖದಲ್ಲೇ ಮಾಧ್ಯಮದೆದುರು ಬಂದ ನಾಯಕ ಪ್ರಥಮ್, ಮಿನಿಸ್ಟರ್ ಸಭೆ ನಡೆಯುವಾಗ ನಾನು ಅನುಮಾನಸ್ಪದನಾಗಿ ಎಂಟ್ರಿ ಕೊಟ್ಟಾಗ ನನ್ನ ಮೇಲೆ ಫೈರಿಂಗ್ ಮಾಡುತ್ತಾರೆ. ಆ ಗುಂಡೇಟಿನಿಂದ ನನ್ನ ಮುಖ ರಕ್ತವಾಗಿದೆ ಎಂದರು. ನಂತರ ಚಿತ್ರದ ಕುರಿತು ಮಾತನಾಡುತ್ತಾ, ಈಗಿನ ಕಾಲದ ಸ್ಟೂಡೆಂಟ್ಸ್ ಮೇಲೆ ಡ್ರಗ್ಸ್ ಯಾವ ರೀತಿ ಪರಿಣಾಮ ಬೀರುತ್ತಿದೆ, ಈ ಬೃಹತ್ ಜಾಲದ ಹಿಂದೆ ಯಾರ್‍ಯಾರಿದ್ದಾರೆ ಎಂಬುದನ್ನು ಕಂಡುಹಿಡಿಯೋ ಪಾತ್ರ ನನ್ನದು. ಇಂದು ನಾವು ಚಿತ್ರೀಕರಿಸುತ್ತಿರುವ ಸನ್ನಿವೇಶ ಪ್ರಸಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಿಕ್ಕಾಟದ ಛಾಯೆಯನ್ನು ಹೊಂದಿದೆ. ಸೂರ್ಯ ಭಗವಾನ್‌ದಾಸ್ ಅವರು ಗೃಹಸಚಿವರ ಪಾತ್ರ ನಿರ್ವಹಿಸುತ್ತಿದ್ದಾರೆ. ನನ್ನ ಇಷ್ಟು ವರ್ಷದ ಅನುಭವಗಳನ್ನು ಇಟ್ಟುಕೊಂಡು ನಿರ್ಮಾಣದಂಥ ದೊಡ್ಡ ಜವಾಬ್ದಾರಿ ಹೊತ್ತುಕೊಂಡಿದ್ದೇನೆ ಎಂದು ಹೇಳಿದರು.

ನಿರ್ದೇಶಕ ಕೌರವ ವೆಂಕಟೇಶ್ ಮಾತನಾಡಿ, ತುಂಬಾ ಸೂಕ್ಷ್ಮ ವಿಚಾರಗಳನ್ನು ಇಟ್ಟುಕೊಂಡು ನಾವೀ ಚಿತ್ರ ಮಾಡುತ್ತಿದ್ದೇವೆ. ಕೇಂದ್ರ ರಕ್ಷಣಾ ಸಚಿವರಾದ ಸಿದ್ಲಿಂಗು ಶ್ರೀಧರ್, ಗೃಹ ಸಚಿವರು, ಪೋಲೀಸ್ ಆಯುಕ್ತರೊಂದಿಗೆ ಕೋಕೇನ್ ಬಗ್ಗೆ ಗಂಭೀರ ಚರ್ಚೆ ನಡೆಸುತ್ತಿರುವಾಗ ಇದ್ದಕ್ಕಿದ್ದಹಾಗೆ ನಾಯಕ ಎಂಟ್ರಿ ಕೊಡುತ್ತಾನೆ. ಟೈಟ್ ಸೆಕ್ಯೂರಿಟಿ ಭೇದಿಸಿ ಆತ ಬಂದಿದ್ದರಿಂದ, ಸಚಿವರ ಮೇಲೆ ಆಕ್ರಮಣ ಮಾಡಲು ಬಂದಿದ್ದಾನೆಂದು ಅನುಮಾನಿಸಿ ಫೈರಿಂಗ್ ಮಾಡಲಾಗುತ್ತದೆ. ಆತ ಅಲ್ಲಿಗೆ ಏತಕ್ಕೆ ಬಂದ? ಆ ಸಭೆಯಲ್ಲಿ ಆತ ಹೇಳುವುದಾದರೂ ಏನಿತ್ತು? ಇದಕ್ಕೆಲ್ಲಾ ಉತ್ತರ ಚಿತ್ರದಲ್ಲಿದೆ. ಈವರೆಗೆ 25 ದಿನ ಚಿತ್ರೀಕರಣ ಮಾಡಿದ್ದೇವೆ. ಮಂಗಳೂರಿನಲ್ಲಿ ಕ್ಲೈಮಾಕ್ಸ್ ಮಾಡಿಕೊಂಡು, ಹಾಡಿಗಾಗಿ ವಿದೇಶಕ್ಕೆ ಹೋಗುವ ಪ್ಲಾನಿದೆ ಎಂದರು. ಅಯೋಧ್ಯರಾವ್ ಪ್ರೊಡಕ್ಷನ್ಸ್ ಅಡಿ ಪುನೀತ್ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರಕ್ಕೆ ಡಿ.ಆರ್.ಕಲ್ಕಿ ಅಭಿಷೇಕ್ ಅವರ ಸಂಗೀತ ಸಂಯೋಜನೆ, ಸಾಮ್ರಾಟ್ ಅವರ ಕ್ಯಾಮೆರಾ ವರ್ಕ್ ಇದೆ.

ಕಮರೊ 2 ಟ್ರೈಲರ್ ಬಿಡುಗಡೆ



ಯಶಸ್ವೀ ಕಮರೊಟ್ಟು ಚೆಕ್‌ಪೋಸ್ಟ್ ಚಿತ್ರದ ಸೀಕ್ವೆಲ್ ಆಗಿ ಕಮರೊ 2 ಮೂಡಿಬರುತ್ತಿದೆ. ಹಿಂದಿನ ನಿರ್ದೇಶಕ ಪರಮೇಶ್ ಅವರೇ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಆ ಚಿತ್ರದ ಚಿಕ್ಕ ಲಿಂಕ್ ಇಟ್ಟುಕೊಂಡು ಮತ್ತೊಂದು ಕಥೆ ಮಾಡಿಕೊಂಡು ಕಮರೊ 2 ಚಿತ್ರ ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಗೆಳೆಯ ಪವನ್‌ಗೌಡ ನಿರ್ಮಾಪಕರಾಗಿ ಸಾಥ್ ಕೊಟ್ಟಿದ್ದಾರೆ. ಹಿರಿಯ ನಟಿ ಪ್ರಿಯಾಂಕಾ ಉಪೇಂದ್ರ ಅವರು ಪ್ರಮುಖ ಪಾತ್ರದಲ್ಲಿದ್ದು, ರಜನಿ ಭಾರದ್ವಾಜ್, ಅನಂತರಾಮನ್ ಸ್ವಾಮಿನಾಥನ್ ನಾಯಕ, ನಾಯಕಿಯಾಗಿ ಅಭಿನಯಿಸಿದ್ದಾರೆ. ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ನಡೆಯಿತು.

ವೇದಿಕೆಯಲ್ಲಿ ನಿರ್ದೇಶಕ ಪರಮೇಶ್ ಮಾತನಾಡಿ, ಕಮರೊಟ್ಟು ಚೆಕ್‌ಪೋಸ್ಟ್ ಚಿತ್ರವನ್ನು ನಾನು ಟೆಕ್ನಿಕಲಿ ಪ್ರೂವ್ ಮಾಡಿಕೊಳ್ಳಲು ಮಾಡಿದ್ದೆ. ಅದಕ್ಕೆ ಅದ್ಭುತ ಪ್ರತಿಕ್ರಿಯೆ ಬಂತು. ಅದರಲ್ಲಿ ಎರಡನೇ ಭಾಗಕ್ಕೆ ಸಣ್ಣ ಲಿಂಕ್ ಕೊಟ್ಟಿದ್ದೆ. ಕಥೆ ಮಾಡಿಕೊಂಡ ಮೇಲೆ ಗೆಳೆಯ ಪವನ್‌ಗೌಡ ನಿರ್ಮಾಣದಲ್ಲಿ ಜತೆಯಾದರು, ಈ ಕಥೆಯಲ್ಲಿ ಉದಯ ಮೆಹ್ತಾ ಅವರ ಸಹಕಾರವೂ ಇದೆ. ಪ್ಯಾರಾ ನಾರ್ಮಲ್ ಹಾಗೂ ಹಾರರ್ ಜಾನರ್ ಕಥೆ ಇದಾಗಿದ್ದು, ಮೂರು ಡೈಮನ್‌ಷನ್‌ನಲ್ಲಿ ನಡೆಯುತ್ತದೆ ಚಿತ್ರಕಥೆಗೆ ವೆಸ್ಟರ್ನ್ ಸ್ಟೈಲ್ ಫೇಸ್ ಬೇಕಿತ್ತು. ಹಾಗಾಗಿ ಪ್ರಿಯಾಂಕಾ ಉಪೇಂದ್ರರನ್ನು ಸಂಪರ್ಕಿಸಿ ಕಥೆ ಹೇಳಿ ಮುಖ್ಯ ಪಾತ್ರಕ್ಕೆ ಒಪ್ಪಿಸಿದೆವು. ಉಡುಪಿ, ಮಂಗಳೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿದ್ದು, ಆ.1ಕ್ಕೆ ಚಿತ್ರ ತೆರೆಗೆ ಬರಲಿದೆ ಎಂದರು.

ನಂತರ ಪ್ರಿಯಾಂಕಾ ಉಪೇಂದ್ರ ಮಾತನಾಡುತ್ತಾ, ಈ ಸಿನಿಮಾ ನನಗೆ ತುಂಬಾ ಸ್ಪೆಷಲ್, ಟೆಕ್ನಿಕಲಿ ಯಾವುದೇ ಹಾಲಿವುಡ್, ಕೊರಿಯನ್ ಚಿತ್ರಕ್ಕೂ ಕಮ್ಮಿಯಿಲ್ಲದಂತೆ ಈ ಸಿನಿಮಾ ಮಾಡಿದ್ದಾರೆ. ಮೊದಲ ಬಾರಿಗೆ ನಾನೊಬ್ಬ ಪ್ಯಾರಾ ನಾರ್ಮಲ್ ರೀಸರ್ಚರ್ ಆಗಿ ಅಭಿನಯಿಸಿದ್ದೇನೆ. ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ ಕಾಂಪಿಟೇಶನ್ ಮಾಡೋ ಚಿತ್ರವಿದು ಎಂದರು.


ನಾಯಕ ಅನಂತ್‌ರಾಮನ್ ಮಾತನಾಡುತ್ತಾ, ಮಿಥುನರಾಶಿ ಸೀರಿಯಲ್ ಮಾಡ್ತಿದ್ದಾಗ ಬಂದ ಆಫರ್ ಈ ಚಿತ್ರ ಆರ್ಯ ಎಂಬ ಪಾತ್ರ ಮಾಡಿದ್ದೇನೆ ಎಂದರೆ, ನಾಯಕಿ ರಜನಿ ಭಾರದ್ವಾಜ್ ಮಾತನಾಡುತ್ತಾ ತುಂಬಾ ರಿಸ್ಕಿ ಲೊಕೇಶನ್‌ಗಳಲ್ಲಿ ಚಿತ್ರೀಕರಣ ಮಾಡಿದ್ದೇವೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಎ.ಟಿ.ರವೀಶ್ ಮಾತನಾಡಿ, ಚಿತ್ರದಲ್ಲಿ ಮೂರು ಹಾಡುಗಳಿದ್ದು, ಈಗಾಗಲೇ 2 ಹಾಡು ರಿಲೀಸಾಗಿವೆ ಎಂದರು.



ಸಿನಿಪದಬಂಧ–586



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು
ವಿಳಾಸ
ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಸುನಿಲ್ ಕುಮಾರ್ ದೇಸಾಯಿ ಅವರ ಸಸ್ಪೆನ್ಸ್ ಚಿತ್ರವಿದು	2
2. ಉದಯ ಕುಮಾರ್‌ನ ಬಂಗಲೆ ಗೌರವಿರಿಸಿಕೊಂಡಿದೆ	6
4. ರಂಗೇನಾ ಹಳ್ಳಿಯಾಗೆ ರಂಗೇಗೌಡ ಚಿತ್ರದ ನಾಯಕಿ	5
7. ರವಿಚಂದ್ರನ್ ಯುದ್ಧ ಶೂರ	4
8. ರಾಮರಾಜ್ಯದಲ್ಲಿ ಕಾಣಿಸಿಕೊಂಡವರು ಒಳ್ಳೆಯವರಲ್ಲ	4
10. ಸಿಹಿ ನೀಡುವ ಹುಳುಗಳು ನಿರ್ಮಿಸಿದ ಪಂಜರ	4
11. ಕುಮಾರ್ ಗೋವಿಂದ್ – ಸುಧಾರಾಣಿಯ ಪ್ರೀತಿಯ ಮಿಲನ	7
14. ಟಿ.ವಿ.ಸಿಂಗ್ ಠಾಕೋರ್ ನಿರ್ದೇಶನದಲ್ಲಿ ಅರಳಿದ ಪ್ರತಿಭೆ	4
15. ಕ್ಷೀರ – ಮಧು	4
17. ಆಕಾಶದಿಂದ ಧರೆಗಿಳಿದ ರಂಭೆ ಇವಳೇ ಇವಳೇ.....	6
19. ಕಾಡಿಗೆಯಂತಿರುವ ನಟಿ	3

ಮೇಲಿನಿಂದ ಕೆಳಕ್ಕೆ

1. ಆಸೆಗಳ ತ್ಯಜಿಸಿದ ಆಧ್ಯಾತ್ಮಿಕ ವ್ಯಕ್ತಿಗೆ ಹೀಗೆನ್ನಿ	3
2. ರಮೇಶ್ – ಚಾರುಲತಾ ನಡುವಿನ ವಿವಾಹ	3
3. ಮೇಯರ್ ಮುತ್ತಣ್ಣ ಚಿತ್ರದ ಹಾಡೊಂದರ ಆರಂಭ ಚಿತ್ರವೂ ಹೌದು	8
4. ಶಿವರಾಜ್ ಕುಮಾರ್ – ವಿದ್ಯಾಶ್ರೀ ಅಭಿನಯದ ಚಿತ್ರ	8
5. ರವಿಚಂದ್ರನ್ ಬುದ್ಧಿವಂತ	2
6. ಕನ್ನಡದ ಫೈರ್ ಬಾಲ್	4
7. ಶಿವಣ್ಣನ ಯುದ್ಧಭೂಮಿ	4
9. ಅಸುರ ಇಲ್ಲಿ ತಲೆಕೆಳಗಾಗಿದ್ದಾನೆ	3
12. ಆಪ್ತರಕ್ಷಕ ಚಿತ್ರದ ನಟಿಯರಲ್ಲಿ ಒಬ್ಬಾಕೆ	2
13. ಶ್ರೀ ಕೃಷ್ಣ _ _ _ _	4
16. ಮಾನವ ಇಲ್ಲಿ ಅಸ್ತವ್ಯಸ್ತಗೊಂಡಿದ್ದಾನೆ	3
18. ದರ್ಶನ್ – ರಮ್ಯ ಅಭಿನಯದ ಚಿತ್ರ	2

ಸಿನಿ ಪದಬಂಧ 585ರ ಉತ್ತರ

	ನ್ಯೂ	ಸ್		ಸಂ	ಸಾ	ರ	ದ	ಗು	ಟ್ಟು	
	ಡೆ			ಯು				ಣ		
ಚಿ	ಲ್ಲಿ	ದ	ರ	ಕ್ತ		ದಾ		ನೋ		ರಾ
ಲು					ಸಿಂ	ಹ	ಜೋ	ಡಿ		ಜಾ
ವಿ	ಮೋ	ಚ	ನೆ		ಹಾ			ಹೆ		ಹು
ನ		ಕೋ			ಸ		ಹೆ	ಣ್ಣು	ಹು	ಲಿ
ಚಿ	ಗು	ರಿ	ದ	ಕ	ನ	ಸು		ಕೊ		
ಲಿ				ಲ್ಕಿ		ಹಾ	ವಾ	ಡಿ	ಗ	
ಪಿ	ತಾ	ಮ	ಹ			ಸಿ				
ಲಿ			ಸೀ		ಅ	ನಿ	ಲ್	ಕ	ಪೂ	ರ್
		ಶ್ರೀ	ನಾ	ಥ್				ರ್ಣ		

ವಿಜೇತರು: ಶೈಲೇಶ್ ಎಸ್, S/O ಸಿದ್ದರಾಜು, ನಂ.10, 8ನೇ ಕ್ರಾಸ್, ಗಿರಿದರ್ಶಿನಿ ಬಡಾವಣೆ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಬ್ಯಾಂಕ್ ನಕಲಿ ಸೀಲ್ ಬಳಸಿ ಪುರಸಭೆಗೆ ಲಕ್ಷಾಂತರ ರೂ. ವಂಚನೆ ಪ್ರಕರಣ

ಬೆಂಗಳೂರಲ್ಲಿ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಬಂಧನ

ಒಂದು ದಿನ ಪೊಲೀಸ್ ಕಸ್ಟಡಿಗೆ



ನಂಜುಂಡಸ್ವಾಮಿ

ತಿ.ನರಸೀಪುರ, ಜು.24– ಕೆನರಾ ಬ್ಯಾಂಕ್ ಸೀಲ್ ಅನ್ನು ನಕಲು ಮಾಡಿ ಪುರಸಭೆಗೆ ಲಕ್ಷಾಂತರ ರೂ. ಆಸ್ತಿ ತೆರಿಗೆ ವಂಚಿಸಿದ ಆರೋಪದ ಮೇರೆಗೆ ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಅವರನ್ನು ತಿ.ನರಸೀಪುರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಮ್ಮ ವಿರುದ್ಧ ಪ್ರಕರಣ ದಾಖಲಾದ ನಂತರ ತಲೆಮರೆಸಿಕೊಂಡಿದ್ದ ನಂಜುಂಡಸ್ವಾಮಿ ಬೆಂಗಳೂರಿನ ಸಂಬಂಧಿಕರ ಮನೆಯಲ್ಲಿ ಇರುವ ಬಗ್ಗೆ ಖಚಿತ ಮಾಹಿತಿ ಪಡೆದ ತಿ.ನರಸೀಪುರ ಠಾಣೆ ಪೊಲೀಸರು ಅಲ್ಲಿಗೆ ತೆರಳಿ ಬುಧವಾರ ರಾತ್ರಿ ಅವರನ್ನು ಬಂಧಿಸಿ, ತಿ.ನರಸೀಪುರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಒಂದು ದಿನ ತಮ್ಮ ವಶಕ್ಕೆ ಪಡೆದಿದ್ದಾರೆ.

ಎಸ್‌ಪಿ ವಿಷ್ಣುವರ್ಧನ್, ನಂಜನಗೂಡು ಡಿವೈಎಸ್‌ಪಿ ರಘು ಹಾಗೂ ಸಿಪಿಐ ಧನಂಜಯ್ ಮಾರ್ಗದರ್ಶನದಲ್ಲಿ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.



ವಿವರ: ಕೆನರಾ ಬ್ಯಾಂಕ್ ಚಲನ್ ಮೂಲಕ ಪುರಸಭೆಗೆ ಪಾವತಿಯಾಗಿದ್ದ 9 ಆಸ್ತಿಗಳ ಸ್ವಯಂಘೋಷಿತ ಆಸ್ತಿ ತೆರಿಗೆ ಹಾಗೂ ಇ-ಖಾತಾ ಹಣ ಪುರಸಭಾ ಖಾತೆಗೆ ಜಮೆಯಾಗದಿರುವುದನ್ನು ಗಮನಿಸಿದ ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ ಅವರು ಆ ಸಂಬಂಧ ಕೆನರಾ ಬ್ಯಾಂಕ್‌ನಲ್ಲಿ ವಿವರಣೆ ಕೇಳಲಾಗಿ ಪುರಸಭೆಗೆ ಸಲ್ಲಿಕೆಯಾಗಿದ್ದ ಸದರಿ ಚಲನ್‌ಗಳ ಮೇಲೆ ಮುದ್ರಿತವಾಗಿರುವ ಸೀಲ್ ನಕಲಿಯಂತೆ ಕಂಡು ಬರುತ್ತಿದೆ ಎಂದು ಬ್ಯಾಂಕ್‌ನಿಂದ ಲಿಖಿತ ಉತ್ತರ ಬಂದ ನಂತರ ಮುಖ್ಯಾಧಿಕಾರಿಗಳು 9 ಆಸ್ತಿ ಮಾಲೀಕರು ಮತ್ತು ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ವಿರುದ್ಧ ಜು.19ರಂದು ತಿ.ನರಸೀಪುರ ಠಾಣೆಗೆ ದೂರು ಸಲ್ಲಿಸಿದ್ದರು. 9 ಆಸಿ ತೆರಿಗೆದಾರರು ಸಲ್ಲಿಸಿದ್ದ ಚಲನ್‌ಗಳಲ್ಲಿ ಬ್ಯಾಂಕ್‌ನ ನಕಲಿ ಸೀಲ್ ಮುದ್ರಿತವಾಗಿತ್ತು. ನಂಜುಂಡಸ್ವಾಮಿ ಹೆಸರಿನಲ್ಲಿ ಯಾವುದೇ ಚಲನ್ ಸಲ್ಲಿಕೆಯಾಗಿರಲಿಲ್ಲ. ಆದರೆ ಸದರಿ 9 ಆಸ್ತಿ ತೆರಿಗೆದಾರರೊಡಗೂಡಿ ನಂಜುಂಡಸ್ವಾಮಿ ಪುರಸಭೆಗೆ ವಂಚಿಸಿದ್ದಾರೆ ಎಂದು ಮುಖ್ಯಾಧಿಕಾರಿಗಳು ದೂರು ಸಲ್ಲಿಸಿದ್ದರಿಂದ ಅವರನ್ನು ಪ್ರಕರಣದಲ್ಲಿ ಮೊದಲ ಆರೋಪಿಯಾಗಿ ಉಲ್ಲೇಖಿಸಿ ಪೊಲೀಸರು ಹುಡುಕಾಟ ನಡೆಸಿದ್ದರು.

9 ಆಸ್ತಿಗಳ ಪೈಕಿ ತಾಲೂಕು ಕುರುಬರ ಸಂಘದ ಆಸ್ತಿಯೂ ಒಂದಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಸಂಘದ ಅಧ್ಯಕ್ಷರ ಹೆಸರನ್ನು ಎಫ್‌ಐಆರ್‌ನಲ್ಲಿ ನಮೂದಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಜು.20ರಂದು ತುರ್ತು ಸಭೆ ನಡೆಸಿದ ತಾಲೂಕು ಕುರುಬರ ಸಂಘವು, ಸಂಘದಿಂದ ಹಣ ಪಡೆದು, ಬ್ಯಾಂಕ್ ನಕಲಿ ಸೀಲ್ ಬಳಸಿ ಪುರಸಭೆಗೆ ವಂಚಿಸುವ ಮೂಲಕ ಸಂಘದ ಹೆಸರಿಗೆ ಕಳಂಕ ತಂದ ಹಿನ್ನೆಲೆಯಲ್ಲಿ ನಂಜುಂಡಸ್ವಾಮಿ ಅವರ ನಿರ್ದೇಶಕ ಸ್ಥಾನ ಹಾಗೂ ಸದಸ್ಯತ್ವವನ್ನು ರದ್ದುಪಡಿಸುವ ನಿರ್ಣಯ ಕೈಗೊಂಡಿತ್ತು. ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿದ್ದ ಸಂಘದ ಅಧ್ಯಕ್ಷ ಮಹೇಶ್ ಅವರು ನಂಜುಂಡಸ್ವಾಮಿ ವಿರುದ್ಧ ಸಂಘದ ವತಿಯಿಂದಲೂ ಪೊಲೀಸರಿಗೆ ದೂರು ಸಲ್ಲಿಸಲಿರುವುದಾಗಿ ತಿಳಿಸಿದ್ದರು.

ಕಠಿಣ ಕಾನೂನು ಕ್ರಮಕ್ಕೆ ಮಾಜಿ ಎಂಎಲ್ಸಿ ಸಿ.ರಮೇಶ್ ಒತ್ತಾಯ

ತಿ.ನರಸೀಪುರ, ಜು.24– ಬ್ಯಾಂಕ್ ಸೀಲ್ ನಕಲು ಮಾಡಿ, ಪಟ್ಟಣದ ಪುರಸಭೆಗೆ ವಂಚಿಸಿರುವ ಸಿಎಂ ಆಪ್ತ, ಪುರಸಭೆ ಮಾಜಿ ಅಧ್ಯಕ್ಷರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಒತ್ತಾಯಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ಮಹದೇವಪ್ಪ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಟಿ.ಎಂ. ನಂಜುಂಡಸ್ವಾಮಿ ಅವರ ಸದಸ್ಯತ್ವ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ ಪಟೇಲ್ ಮಾತನಾಡಿ, ಸಿಎಂ ಸಿದ್ದರಾಮಯ್ಯ ಹಾಗೂ ಉಸ್ತುವಾರಿ ಸಚಿವರ ಕೃಪಾ ಕಟಾಕ್ಷದಿಂದಲೇ ಈ ಹಗರಣ ನಡೆದಿದೆ. ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸಬೇಕು. ನಿಮಗೆ (ಹೆಚ್.ಸಿ. ಮಹದೇವಪ್ಪ) ಸಿಬಿಐ, ಇಡಿ ಮೇಲೆ ನಂಬಿಕೆ ಇಲ್ಲ. ನಿಮ್ಮದೇ ಸರ್ಕಾರದ ಸಿಐಡಿ ತನಿಖೆಗೆ ಆದೇಶ ನೀಡಿ. ಕಳೆದ 8 ವರ್ಷಗಳ ಹಳೆಯ ಕಡತಗಳ ಪರಿಶೀಲಿಸಿ ಯಾವುದೇ ಪಕ್ಷದ ತಪ್ಪಿತಸ್ಥರಿದ್ದರೂ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು ಹಾಗೂ ಪುರಸಭೆಯನ್ನು ಸೂಪರ್ ಸೀಡ್ ಮಾಡಿ ಆಡಳಿತಾಧಿಕಾರಿ ನೇಮಿಸುವಂತೆ ಒತ್ತಾಯಿಸಿದರು.



ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ, ಪ್ರಾಮಾಣಿಕವಾಗಿ ಆಡಳಿತ ನಡೆಸುತ್ತೇವೆ ಎನ್ನುವ ಸಿಎಂ ಸಿದ್ದರಾಮಯ್ಯ ಪುರಸಭೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಗಮನಹರಿಸಬೇಕು. ಉಸ್ತುವಾರಿ ಸಚಿವರ ಸ್ವಕ್ಷೇತ್ರದಲ್ಲಿ ನಡೆದಿರುವ ವ್ಯಾಪಕ ದಂಧೆಯ ಬಗ್ಗೆ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಪುರಸಭೆಯಲ್ಲಿ ಪ್ರತಿ ವರ್ಷ 8 ರಿಂದ 10 ಕೋಟಿ ರೂ. ಬಜೆಟ್ ಮಂಡಿಸಲಾಗುತ್ತದೆ. ಸಾರ್ವಜನಿಕರು ತೆರಿಗೆ ಹಣ ಕಟ್ಟುತ್ತಾರೆ. ಜನಪ್ರತಿನಿಧಿಗಳು ನಮಗೆ ಅಧಿಕಾರ ಕೊಟ್ಟಿರುವುದು ಜನಸೇವೆ ಮಾಡಲು ಎಂಬುದನ್ನು ತಿಳಿದು ಕೆಲಸ ಮಾಡಬೇಕೇ ಹೊರತು ತಮ್ಮ ವೈಯಕ್ತಿಕ ಬೆಳವಣಿಗೆಗೆ ಅಡ್ಡದಾರಿ ಹಿಡಿಯುವ ಕೆಲಸಕ್ಕೆ ಮುಂದಾಗಬಾರದೆಂದು ಹೇಳಿದರು.

> “ಆರೋಪಿ ನಂಜುಂಡಸ್ವಾಮಿ ಪುರಸಭೆಯಲ್ಲಿ ಖಾತೆ ಮಾಡಿಸಿಕೊಡುವ ದಂಧೆಯನ್ನೇ ತನ್ನ ಕಾಯಕ ಮಾಡಿಕೊಂಡಿದ್ದು ಖಾತೆ ಮಾಡಿಸಬೇಕೆಂದಿರುವ ಖಾತೆದಾರರ ಫೋನ್ ನಂಬರ್ ಹುಡುಕಿ ತಾನೇ ಖಾತೆ ಮಾಡಿಸಿಕೊಡುವುದಾಗಿ ಅವರಿಂದ ಹಣ ಪಡೆದು ನಕಲಿ ಸೀಲ್ ಹಾಕಿ ಸಾರ್ವಜನಿಕರು ಹಾಗೂ ಪುರಸಭೆಗೆ ವಂಚನೆ ಮಾಡಿದ್ದಾರೆ. ಹಾಗಾಗಿ ಕಳೆದ 8 ವರ್ಷಗಳಿಂದ ಈತ ಪುರಸಭೆಯಲ್ಲಿ ಮಾಡಿಸಿರುವ ಸಾವಿರಾರು ಖಾತೆಗಳ ಬಗ್ಗೆ ತನಿಖೆ ಮಾಡಬೇಕು ಹಾಗೂ ಈತನ ಮೇಲೆ ಲೋಕಾಯುಕ್ತ ಸೇರಿದಂತೆ 8ಕ್ಕೂ ಹೆಚ್ಚು ಕೇಸ್ ಗಳಿರುವುದರಿಂದ ಗೂಂಡಾ ಕಾಯ್ದೆಯಡಿ ದೂರು ದಾಖಲಿಸಬೇಕು.
> – ಎಸ್.ಕೆ.ಕಿರಣ್, ಪುರಸಭೆ ಸದಸ್ಯ.

ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಮುಖಂಡ ಎನ್.ಲೋಕೇಶ್ ಮಾತನಾಡಿದರು. ಸುದ್ದಿಗೋಷ್ಠಿ ಯಲ್ಲಿ ಕ್ಷೇತ್ರ ಬಿಜೆಪಿ ಮಂಡಲ ಮಾಜಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಅಕ್ಕಿ ನಂಜುಂಡಸ್ವಾಮಿ, ಚೌಹಳ್ಳಿ ಸಿದ್ದರಾಜು, ಕರೋಹಟ್ಟಿ ರಾಜಶೇಖರ್ ಹಾಜರಿದ್ದರು.

ಭೀಮನಕೊಲ್ಲಿಯಲ್ಲಿ ಭೀಮನ ಅಮಾವಾಸ್ಯೆ ವಿಶೇಷ ಪೂಜೆ



ಶಾಸಕ ಅನಿಲ್ ಅವರ ತಾಯಿ ನಾಗಮ್ಮ, ಪತ್ನಿ ಸೌಮ್ಯ ಹಾಗೂ ಕುಟುಂಬಸ್ಥರು ಪೂಜೆ ಸಲ್ಲಿಸಿದರು.

ಹೆಚ್.ಡಿ.ಕೋಟೆ, ಜು.24– ಭೀಮನ ಅಮಾವಾಸ್ಯೆ ಅಂಗವಾಗಿ ತಾಲೂಕಿನ ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆಯಿತು.

ಬೆಳಗ್ಗೆ 7 ಗಂಟೆಗೆ ಮಹದೇಶ್ವರನಿಗೆ ಮಹಾ ರುದ್ರಾಭಿಷೇಕ ಸೇರಿದಂತೆ ವಿವಿಧ ವಿಶೇಷ ಪೂಜೆಗಳು, 9 ಗಂಟೆಗೆ ಮಹಾಮಂಗಳಾರತಿ ನೆರವೇರಿಸಲಾಯಿತು. ಅಲ್ಲದೇ ದೇವಾಲಯಕ್ಕೆ ಆಗಮಿಸಿದ ಭಕ್ತರು ರುದ್ರಾಭಿಷೇಕ ಪೂಜೆ, ಹುಲಿವಾಹನ ಸೇವೆ ನೆರವೇರಿಸಿದರು.

ಭಕ್ತರಿಗೆ ತಾಲೂಕಿನ ಹೆಬ್ಬಲಗುಪ್ಪೆ ಗ್ರಾಮದ 24 ಮನೆ ತೆಲುಗು ಶೆಟ್ಟರು, ನಂಜನಗೂಡು ತಾಲೂಕಿನ ಕಳಲೆ ಗ್ರಾಮದ 24 ಮನೆ ತೆಲುಗು ಶೆಟ್ಟರು ಜನಾಂಗ ದೇಬೂರು ನಾಗರಾಜು ಹಾಗೂ ಭೀಮನ ಕೊಲ್ಲಿ ದೇವಸ್ಥಾನ ಸಮಿತಿ ಸದಸ್ಯರು ಅನ್ನಸಂತರ್ಪಣೆ ಏರ್ಪಡಿಸಿದ್ದರು.

ಈ ವೇಳೆ ದೇವಾಲಯದ ಕಮಿಟಿ ಅಧ್ಯಕ್ಷ ಎಂ.ಪಿ.ಎಸ್.ಮೂರ್ತಿ, ಉಪಾಧ್ಯಕ್ಷ ಎಸ್.ಗುರುಮಲ್ಲಪ್ಪ, ಕಾರ್ಯದರ್ಶಿ ಎಂ.ಎನ್. ಜಗದೀಶ್, ಜೆ.ಪಿ.ಶಿವರಾಜಪ್ಪ, ಸೊಸೈಟಿ ಬಸವಣ್ಣ ಸೇರಿದಂತೆ ಇನ್ನಿತರರಿದ್ದರು. ಶಾಸಕ ಅನಿಲ್ ಅವರ ತಾಯಿ ನಾಗಮ್ಮ ಹಾಗೂ ಪತ್ನಿ ಸೌಮ್ಯ, ಕುಟುಂಬದವರು ಮಹದೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು.

ರೈಲ್ವೆ ಮೇಲ್ಸೆತುವೆ ನೇರವಾಗಿ ನಿರ್ಮಿಸುವಂತೆ ಪ್ರತಿಭಟನೆ

ನಂಜನಗೂಡು, ಜು.24– ನಗರದ ರಾಷ್ಟ್ರಪತಿ ರಸ್ತೆಯ ಭಾರ್ಗವಿ ಚಿತ್ರಮಂದಿರದ ಬಳಿಯ ರೈಲ್ವೆ ಲೆವಲ್ ಕ್ರಾಸಿಂಗ್ ಬಳಿ ನಿರ್ಮಿಸಲು ಉದ್ದೇಶಿಸಿರುವ ರೈಲ್ವೆ ಮೇಲ್ಸೆತುವೆಯನ್ನು ನೇರವಾಗಿ ನಿರ್ಮಿಸುವಂತೆ ಆಗ್ರಹಿಸಿ ಪ್ರಗತಿಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ನಗರದ ರಾಷ್ಟ್ರಪತಿ ರಸ್ತೆಯ ರೈಲ್ವೆ ಲೆವಲ್ ಕ್ರಾಸಿಂಗ್ ಬಳಿ ಗುರುವಾರ ಜಮಾಯಿಸಿದ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಪೂರ್ವ ನಿರ್ಧಾರದಂತೆ ರೈಲ್ವೆ ಮೇಲ್ಸೆತುವೆ ನಿರ್ಮಿಸುವಂತೆ ಆಗ್ರಹಿಸಿದರು.

ರಾಜ್ಯ ಜನ ಸಂಗ್ರಾಮ ಪರಿಷತ್ ಗೌರವಾಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರದ ಸೇತು ಭಾರತ್ ಯೋಜನೆಯಡಿ ನಗರದ ರಾಷ್ಟ್ರಪತಿ ರಸ್ತೆಯ ರೈಲ್ವೆ ಲೆವಲ್ ಕ್ರಾಸಿಂಗ್ ಬಳಿ ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಒಪ್ಪಿಗೆ ನೀಡಿವೆ. ರೈಲ್ವೆ ಇಲಾಖೆ ಅಧಿಕಾರಿಗಳು ಮೇಲ್ಸೆತುವೆ ನಿರ್ಮಾಣಕ್ಕಾಗಿ ರಾಷ್ಟ್ರಪತಿ ರಸ್ತೆ ಇಕ್ಕೆಲಗಳಲ್ಲಿ ಮಾರ್ಕಿಂಗ್ ಮಾಡಿದ್ದಾರೆ. ನಗರಸಭೆ ಸಹ ನಿರ್ಣಯ ಕೈಗೊಂಡು ಒಪ್ಪಿಗೆ ಸೂಚಿಸಿದೆ. ನಗರದ ಅಭಿವೃದ್ಧಿ ದೃಷ್ಟಿಯಿಂದ ಈ ಮೊದಲು ಸಿದ್ದಪಡಿಸಿದ ನಕ್ಷೆಯಂತೆ ರೈಲ್ವೆ ಮೇಲ್ಸೆತುವೆ ನೇರವಾಗಿ ನಿರ್ಮಾಣವಾಗಬೇಕು ಎಂದು ನಗರಸಭೆ ಸರ್ಕಾರಕ್ಕೆ ಪತ್ರ ಬರೆದಿದೆ.




ರೈಲ್ವೆ ಲೆವಲ್ ಕ್ರಾಸಿಂಗ್ ಬಳಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಆದರೆ ಸ್ಥಳೀಯ ರಾಜಕೀಯ ಮುಖಂಡರೊಬ್ಬರು ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕಾಗಿ ತನ್ನ ವಾಣಿಜ್ಯ ಕಟ್ಟಡದ ಸ್ವಲ್ಪಭಾಗ ನೆಲಸಮ ಮಾಡಬೇ ಕಾಗುತ್ತದೆ. ತನ್ನ ಆಸ್ತಿಗೆ ಧಕ್ಕೆಯಾಗುತ್ತದೆ ಎಂಬ ಕಾರಣ ಕೊಟ್ಟು, ರಾಜ್ಯ ರೈಲ್ವೆ ಖಾತೆ ಸಚಿವ ವಿ.ಸೋಮಣ್ಣ ಅವರನ್ನು ಭೇಟಿಯಾಗಿ ಪೂರ್ವ ನಿರ್ಧಾರಿತ ನಕ್ಷೆ ಯಂತೆ ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕೆ ನಗರದ ಜನರ ವಿರೋಧವಿದೆ ಎಂದು ಸುಳ್ಳು ಹೇಳಿ, ಮೊದಲಿನ ನಕ್ಷೆಗೆ ಬದಲಾಗಿ ಮೇಲ್ಸೆತುವೆ ಸರಸ್ವತಿ ಕಾಲೋನಿ, ನಗರ ಪೊಲೀಸ್ ಠಾಣೆ ಬಳಸಿಕೊಂಡು 'ಕೊಂಕಣ ಸುತ್ತಿ ಮೈಲಾರಕ್ಕೆ ಬಂದರು' ಎಂಬ ಗಾದೆ ಮಾತಿನಂತೆ, ರೈಲ್ವೆ ಮೇಲ್ಸೆ ತುವೆ ನಿರ್ಮಿಸುವಂತೆ ತನ್ನ ರಾಜಕೀಯ ಪ್ರಭಾವ ಬೀರುತ್ತಿದ್ದಾರೆ. ತಾನೇ ತಯಾರಿಸಿದ ನಕ್ಷೆ ನೀಡಿ, ರೈಲ್ವೆ ಇಲಾಖೆ ಹಾಗೂ ರೈಲ್ವೆ ಸಚಿವರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ರಾಜಕೀಯ ವ್ಯಕ್ತಿಯ ಮಾತು ಕೇಳಿ ಪೂರ್ವ ನಿರ್ಧಾರಿತ ನಕ್ಷೆಯನ್ನು ರೈಲ್ವೆ ಇಲಾಖೆ ಬದಲಿಸಲು ಹೊರಟರೆ ನಗರದ ನಾಗರಿಕರ ಪ್ರತಿಭಟನೆ ಎದುರಿಸಬೇಕಾಗುತ್ತದೆ. ನಗರದ ಪ್ರಗತಿಪರ ಸಂಘಟನೆಗಳು ತೀವ್ರ ಹೋರಾಟ ರೂಪಿಸಬೇಕಾಗುತ್ತೆ ಆದ್ದರಿಂದ ರೈಲ್ವೆ ಸಚಿವ ವಿ.ಸೋಮಣ್ಣ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ದರ್ಶನ್ ಅವರು ಎಚ್ಚೆತ್ತು ಪೂರ್ವ ನಿರ್ಧಾರದಂತೆ ರೈಲ್ವೆ ಮೇಲ್ಸೆತುವೆಯನ್ನು ನೇರವಾಗಿಯೇ ನಿರ್ಮಿಸಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ದಸಂಸ ಜಿಲ್ಲಾ ಸಂಯೋಜಕ ಮಹದೇವಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಬಸವಣ್ಣ, ಸರ್ವೇಶ್, ನಾಗರಾಜು, ಪರಮೇಶ್, ಬಸವರಾಜು, ಶಿವಕುಮಾರ್ ಉಪಸ್ಥಿತರಿದ್ದರು.

ಪ್ರಾಂಶುಪಾಲರಿಗೆ ಸನ್ಮಾನ



ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆಯ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ಬಿ.ಮಹೇಶ್ ಅವರು ಪ್ರಾಂಶುಪಾಲರಾಗಿ ಬಡ್ತಿ ಹಾಗೂ ಉಪನ್ಯಾಸಕಿ ಎಂ.ಆರ್.ಸವಿತಾ ಅವರು ಬೇರೆಡೆಗೆ ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಅವರನ್ನು ಕೆಪಿಎಸ್ ಶಾಲೆ ಅಧ್ಯಾಪಕ ವರ್ಗ, ಶಾಲಾ ಕಾಲೇಜು ಅಭಿವೃದ್ಧಿ ಸಮಿತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಕೆಪಿಎಸ್ ಶಾಲೆಯ ಉಪಾಧ್ಯಕ್ಷ ಎಂ.ಎನ್. ಸೋಮಣ್ಣ, ಪ್ರಾಂಶುಪಾಲ ರಾಚಯ್ಯ, ಉಪಪ್ರಾಂಶು ಪಾಲ ಸಿ.ಪುಟ್ಟಸ್ವಾಮಿ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಜಯಂತ್, ಎಸ್‌ಡಿಎಂಸಿ ಅಧ್ಯಕ್ಷ ಎಂ.ರಂಗಸ್ವಾಮಿ, ಅಧ್ಯಾಪಕ ವೃಂದ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಕ್ರೈಸ್ತ ಹಿತರಕ್ಷಣಾ ಸಮಿತಿಗೆ ಎಂ.ಜಾರ್ಜ್ ಅಧ್ಯಕ್ಷ

ಹುಣಸೂರು, ಜು.24– ತಾಲೂಕು ಕ್ರೈಸ್ತ ಹಿತರಕ್ಷಣಾ ಸಮಿತಿ ನೂತನ ಅಧ್ಯಕ್ಷರಾಗಿ ಎಂ.ಜಾರ್ಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ನಗರದ ಕ್ಷೇವಿಯರ್ ಚರ್ಚ್ ಸಮುದಾಯ ಭವನದಲ್ಲಿ ಸಂಘದ ಗೌರವಾಧ್ಯಕ್ಷ ಎಂ.ಜಾರ್ಜ್ ವಿ. ಮನೋಹರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕ್ರೈಸ್ತ ಹಿತರಕ್ಷಣಾ ಸಮಿತಿ ನೂತನ ಅಧ್ಯಕ್ಷರಾಗಿ ಎಂ.ಜಾರ್ಜ್ ಅವಿರೋಧವಾಗಿ ಆಯ್ಕೆಯಾದರು. ಕಾರ್ಯದರ್ಶಿಯಾಗಿ ದೇವಮುತ್ತು, ನಿರ್ದೇಶಕರಾಗಿ ಜಾನ್ ಕ್ರಿಸ್ಟೋಫರ್, ರಾಯಪ್ಪ ಪ್ರಕಾಶ್, ಎಂ.ಗೀತಾ, ಡೊನಾಲ್ಡ್, ಪ್ರಿಯಾಂಕಾ ಆಯ್ಕೆಯಾಗಿದ್ದಾರೆ ಎಂದು ಸಂಘದ ಮಾಜಿ ಅಧ್ಯಕ್ಷ ಬಲವೇಂದ್ರನ್ ತಿಳಿಸಿದ್ದಾರೆ. ಈ ವೇಳೆ ಸಹಕಾರ ಸಂಘದ ಅಧ್ಯಕ್ಷ ಜಾರ್ಜ್ ಹಂಟ್ ಇದ್ದರು.

ಇಂದು ಗುರುವಂದನಾ ಕಾರ್ಯಕ್ರಮ

ಚುಂಚನಕಟ್ಟೆ, ಜು.24– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಜು.24ರಂದು ಬೆಳಗ್ಗೆ 11 ಗಂಟೆಗೆ ಗುರುವಂದನಾ ಮತ್ತು ಸ್ನೇಹ ಬಂಧನ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಮುಡಾ ನಿವೃತ್ತ ಇಂಜಿನಿಯರ್ ಗೌಡಯ್ಯ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದು, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎ.ಸಿ.ಪ್ರೀತಿ, ಡಾ.ಜೆ.ಭಾನುಪ್ರಕಾಶ್, ರಶ್ಮಿ ಸೇರಿದಂತೆ ಇತರರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮಕ್ಕೆ ಶಾಲೆಯ ಹಳೇ ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಶಾಲೆ ಹಳೆಯ ವಿದ್ಯಾರ್ಥಿಗಳ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರನೇ ಪುಟದಿಂದ

ನಾವು ಹೈಕೋರ್ಟ್ ಮಾಡಿದ ತಪ್ಪು ಮಾಡಲ್ಲ!

ಪ್ರತಿಯೊಬ್ಬ ಆರೋಪಿಯ ಬಗ್ಗೆಯೂ ಆಳವಾದ ವಿಚಾರಣೆ ನಡೆಸಿದ ಕೋರ್ಟ್, ಎ-1 ಪವಿತ್ರಾಗೌಡ ಬಗ್ಗೆ ಗಂಭೀರವಾದ ಅಭಿಪ್ರಾಯ ವ್ಯಕ್ತಪಡಿ ಸಿದೆ. ಇಷ್ಟೆಲ್ಲಾ ಅನಾಹುತಕ್ಕೆ ಪವಿತ್ರಾಗೌಡ ಕಾರಣ ಅಂದಿದೆ. ಸಮಸ್ಯೆ ಮೂಲವೇ ನೀವು, ನಿಮ್ಮಿಂದಲೇ ಆಗಿದ್ದು. ಇಷ್ಟೆಲ್ಲಾ 'ಸಾಕ್ಷ್ಯ ಇದ್ದರೂ ಬೇಲ್ ಯಾಕೆ ಕೊಡಬೇಕು? ಇದು ಬರೀ ಕೊಲೆ ಅಲ್ಲ. ವ್ಯವಸ್ಥಿತ ಪಿತೂರಿ, ಷಡ್ಯಂತ್ರ. ಸಾಕ್ಷ್ಯ ಇದ್ದರೂ ಯಾಕೆ ಜಾಮೀನು ಮುಂದುವರಿಸಬೇಕು? ದರ್ಶನ್–ಪವಿತ್ರಾಗೌಡಗೆ ಏನು ಸಂಬಂಧ, ಎ1 ಪವಿತ್ರಾಗೌಡ ಪವನ್‌ಗೆ 55 ಬಾರಿ ಕರೆ ಮಾಡಿದ್ಯಾಕೆ? ಅಂತಲೂ ಜಡ್ಜ್ ಪಾರ್ದಿವಾಲ ಅವರು ಪವಿತ್ರಾಗೌಡ ವಕೀಲರನ್ನು ಪ್ರಶ್ನಿಸಿದ್ದಾರೆ.

ಜಡ್ಜ್ ಪ್ರಶ್ನೆಗೆ ಉತ್ತರಿಸಿದ ಪವಿತ್ರಾಗೌಡ ಪರ ವಕೀಲರು, ಕೊಲೆಗೂ ಪವಿತ್ರಾಗೌಡಗೂ ಸಂಬಂಧ ಇಲ್ಲ. ರೇಣುಕಾಸ್ವಾಮಿ ಕಿಡ್ನ್ಯಾಪ್ ಪವಿತ್ರಾಗೆ ಗೊತ್ತಿರಲಿಲ್ಲ. ಪವಿತ್ರಾಗೆ ಅಪಹರಣಕಾರರ ಪರಿಚಯವೂ ಇಲ್ಲ. ರೇಣುಕಾಗೆ ಚಪ್ಪಲಿಯಲ್ಲಿ ಹೊಡೆದು ಪವಿತ್ರಾ ವಾಪಸ್ ಆಗಿದ್ದಾರೆ ಎಂದರು.

ಕೊಲೆಯಾದ ರೇಣುಕಾಸ್ವಾಮಿ, ನಟ ದರ್ಶನ್ ಅಭಿಮಾನಿ ಆಗಿದ್ದ. ಪ್ರಕರಣದ ಎ1 ಆರೋಪಿ ಪವಿತ್ರಾಗೌಡ ದರ್ಶನ್ ಜೊತೆಗೆ ವಿವಾಹೇತರ ಸಂಬಂಧ ಲಿವ್ ಇನ್ ರಿಲೇಷನ್ ಶಿಪ್‌ನಲ್ಲಿದ್ದರು. ಹೀಗಾಗಿ ರೇಣುಕಾಸ್ವಾಮಿ ಅಸಭ್ಯವಾಗಿ ಮೆಸೇಜ್ ಮಾಡಿದ್ದ. ಇದರಿಂದ ಆಕ್ರೋಶಗೊಂಡು ಎ2 ಆರೋಪಿ ದರ್ಶನ್ ತನ್ನ ಸ್ನೇಹಿತರು, ಅಭಿಮಾನಿ ಸಂಘದ ಸದಸ್ಯರನ್ನು ಬಳಸಿಕೊಂಡು ಹತ್ಯೆ ಮಾಡಿದ್ದಾರೆ ಎಂದು ಸರ್ಕಾರದ ಪರ ವಕೀಲ ಸಿದ್ಧಾರ್ಥ್ ಲೂಥ್ರಾ ಪ್ರಬಲ ವಾದ ಮಂಡಿಸಿದ್ದಾರೆ.

ರೇಣುಕಾಸ್ವಾಮಿ ಎನ್ನುವ ವ್ಯಕ್ತಿಯನ್ನು ಚಿತ್ರದುರ್ಗದಿಂದ ಕಿಡ್ನ್ಯಾಪ್ ಮಾಡಿಕೊಂಡು ಬಂದು ಬೆಂಗಳೂರಿನಲ್ಲಿರುವ ಪಟ್ಟಣಗೆರೆ ಶೆಡ್‌ನಲ್ಲಿ ಮಾರಾಣಾಂತಿಕ ಹಲ್ಲೆ ಮಾಡಿ, ಹತ್ಯೆ ಮಾಡಿದ್ದಾರೆ. ಹಲ್ಲೆಗೂ ಮುನ್ನ ಎಲ್ಲರೂ ಥಳಿಸಿದ್ದಾರೆ, ಕರೆಂಟ್ ಶಾಕ್ ನೀಡಿದ್ದಾರೆ. ಕಬ್ಬಿಣದ ರಾಡ್, ಕೋಲಿನಿಂದ ಹೊಡೆದಿದ್ದಾರೆ, ಎದೆಗೆ ಬಲವಾಗಿ ಒದೆಯಲಾಗಿದೆ. ಆರಂಭದಲ್ಲಿ ಹಣಕಾಸಿನ ಕಾರಣಕ್ಕೆ ಹತ್ಯೆ ಮಾಡಿದ್ದಾಗಿ ನಾಲ್ವರು ಶರಣಾದರು. ಬಳಿಕ ತನಿಖಾಧಿಕಾರಿ ವಿಚಾರಣೆ ನಡೆಸಿದಾಗ ದೊಡ್ಡ ಜಾಲವೇ ಬಯಲಾಗಿದೆ. ಕೆಳ ಹಂತದ ನ್ಯಾಯಾಲಯ ಕೆಲವರಿಗೆ, ಹೈಕೋರ್ಟ್ ಈ ಏಳು ಮಂದಿಗೆ ಜಾಮೀನು ನೀಡಿದೆ. ಇದನ್ನು ನಾವು ಪ್ರಶ್ನೆ ಮಾಡಿ ಬಂದಿದ್ದೇವೆ. ಕೊಲೆ ಮಾಡಿರುವುದಕ್ಕೆ ಸಿಸಿಟಿವಿ ದೃಶ್ಯಾವಳಿಗಳು ಸೇರಿ ಪ್ರಬಲ ಸಾಕ್ಷ್ಯಗಳಿವೆ. ಆದ್ದರಿಂದ ಆರೋಪಿಗಳ ಜಾಮೀನು ರದ್ದು ಮಾಡಬೇಕು ಎಂದು ವಾದಿಸಿದರು. ಸುಮಾರು ಒಂದು ತಾಸು ವಾದ ಮಂಡಿಸಿದ ಸಿದ್ಧಾರ್ಥ ಲೂಥ್ರಾ ಆರೋಪಿಗಳ ಪಾತ್ರದ ಬಗ್ಗೆ ಸುಪ್ರೀಂಗೆ ಇಂಚಿಂಚು ಮಾಹಿತಿ ನೀಡಿದರು.

ಎಲ್ಲ ಆರೋಪಿಗಳಿಗೆ ಜಾಮೀನು ಸಿಕ್ಕಿದೆ. ಮುಖ್ಯವಾಗಿ ಎ2 ಆರೋಪಿ ದರ್ಶನ್ ಆರೋಗ್ಯ ಕಾರಣ ನೀಡಿ ಜಾಮೀನು ಪಡೆದರೂ ಬಳಿಕ ರೆಗ್ಯೂಲರ್ ಬೇಲ್ ಸಿಕ್ಕಿದೆ. ಜಾಮೀನು ಪಡೆದ ಬಳಿಕ ಅವರು ಆಸ್ಪತ್ರೆ ಬದಲು ಸಿನಿಮಾ ಶೂಟಿಂಗ್, ವಿದೇಶ ಪ್ರವಾಸ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ.

ಚಾರ್ಜ್ ಇನ್ನು ಫ್ರೇಮ್ ಆಗಿಲ್ಲ. ಆದರೆ ಆರೋಪಿಗಳ ವಿರುದ್ಧ ಪ್ರಬಲ ಸಾಕ್ಷ್ಯಗಳಿವೆ. ಆರೋಪಿಗಳು ನಿರಂತರ ಸಂಪರ್ಕದಲ್ಲಿದ್ದಾರೆ. ಎಲ್ಲರ ನಂಬರ್‌ಗಳು ಒಂದೇ ಕಡೆ ಟ್ರೇಸ್ ಆಗಿದೆ. ಸಿಸಿಟಿವಿ ದೃಶ್ಯಗಳಲ್ಲಿ ಇವರ ಚಲನವಲನಗಳಿವೆ. ಕೆಲವು ಆರೋಪಿಗಳು ಹಲ್ಲೆ ನಡೆಸಿ ಅದನ್ನು ಎ1–ಎ2 ಆರೋಪಿಗಳಿಗೆ ಕಳುಹಿಸಿದ್ದಾರೆ. ಅನೇಕ ದೂರವಾಣಿ ಸಂಭಾಷಣೆಗಳು ನಡೆದಿವೆ. ರೇಣುಕಾಸ್ವಾಮಿ ಹಲ್ಲೆಯ 3 ನಿಮಿಷದ ವಿಡಿಯೋ ಇದೆ. ಪವಿತ್ರಾಗೌಡ ಚಪ್ಪಲಿಯಿಂದ ಹಲ್ಲೆ ಮಾಡಿದ್ದಾರೆ. ದರ್ಶನ್ ಎದೆಗೆ ಒದ್ದಿದ್ದಾರೆ. ಸತ್ತ ಮೇಲೆ ಪವಿತ್ರಾಗೌಡಗೆ ಫೋಟೋ ಕಳುಹಿಸಿ ಡಿಲೀಟ್ ಮಾಡಲಾಗಿದೆ. ಆರೋಪಿಗಳ ಮೊಬೈಲ್‌ನಲ್ಲಿ ಹತ್ಯೆ ಫೋಟೋಗಳಿವೆ. ಪುನೀತ್ ಫೋನ್‌ನಿಂದ ಫೋಟೋ ರಿಕವರಿ ಮಾಡ ಲಾಗಿದೆ. ಲಾಠಿ ಮೇಲೆ ರಕ್ತದ ಕಲೆಗಳಿವೆ. ಆರೋಪಿಗಳ ಬಟ್ಟೆ, ಚಪ್ಪಲಿಯಲ್ಲಿ ರೇಣುಕಾಸ್ವಾಮಿ ರಕ್ತದ ಕಲೆ ಇದೆ. ಇಷ್ಟೆಲ್ಲ ಆದ ಮೇಲೂ ದರ್ಶನ್ ಜೊತೆ ಫೋಟೋ ತೆಗೆಸಿಕೊಂಡಿದ್ದಾರೆ. ಪ್ರತಿಯೊಬ್ಬ ಆರೋಪಿಯ ಡಿಎನ್‌ಎ ಮ್ಯಾಚ್ ಮಾಡಲಾಗಿದೆ. 7 ಕಿ.ಮೀ.ವರೆಗಿನ ವಿಡಿಯೋ ಪರಿಶೀಲಿಸಲಾಗಿದೆ ಎಂದು ಕೋರ್ಟ್ ಗಮನಕ್ಕೆ ತಂದರು.

ಡಿಎನ್‌ಎ ವಿರುದ್ಧ ಕ್ರಿಮಿನಲ್ ಕೇಸ್

ದಾವೆ ಹೂಡುವಂತೆ ಏಕಸದಸ್ಯ ಆಯೋಗ ಮಾಡಿರುವ ಶಿಫಾರಸ್ಸನ್ನು ಸಭೆ ಅಂಗೀಕರಿಸಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದರು. ಕಾಲ್ತುಳಿತ ಪ್ರಕರಣದಲ್ಲಿ ಸರ್ಕಾರದ ವೈಫಲ್ಯ ಇಲ್ಲವೇ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅಂದಿನ ವಿಜಯೋತ್ಸವ ಕಾರ್ಯಕ್ರಮದಲ್ಲಿ ಸಕ್ರಿಯರಾಗಿ ಪಾಲ್ಗೊಂಡಿ ದ್ದರು. ಈ ಬಗ್ಗೆ ಆಯೋಗ ಏನು ಶಿಫಾರಸು ಮಾಡಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಸಮರ್ಪಕ ಉತ್ತರ ನೀಡದೆ, ಮಾಧ್ಯಮಗಳಿಗೆ ತನಿಖೆ ಶಿಫಾರಸು ಸಂಬಂಧ ದಾಖಲೆಗಳನ್ನು ಒದಗಿಸಲಾಗಿದ್ದು, ಪರಿಶೀಲಿಸಿಕೊಳ್ಳಿ ಎಂದಷ್ಟೇ ತಿಳಿಸಿ, ಸುದ್ದಿಗೋಷ್ಠಿ ಮುಕ್ತಾಯಗೊಳಿಸಿದರು.

ಅಭಿಮನ್ಯು ಟೀಂ ಆ.4ಕ್ಕೆ ಮೈಸೂರಿಗೆ



ಬೆಂಗಳೂರಿನ ವಿಕಾಸಸೌಧದ ಕಚೇರಿಯಲ್ಲಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ದಸರಾ ಗಜಪಡೆಯ ಮೊದಲ ತಂಡದ 9 ಆನೆಗಳ ಪಟ್ಟಿ ಬಿಡುಗಡೆ ಮಾಡಿದರು.

7 ಗಂಡಾನೆ ಹಾಗೂ ದುಬಾರೆ ಶಿಬಿರದ ಕಾವೇರಿ (45) ಹಾಗೂ ಬಳ್ಳೆಯ(ದೊಡ್ಡಹರವೆ) ಲಕ್ಷ್ಮೀ(53) ಹೆಣ್ಣಾನೆಗಳು ಮೊದಲ ತಂಡದಲ್ಲಿ ಮೈಸೂರಿಗೆ ಆಗಮಿಸಲಿವೆ. ಎರಡನೇ ಹಂತದಲ್ಲಿ 5 ಆನೆಗ ಳನ್ನು ಮೈಸೂರಿಗೆ ಕರೆತರಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕರಾದ ಪ್ರಭಾಸ್ ಚಂದ್ರ ರೇ(ಪಿ.ಸಿ.ರೇ), ಅರಣ್ಯ ಇಲಾಖೆ ಕಾರ್ಯದರ್ಶಿ ಮನೋಜ್‌ಕುಮಾರ್, ಪಿಸಿಸಿಎಫ್ (ಎಫ್‌ಸಿ) ಮಹೇಶ್ ಶಿರೂರ್, ಮೈಸೂರು ವೃತ್ತ ಸಿಎಫ್ ಡಾ.ಮಾಲತಿ, ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಬಿರಾದಾರ್ ಪಾಲ್ಗೊಂಡಿದ್ದರು.

ಅರಣ್ಯ ಇಲಾಖೆಯ ಕೈ ಹಿಡಿದ ಕಾವೇರಿ

ಮೈಸೂರು, ಜು.24(ಎಂಟಿವೈ)– ಗಜಪಡೆ ಆಯ್ಕೆ ಪ್ರಕ್ರಿಯೆಯಲ್ಲಿ ಅರಣ್ಯ ಇಲಾಖೆಗೆ ಕಾವೇರಿ ವರವಾಗಿದ್ದಾಳೆ. ಆರು ವರ್ಷದ ನಂತರ ಮತ್ತೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೊದಲ ತಂಡದಲ್ಲೇ ಆಯ್ಕೆಯಾಗಿದ್ದಾಳೆ.

ಮೊದಲ ತಂಡದ ಸಂಭವನೀಯ ಪಟ್ಟಿಯಲ್ಲಿ ಕಳೆದ ಜಂಬೂಸವಾರಿ ಮೆರವಣಿಗೆಯಲ್ಲಿ ಕುಮ್ಕಿ ಆನೆಯಾಗಿ ಯಶಸ್ವಿಯಾಗಿ ಹೆಜ್ಜೆ ಹಾಕಿದ್ದ ಬಂಡೀಪುರದ ರಾಂಪುರ ಕ್ಯಾಂಪ್‌ನ ಹಿರಣ್ಯ ಹಾಗೂ ಲಕ್ಷ್ಮೀ ಆನೆ ಗರ್ಭ ಧರಿಸಿರುವುದು ಖಾತರಿಯಾಗಿತ್ತು. ಅದರಲ್ಲೂ ಹಿರಣ್ಯ ಆನೆ ಈ ವಾರದೊಳಗೆ ಮರಿ ಹಾಕುವ ಸಾಧ್ಯತೆಗಳು ಇದ್ದು, ಅದನ್ನು ರಾಂಪುರ ಶಿಬಿರದಲ್ಲಿ ವಿಶೇಷ ಆರೈಕೆ ಮಾಡಲಾಗುತ್ತಿದೆ. ಕಳೆದ ನಾಲ್ಕು ದಿನದ ಹಿಂದಷ್ಟೇ ಸ್ಕ್ಯಾನ್ ಮಾಡಿ ಮತ್ತೊಮ್ಮೆ ಪರೀಕ್ಷಿಸಿದಾಗ ಹಿರಣ್ಯಳೊಂದಿಗೆ ಲಕ್ಷ್ಮಿಯೂ ಗರ್ಭ ಧರಿಸಿರುವುದು ಖಾತರಿಯಾಗಿದೆ. ಇದರಿಂದ ಅಂತಿಮ ಕ್ಷಣದಲ್ಲಿ ಆ ಎರಡು ಆನೆಗಳು ದಸರಾ ಪಡೆಯಲ್ಲಿ ಸ್ಥಾನ ಕಳೆದುಕೊಂಡಿವೆ. 2019ರವರೆಗೆ ಹಲವು ಬಾರಿ ದಸರಾ ಮಹೋತ್ಸವದಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದ ಸೌಮ್ಯ ಸ್ವಭಾವದ 45 ವರ್ಷದ ಕಾವೇರಿಯನ್ನು ಪರೀಕ್ಷೆಗೊಳಪಡಿಸಲಾಗಿತ್ತು. ಅದು ಗರ್ಭ ಧರಿಸದೇ ಇರುವುದು ಎಲ್ಲಾ ಪರೀಕ್ಷೆಗಳಲ್ಲೂ ಖಚಿತವಾದ ಹಿನ್ನೆಲೆಯಲ್ಲಿ ಆರು ವರ್ಷದ ನಂತರ ಮತ್ತೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿದೆ.

ಸ್ಮಾರ್ಟ್ ಮೀಟರ್ ಹಗರಣ

ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆಗೆ ಆಗ್ರಹ

ಬೆಂಗಳೂರು, ಜು.24(ಕೆಎಂಶಿ)– ಹದಿನೈದು ಸಾವಿರ ಕೋಟಿ ರೂ.ಗಳ ಸ್ಮಾರ್ಟ್ ಮೀಟರ್ ಹಗರಣದ ಹಿನ್ನೆಲೆಯಲ್ಲಿ ಇಂಧನ ಸಚಿವ ಕೆ.ಜೆ.ಜಾರ್ಜ್ ರನ್ನು ಸಂಪುಟ ದಿಂದ ವಜಾ ಗೊಳಿಸಬೇಕು ಎಂದು ಮಾಜಿ ಡಿಸಿಎಂ ಡಾ. ಸಿ.ಎನ್. ಅಶ್ವತ್ಥ ನಾರಾಯಣ್, ಸಿಎಂ ಸಿದ್ದರಾಮಯ್ಯ ಅವರನ್ನು ಇಂದಿಲ್ಲಿ ಒತ್ತಾಯಿಸಿದ್ದಾರೆ.



ಅಶ್ವತ್ಥನಾರಾಯಣ್

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಮಾರ್ಟ್ ಮೀಟರ್ ಭ್ರಷ್ಟಾಚಾರ ಹಗರಣ ಸಿದ್ದರಾಮಯ್ಯ ಕಿರೀಟಕ್ಕೆ ಮತ್ತೊಂದು ಹೊಸ ಗರಿಯಾಗಿದೆ. ಇದಕ್ಕೆ ಮುಖ್ಯಮಂತ್ರಿ ಉತ್ತರ ಏನು ಎಂದು ಪ್ರಶ್ನಿಸಿದರು. ಜನರ ಹಿತ ಕಾಪಾಡಲು ಸದನದಲ್ಲಿ ಗಮನ ಸೆಳೆಯುವ ಪ್ರಶ್ನೆ ಮೂಲಕ ಪ್ರಸ್ತಾಪಿಸಿದಾಗ ಮುಖ್ಯಮಂತ್ರಿ ಸಮರ್ಪಕ ಉತ್ತರ ನೀಡಲಿಲ್ಲ. ಅರ್ಹತೆ ಇಲ್ಲದವರಿಗೆ ಗುತ್ತಿಗೆ, ಕಪ್ಪುಪಟ್ಟಿಯಲ್ಲಿರುವ ಕಂಪನಿ ಜೊತೆ ಒಡಂಬಡಿಕೆ, ನಿಯಮಾವಳಿ ಉಲ್ಲಂಘನೆ, ಗರಿಷ್ಠ ಹಾಗೂ ದುಬಾರಿ ದರ ವಿಧಿಸುತ್ತಿರುವುದು ಖಂಡನೀಯ.

ಏಪ್ರಿಲ್‌ನಲ್ಲೇ ಲೋಕಾಯುಕ್ತ ಪೊಲೀಸರಿಗೆ ದೂರು ಕೊಡಲಾಗಿದೆ, ನಂತರ ಮರು ಮನವಿ ನೀಡಿದ್ದೇವೆ. ಚುನಾಯಿತ ಪ್ರತಿನಿಧಿಗಳ ಕ್ರಿಮಿನಲ್ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ರಾಜ್ಯಪಾಲರಿಗೂ ಅರ್ಜಿ ಕೊಟ್ಟಿದ್ದು, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆಗೆ ಅನುಮತಿ ಕೇಳಿದ್ದೇವೆ.

ಖಾಸಗಿ ದೂರು ಸಲ್ಲಿಸಲು ಒಪ್ಪಿಗೆ ದೊರೆತಿದೆ. ನಿನ್ನೆ ಸಂಜೆ ಮೌಖಿಕ ಆದೇಶ ಸಿಕ್ಕಿದೆ. ಲೋಕಾಯುಕ್ತರಿಗೂ ತಿಳಿಸಲು ಸೂಚಿಸಿದ್ದಾರೆ. ಈಗಿನ ಗುತ್ತಿಗೆ ಕೈಬಿಡಬೇಕು, ಅಧಿಕಾರ ದುರ್ಬಳಕೆ ಆಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಸದನದಲ್ಲಿ ಹೋರಾಟ ಕುರಿತು ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚಿಸಲಾಗುವುದು ಎಂದರು.

ಲೋಕಸಭಾ ಚುನಾವಣೆ ವೇಳೆ ಕರ್ನಾಟಕದಲ್ಲಿ ಅಕ್ರಮ ಆಗಿದೆ ಎಂಬುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದು, ಆಗ ಆ ಪಕ್ಷವೇ ಆಡಳಿತದಲ್ಲಿತ್ತು. ಇದು ಆಧಾರರಹಿತ ಹೇಳಿಕೆಯಾಗಿದ್ದು, ಇದನ್ನು ಖಂಡಿಸುತ್ತೇವೆ. ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿ, ಚಿತ್ರದುರ್ಗ ಜಿಲ್ಲೆ ರೈತರು 3 ಬಾರಿ ಪ್ರತಿಭಟಿಸಿದ್ದಾರೆ. ಹಣ ಮಾಡುವ ಏಕೈಕ ಉದ್ದೇಶದಿಂದ ಸರ್ಕಾರ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮುಂದಾಗಿದೆ ಎಂದರು.

ಅ.6ರವರೆಗೆ ಅರಮನೆಯಲ್ಲಿ ನವರಾತ್ರಿ ಪೂಜೆ

ಸಂವತ್ಸರ ಪೂಜಾ ಕೈಂಕರ್ಯಗಳು ನೆರವೇರಲಿವೆ.

ಸೆ.22 ರಿಂದ ನವರಾತ್ರಿ ಪ್ರಾರಂಭವಾಗಲಿದ್ದು, ಅಂದು ಬೆಳಗ್ಗೆ 10.10 ರಿಂದ 10.40ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಜಯಲಕ್ಷ್ಮಿ ವ್ರತಾಚರಣೆಯೊಂದಿಗೆ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ಪೂಜೆಯೊಂದಿಗೆ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದೆ. ಅದೇ ದಿನ ಸಂಜೆ 7.39 ರಿಂದ 8.16ರೊಳಗಿನ ಶುಭ ಮೇಷ ಲಗ್ನದಲ್ಲಿ ಅರಮನೆಯಲ್ಲಿ ದೇವಿಗೆ ಪೂಜೆ ನೆರವೇರಲಿದೆ.

ಹಾಗೆಯೇ ಸೆ.23 ರಂದು ಬ್ರಹ್ಮಚಾರಿಣೀ, ಸೆ.24 ರಂದು ಚಂದ್ರಘಂಟಾ, ಸೆ.25 ರಂದು ಕೂಷ್ಮಾಂಡಾ, ಸೆ.26 ರಂದು ಸ್ಕಂದ ಮಾತಾ, ಸೆ.27 ರಂದು ಕಾತ್ಯಾಯಿನೀ, ಸೆ.28 ರಂದು ಸಿದ್ಧಿ ಧಾತ್ರಿ, ಸೆ.29 ರಂದು ಸರಸ್ವತಿ ಪೂಜೆ ಜೊತೆಗೆ ಕಾಳರಾತ್ರಿ ಮಹಿಷಾಸುರ ಸಂಹಾರ, ಸೆ.30 ರಂದು ದುರ್ಗಾಷ್ಟಮೀ, ಅ.1 ರಂದು ಆಯುಧ ಪೂಜೆ, ಗಜಾಶ್ವಾದಿ ಪೂಜೆ, ಹಯಗ್ರೀವ ಪೂಜೆ, ಅಮಲುದೇವತಾ ಪೂಜೆ, ಮಹಾಗೌರಿ ಪೂಜೆ ನಡೆಯಲಿದೆ. ಅ.2ರ ವಿಜಯದಶಮಿ ದಿನದಂದು ಶಮೀಪೂಜೆ, ಅಪರಾಜಿತಾ ದೇವಿ ಪೂಜೆ, ಮಧ್ಯಾಹ್ನ 1 ರಿಂದ 1.18ರೊಳಗೆ ಸಲ್ಲುವ ಧನುರ್ ಲಗ್ನ(ಲಾಭಕಾಲ)ದಲ್ಲಿ ಮುಖ್ಯಮಂತ್ರಿಗಳಿಂದ ನಂದಿ ಧ್ವಜ ಪೂಜೆ ಹಾಗೂ ಮಧ್ಯಾಹ್ನ 4.42 ರಿಂದ 5.06ರೊಳಗೆ ಸಲ್ಲುವ ಶುಭ ಕುಂಭ ಲಗ್ನದಲ್ಲಿ ಚಿನ್ನದ ಅಂಬಾರಿಯ ಮೇಲೆ ಅಲಂಕೃತ ಶಕ್ತಿ ದೇವಿ ತಾಯಿ ಚಾಮುಂಡೇಶ್ವರಿಗೆ ಮುಖ್ಯಮಂತ್ರಿ ಸೇರಿದಂತೆ ಇತರೆ ಗಣ್ಯರಿಂದ ಪುಷ್ಪಾರ್ಚನೆ ನೆರವೇರಲಿದೆ. ಅ.6 ರಂದು ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿಯ ರಥೋತ್ಸವ ಜರುಗಲಿದೆ.

> 6 ಮೈಸೂರು ಅರಮನೆ ಆವರಣಕ್ಕೆ ಪೂಜಾ ಕೈಂಕರ್ಯ, ಸಾಂಸ್ಕೃತಿಕ ಕಲಾತಂಡಗಳು, ವಾದ್ಯಗೋಷ್ಠಿಯೊಂದಿಗೆ ಗಜಪಡೆಯನ್ನು ಸ್ವಾಗತಿಸಲು ಪೂರ್ವ ಸಿದ್ಧತೆಗಳು ನಡೆಯುತ್ತಿವೆ. ದಸರಾ ಮಹೋತ್ಸವದ ಅಂಗವಾಗಿ ಅರಮನೆಯಲ್ಲಿ ನಡೆಯುವ ಎಲ್ಲಾ ಪೂಜಾ ಕೈಂಕರ್ಯಗಳ ವೇಳಾಪಟ್ಟಿ ಸಿದ್ಧವಾಗಿದ್ದು, ಶುಭ ಘಳಿಗೆಗಾಗಿ ಕಾಯುತ್ತಿದ್ದೇವೆ.
> -ಟಿ.ಎಸ್.ಸುಬ್ರಹ್ಮಣ್ಯ, ಉಪ ನಿರ್ದೇಶಕ, ಮೈಸೂರು ಅರಮನೆ ಮಂಡಳಿ

ನಾಳೆ ಮೈಸೂರಲ್ಲಿ 'ಜಾತಿಗಣತಿ ಹಿನ್ನಲೆ-ಮುನ್ನಲೆ' ವಿಚಾರಗೋಷ್ಠಿ

ಕೇಂದ್ರದ ಜನ-ಜಾತಿಗಣತಿಗೆ ಸಹಕರಿಸದೇ ರಾಜ್ಯ ಸರ್ಕಾರದಿಂದ ಗೊಂದಲ: ಆರ್.ರಘು ಕೌಟಿಲ್ಯ

ಮೈಸೂರು, ಜು.24(ಎಂಕೆ)- ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹೋಟೆಲ್ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಜು.26ರಂದು ಬೆಳಗ್ಗೆ 11 ಗಂಟೆಗೆ ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ ಆಶ್ರಯದಲ್ಲಿ 'ಜಾತಿ ಗಣತಿ: ಹಿನ್ನೆಲೆ-ಮುನ್ನೆಲೆ' ಕುರಿತ ವಿಚಾರ ಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ತಿಳಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಮಾತನಾಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ ಚಿತ್ರದಲ್ಲಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಚಾರಗೋಷ್ಠಿಯ ಮುಖ್ಯ ಭಾಷಣಕಾರರಾಗಿ ರಾಜ್ಯಸಭಾ ಸದಸ್ಯರೂ ಆದ ರಾಷ್ಟ್ರೀಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಡಾ.ಕೆ.ಲಕ್ಷ್ಮಣ್ ಆಗಮಿಸಲಿದ್ದು, ಮಾಜಿ ಸಚಿವರು, ವಿಧಾನಪರಿಷತ್ ಸದಸ್ಯರಾದ ಅಡಗೂರು ಹೆಚ್.ವಿಶ್ವನಾಥ್ ಉದ್ಘಾಟಿಸಲಿದ್ದಾರೆ. ಮೈಸೂರು-ಕೊಡಗು ಲೋಕಸಭಾ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಹೇಮಂತ್‌ಕುಮಾರ್ ಹಾಗೂ ನಿವೃತ್ತ ವಾಣಿಜ್ಯ ಅಧಿಕಾರಿ ಜಗನ್ನಾಥ್ ಸಾಗರ್ 'ಜಾತಿ ಗಣತಿ: ಹಿನ್ನೆಲೆ-ಮುನ್ನೆಲೆ' ವಿಷಯ ಮಂಡಿಸಲಿದ್ದಾರೆ ಎಂದರು.

ಸ್ವಾತಂತ್ರ್ಯ ನಂತರ ಇದೇ ಪ್ರಥಮ ಬಾರಿಗೆ ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿಗಣತಿಯನ್ನೂ ಸೇರ್ಪಡೆಗೊಳಿಸಿರುವುದು ಚಾರಿತ್ರಿಕ ನಿರ್ಧಾರ. ಹಿಂದುಳಿದ, ಅತೀ ಹಿಂದುಳಿದ ಹಾಗೂ ಅಲೆಮಾರಿ ಸಮುದಾಯಗಳಿಗೆ ಈ ಜಾತಿ ಸಮೀಕ್ಷೆಯಿಂದ ಸಾಮಾಜಿಕ ನ್ಯಾಯ ದೊರೆಯಲಿದೆ. ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಮೀಸಲಾತಿಗೆ ಈ ಸಮೀಕ್ಷೆ ನೆರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಜಾತಿಗಣತಿ ಹೆಸರಿನಲ್ಲಿ ಗೊಂದಲ ಸೃಷ್ಟಿಸಿ, ಸುಮಾರು 165 ಕೋಟಿ ರೂ. ವ್ಯಯಮಾಡಿ 'ಕಾಂತರಾಜು ಆಯೋಗ'ದ ವರದಿ ಸಿದ್ಧಪಡಿಸಿ, ಕಳೆದ 10 ವರ್ಷಗಳಿಂದಲೂ ಅದನ್ನು ಹಾಗೇ ಇರಿಸಿ, ಕೊನೆಗೆ ಕಾಂಗ್ರೆಸ್ ಹೈ ಕಮಾಂಡ್‌ನ ಆದೇಶವನ್ನು ಪಾಲಿಸಲು ಆ ವರದಿಯನ್ನು ಜಾರಿಗೊಳಿಸುವ ನಿರ್ಧಾರದಿಂದ ಹಿಂದೆ ಸರಿದು ಹಿಂದುಳಿದ ಸಮುದಾಯಗಳಿಗೆ ವಿಶ್ವಾಸ ದ್ರೋಹ ಬಗೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂವಿಧಾನದಲ್ಲಿ ರಾಜ್ಯ ಸರ್ಕಾರಕ್ಕೆ ಜಾತಿಗಣತಿ ನಡೆಸುವ ಅವಕಾಶ ಇಲ್ಲ. ಆದಾಗ್ಯೂ ಮತ್ತೆ ಮರು ಸಮೀಕ್ಷೆ ನಡೆಸಲು ಹೊರಟಿರುವುದು ಹಿಂದುಳಿದ ಸಮುದಾಯಗಳಿಗೆ ಮಾಡುತ್ತಿರುವ ವಂಚನೆಯಾಗಿದೆ. ಅಲ್ಲದೆ ಸರ್ಕಾರದ ಖಜಾನೆ ಹಣವೂ ಪೋಲಾಗಲಿದೆ. ಆದ್ದರಿಂದ ಜಾತಿ ಗಣತಿ ನಡೆಸಲು ಈಗಾಗಲೇ ಸಿದ್ಧತೆ ಮಾಡಿಕೊಂಡಿರುವ ಕೇಂದ್ರ ಸರ್ಕಾರದ ಸಮೀಕ್ಷಾ ಕಾರ್ಯಕ್ಕೆ ರಾಜ್ಯ ಸರ್ಕಾರ ಬದ್ಧತೆಯಿಂದ ಸಹಕಾರ ನೀಡುವುದನ್ನು ಬಿಟ್ಟು, ರಾಜ್ಯದಲ್ಲಿ ಗೊಂದಲ ಸೃಷ್ಟಿಸಲು ಹೊರಟಿದೆ ಎಂದು ದೂರಿದರು.

ಈ ಹಿನ್ನೆಲೆಯಲ್ಲಿ ಜು.26ರಂದು ನಡೆಯುವ ವಿಚಾರ ಸಂಕೀರ್ಣ ಅತ್ಯಂತ ಮಹತ್ವದ್ದಾಗಿದ್ದು, ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳ ಆಹ್ವಾನಿತರು, ವಿವಿಧ ಹಿಂದುಳಿದ ಸಮುದಾಯಗಳ ಪ್ರಜ್ಞಾವಂತ ಜನ ಪ್ರತಿನಿಧಿಗಳು, 500ಕ್ಕೂ ಹೆಚ್ಚು ಚಿಂತಕರು ಭಾಗವಹಿಸಲಿದ್ದಾರೆ. ಬಿಜೆಪಿ ಬೆಂಬಲದೊಂದಿಗೆ ರಾಜಕೀಯೇತರ ವಿಚಾರ ಗೋಷ್ಠಿ ಇದಾಗಿದ್ದು, ಜಾತಿಗಣತಿ ಕುರಿತ ಹಲವು ವಿಚಾರಗಳನ್ನು ಮಂಡಿಸಲಾಗುವುದು ಎಂದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಹಿರಿಯ ಮುಖಂಡರಾದ ಬಾಬಣ್ಣ, ಮೈ.ಪು.ರಾಜೇಶ್, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಮುಡಾ ಹಗರಣ ತನಿಖೆ ಇನ್ನೂ ಬಾಕಿ ಇದೆ: ಶ್ರೀವತ್ಸ

ಮೈಸೂರು,ಜು.24(ಎಂಕೆ)-ಮುಡಾ ಹಗರಣದಲ್ಲಿ ಇಡಿ (ಜಾರಿ ನಿರ್ದೇಶನಾಲಯ) ನೀಡಿದ್ದ ಸಮನ್ಸ್ ಬಗ್ಗೆ ಸುಪ್ರೀಂ ಕೋರ್ಟ್ ಗಂಭೀರವಾದ ಅಭಿಪ್ರಾಯ ವ್ಯಕ್ತಪಡಿಸಿದೆಯೇ ಹೊರತು 14 ಸೈಟ್ ವಾಪಸ್ ತಗೊ.. ಹಗರಣವೇ ನಡೆದಿಲ್ಲ ಅಂತ ಹೇಳಿಲ್ಲ. ಮೊದಲಿಗೆ ವಿಚಾರಣೆ ಇನ್ನೂ ಮುಗಿದಿಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ಪತ್ನಿ ಪಾರ್ವತಿ ಅವರಿಗೆ ಇಡಿ ನೀಡಿದ್ದ ಸಮನ್ಸ್ ರದ್ದುಪಡಿಸಿದ್ದ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿರುವ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಇಡಿ ನೀಡಿದ್ದ ಸಮನ್ಸ್ ಸರಿಯಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, 14 ಸೈಟ್‌ಗಳನ್ನು ಪಡೆದದ್ದು ಸರಿ, 50-50 ಅನುಪಾತದ ಕುರಿತು ತನಿಖೆ ಮಾಡಬೇಡಿ ಎಂದು ಹೇಳಿಲ್ಲವಲ್ಲ. ಬರಿ ಸಮನ್ಸ್ ರದ್ದು ಮಾಡಿದ್ದಕ್ಕೆ ನಾವು ಜಯಭೇರಿ ಬಾರಿಸಿದ್ದೇವೆ ಎಂದು ಸಂಭ್ರಮಿಸುತ್ತಿದ್ದಾರೆ ಎಂದು ಕುಟುಕಿದರು.

14 ಸೈಟ್ ವಾಪಸ್ ತಗೊ ಅಂತೇನಾದ್ರೂ ಕೋರ್ಟ್ ಹೇಳಿದ್ಯಾ...! ಮೂರು ತನಿಖಾ ಸಂಸ್ಥೆಗಳಲ್ಲಿ ಇನ್ನೂ ವಿಚಾರಣೆ ನಡೀತಾ ಇದೆ. ಆ ಮೂರು ಸಂಸ್ಥೆಯ ತನಿಖೆಯನ್ನು ನಿಲ್ಲಿಸುತ್ತಾರಾ. ನಿವೇಶನ ಹಂಚಿಕೆಯಲ್ಲಿ ಕೊಟ್ಟಿರುವ ದಾಖಲಾತಿಗಳೆಲ್ಲವೂ ಸುಳ್ಳು ಎಂದು ಪ್ರಶ್ನಿಸಿದ ಅವರು, ಕಾನೂನು ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಇಷ್ಟಕ್ಕೆ ಇವರೆಲ್ಲಾ ಸಂಭ್ರಮ ಪಟ್ಟು, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದೆ ಎನ್ನುವುದಾದರೆ, ಸಂಸದ ತೇಜಸ್ವಿ ಸೂರ್ಯ ವಿರುದ್ಧ ಪ್ರಕರಣ ದಾಖಲಿಸಿ, 25 ಲಕ್ಷ ರೂ.ದಂಡ ಕಟ್ಟುವಂತೆ ಮಾಡಿದ್ದಾರಲ್ಲಾ ಇದಕ್ಕೆ ನಾವೇನು ಹೇಳಬೇಕು. ಸಿಎಂ, ಗೃಹಮಂತ್ರಿಗಳ ರಾಜೀನಾಮೆ ಕೇಳಬೇಕಾ... ಎಂದು ಟೀಕಿಸಿದರು.

ರಾಜ್ಯ ಸರ್ಕಾರ ಜಾತಿಗಣತಿಯನ್ನು ರಾಜಕೀಯ ಅಸ್ತ್ರವನ್ನಾಗಿಸಿಕೊಂಡಿದೆ...!

ರಾಜ್ಯ ಸರ್ಕಾರ ಜಾತಿಗಣತಿಯನ್ನು ತನ್ನ ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡಿದೆ. ಕೇವಲ 15 ದಿನಗಳಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡುವುದಾಗಿ ರಾಜ್ಯದ ಜನರ ಕಿವಿಗೆ ಹೂ ಇಡುವ ಕೆಲಸವನ್ನು ಮಾಡುತ್ತಿದೆ. ರಾಜ್ಯದ ತೆರಿಗೆದಾರರ ಹಣವನ್ನು ಪೋಲ್ ಮಾಡಲಾಗುತ್ತಿದೆ. 1931 ರಲ್ಲಿ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಜಾತಿ ಗಣತಿಯಾಗಿತ್ತು. ಜಾತಿಗಣತಿ ಕಲ್ಪನೆ ಕಾಂಗ್ರೆಸಿಗರಿಗೆ ಯಾವತ್ತೂ ಬರಲಿಲ್ಲ. ಅದರಲ್ಲೂ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ಕೊಡಬೇಕು ಎಂಬ ಕಾಳಜಿ ನೆಹರು ಕಾಲದಿಂದಲೂ ಇಲ್ಲ. ಆದರೆ ಇದೇ ಪ್ರಥಮ ಬಾರಿಗೆ ಪ್ರಧಾನಿ ಮೋದಿಯವರು ಜಾತಿಗಣತಿ ಮೂಲಕ ಚಾರಿತ್ರಿಕ ಇತಿಹಾಸ ಬರೆಯಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಅವರ ಸರ್ಕಾರಕ್ಕೆ ಬದ್ಧತೆ ಇದ್ದರೆ, ಕರ್ನಾಟಕದಲ್ಲಿ ಕೇಂದ್ರ ಸರ್ಕಾರ ನಡೆಸುವ ಜನ-ಜಾತಿ ಗಣತಿಗೆ ಸಹಕಾರ ನೀಡಲಿ, ಬೆಂಬಲ ಕೊಡಲಿ.

-ಆರ್.ರಘು ಕೌಟಿಲ್ಯ
ರಾಜ್ಯಾಧ್ಯಕ್ಷ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಮ್ಮುಂಟೆ ಕಾಸ್ಕೊ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಎಕ್ಕ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮುಡು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಸೈಯಾರ (ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ವಕೀಲರ ಸಂಘದಿಂದ ಇಂದು ನಾಡಪ್ರಭು ಕೆಂಪೇಗೌಡರ ಜಯಂತಿ

ಮೈಸೂರು, ಜು.24- ಮೈಸೂರು ವಕೀಲರ ಸಂಘದ ವತಿಯಿಂದ ಶುಕ್ರವಾರ (ಜು.25) ಸಂಜೆ 6ಕ್ಕೆ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ 'ನಾಡಪ್ರಭು ಶ್ರೀ ಕೆಂಪೇಗೌಡರ 516ನೇ ಜಯಂತ್ಯೋತ್ಸವ'ವನ್ನು ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರು ಸಮಾರಂಭ ಉದ್ಘಾಟಿಸಲಿದ್ದು, ನ್ಯಾಯಮೂರ್ತಿ ಇ.ಎಸ್.ಇಂದ್ರೇಶ್, ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ, ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ, ಸಂಘದ ಅಧ್ಯಕ್ಷ ಎಸ್.ಲೋಕೇಶ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.

ತಂತ್ರಜ್ಞಾನಾಧರಿತ ಜಾತಿಗಣತಿಗೆ 15 ದಿನ ಸಾಕು!

ಬೆಂಗಳೂರು, ಜು.24(ಕೆಎಂಶಿ)- ತಂತ್ರಜ್ಞಾನ ಉಪಯೋಗಿಸಿಕೊಂಡು 15 ದಿನಗಳಲ್ಲಿ ಜಾತಿ ಜನ ಗಣತಿ ಸಮೀಕ್ಷೆ ಮಾಡಬಹುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಭಿಪ್ರಾಯಪಟ್ಟಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿಗಣತಿ ಸಮೀಕ್ಷೆ ವಿಚಾರದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಸಂಘರ್ಷ ಇಲ್ಲ, ರಾಜ್ಯಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿ ತಿಳಿಯಲು ಸಮೀಕ್ಷೆ ಮಾಡುತ್ತಿದ್ದೇವೆ ಎಂದರು. ರಾಜ್ಯ ಸರ್ಕಾರ ತನಗೇ ಬೇಕಾದ ಮಾನದಂಡಗಳಿಗಾಗಿ ಸಮೀಕ್ಷೆ ನಡೆಸುತ್ತದೆ, ಕೇಂದ್ರ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಮಾಡುವುದಿಲ್ಲ, ದೇಶದ ಜನಸಂಖ್ಯೆ ಅಂಕಿ ಅಂಶಗಳನ್ನಷ್ಟೇ ಗಣತಿ ಮಾಡುತ್ತದೆ ಎಂದರು.

ಧರ್ಮಸ್ಥಳ ಪ್ರದೇಶದಲ್ಲಿ ನಿಗೂಢ ಹತ್ಯೆ ಪ್ರಕರಣಗಳ ತನಿಖೆಗೆ ರಚಿಸಿರುವ ಎಸ್‌ಐಟಿ ತಂಡದಿಂದ ಐಪಿಎಸ್ ಅಧಿಕಾರಿ ಹೊರಗುಳಿಯುವ ವಿಚಾರದ ಕುರಿತು ಅಧಿಕೃತವಾಗಿ ನನಗೆ ಮಾಹಿತಿ ತಿಳಿಸಿಲ್ಲ.

ಆದರೆ, ತಂಡದಿಂದ ಹೊರಗುಳಿಯುವ ವಿಚಾರಕ್ಕೆ ಪತ್ರ ಬರೆದಿರುವುದು ಅನಧಿಕೃತವಾಗಿ ತಿಳಿದು ಬಂದಿದೆ, ವೈಯಕ್ತಿಕ ಕಾರಣಕ್ಕಾಗಿ ತಂಡದಿಂದ ಹೊರಗುಳಿಯುವ ಮಾಹಿತಿ ಕೊಟ್ಟಿದ್ದಾರೆ, ಒಂದು ವೇಳೆ ಆ ರೀತಿ ಇದ್ದರೆ, ಅವರನ್ನು ಬದಲಿಸಲಾಗುವುದು ಎಂದರು. ಆಂಧ್ರಪ್ರದೇಶದಲ್ಲಿ ಬೆಂಗಳೂರಿನ ಬಿಜೆಪಿ ಮುಖಂಡರ ಹತ್ಯೆ ಪ್ರಕರಣ ಕುರಿತು ಅಲ್ಲಿನ ಪೊಲೀಸರು ತನಿಖೆ ನಡೆಸುತ್ತಿದ್ದು, ಕರ್ನಾಟಕದಲ್ಲೂ ಆಗಮಿಸುವ ಸಾಧ್ಯತೆ ಇದೆ. ಆ ಸಂದರ್ಭದಲ್ಲಿ ರಾಜ್ಯ ಪೊಲೀಸರು ಸಹಕಾರ ನೀಡಲಿದ್ದಾರೆ ಎಂದರು.

ಕುರ್ಚಿ ಉಳಿಸಿಕೊಳ್ಳಲು ಸಿದ್ದರಾಮಯ್ಯ; ಗದ್ದುಗೆ ಪಡೆಯಲು ಡಿ.ಕೆ.ಶಿವಕುಮಾರ್ ದೆಹಲಿ ಯಾತ್ರೆ

● ಪ್ರತ್ಯೇಕವಾಗಿ ರಾಹುಲ್ ಗಾಂಧಿ ಭೇಟಿಗೆ ನಿರ್ಧಾರ ● ಉಳಿದಂತೆ ಕೆಲ ರಾಜಕೀಯ ತೀರ್ಮಾನಗಳಿಗೆ ಸುರ್ಜೇವಾಲ ನಿರ್ಣಯ

ಬೆಂಗಳೂರು, ಜು.24(ಕೆಎಂಶಿ)- ಮುಖ್ಯಮಂತ್ರಿಗಾದಿ ಉಳಿಸಿಕೊಳ್ಳಲು ಸಿದ್ದರಾಮಯ್ಯ, ಸಿಎಂ ಕುರ್ಚಿ ಪಡೆಯಲು ಡಿ.ಕೆ.ಶಿವಕುಮಾರ್ ದೆಹಲಿ ಯಾತ್ರೆ ಕೈಗೊಂಡಿದ್ದಾರೆ.

ಅಕ್ಟೋಬರ್-ನವೆಂಬರ್‌ನಲ್ಲಿ ಅಧಿಕಾರ ಹಸ್ತಾಂತರ ಕುರಿತು ರಾಜಕೀಯ ವಲಯದಲ್ಲಿ ನಡೆಯುತ್ತಿರುವ ಚರ್ಚೆ ಸಂದರ್ಭದಲ್ಲೇ ಇಬ್ಬರೂ ನಾಯಕರು ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಸಮಯಾವಕಾಶ ಕೋರಿದ್ದಾರೆ.

ಭೇಟಿ ಸಮಯ ನೀಡುವ ಬಗ್ಗೆ ಇದುವರೆಗೂ ಎಐಸಿಸಿಯಿಂದ ಯಾವುದೇ ಮಾಹಿತಿ ಇಲ್ಲ ಆದರೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಇಬ್ಬರು ನಾಯಕರಿಗೂ ದೆಹಲಿಗೆ ಬರುವಂತೆ ಸೂಚಿಸಿದ್ದರು. ಸುರ್ಜೇವಾಲ ಜೊತೆ ಈ ಮುಖಂಡರು, ಖಾಲಿ ಇರುವ 37 ನಿಗಮ-ಮಂಡಳಿ ಅಧ್ಯಕ್ಷ ಸ್ಥಾನ ಹಾಗೂ 1,200 ನಿರ್ದೇಶಕರ ನೇಮಕ ಕುರಿತಂತೆ ಚರ್ಚಿಸಿ, ಅನುಮೋದನೆ ಪಡೆಯಲಿದ್ದಾರೆ.

ಜೊತೆಗೆ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮಕರಣ ಪಟ್ಟಿಯೂ ಅಂತಿಮಗೊಳ್ಳಲಿದೆ ಈ ಎರಡೂ ವಿಷಯಗಳಲ್ಲಿ ಹೈಕಮಾಂಡ್ ಪರವಾಗಿ ಸುರ್ಜೇವಾಲ ಕೈಗೊಳ್ಳುವ ನಿರ್ಣಯವೇ ಅಂತಿಮ.

ಕೆಪಿಸಿಸಿ ಮಾಡಿದ ಶಿಫಾರಸುಗಳನ್ನು ಸುರ್ಜೇವಾಲ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಹಾಗೂ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಜೊತೆ ಸಮಾಲೋಚಿಸಿ ಅನುಮೋದನೆ ಪಡೆದುಕೊಂಡಿದ್ದಾರೆ. ಈ ಪಟ್ಟಿಯನ್ನು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ಸುರ್ಜೇವಾಲ ಹಸ್ತಾಂತರಿಸಲಿದ್ದಾರೆ. ಸುರ್ಜೇವಾಲ ಭೇಟಿ ನಂತರ ಈ ಇಬ್ಬರೂ ಮುಖಂಡರು ಪಕ್ಷ ಮತ್ತು ಸರ್ಕಾರಕ್ಕೆ ಸಂಬಂಧಿಸಿದ ಕೆಲವು ಪೂರ್ವ ನಿಯೋಜಿತ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಎರಡು ದಿನಗಳ ದೆಹಲಿ ಪ್ರವಾಸ ಎಂಬುದಾಗಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಕಚೇರಿ ಅಧಿಕೃತವಾಗಿ ತಿಳಿಸಿದೆಯಾದರೂ, ಇವರುಗಳು ಹಿಂತಿರುಗುವ ನಿರ್ದಿಷ್ಟ ದಿನ ನಿಗದಿಯಾಗಿಲ್ಲ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿ ಚರ್ಚಿಸಿದರು. ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಪಸ್ಥಿತರಿದ್ದರು.

ಪ್ರಸಕ್ತ ವಿದ್ಯಮಾನಗಳ ಬಗ್ಗೆ ಪಕ್ಷದ ಅಧಿನಾಯಕರ ಜೊತೆ ಚರ್ಚಿಸಲು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಪ್ರತ್ಯೇಕವಾಗಿ ಸಮಯ ಕೋರಿದ್ದಾರೆ. ಸಂಸತ್ ಅಧಿವೇಶನ ನಡೆಯುತ್ತಿರುವುದರಿಂದ ರಾಹುಲ್ ಗಾಂಧಿ ದೆಹಲಿಯಲ್ಲಿ ಲಭ್ಯರಿರುತ್ತಾರೆ. ಈ ಸಮಯ ಬಳಕೆ ಮಾಡಿಕೊಂಡು, ಅವರ ಭೇಟಿಗೆ ಪ್ರಯತ್ನಿಸಿದ್ದಾರೆ.

ಕಳೆದ ಬಾರಿ ರಾಹುಲ್ ಭೇಟಿಗಾಗಿ ಇಬ್ಬರು ಮುಖಂಡರು ದೆಹಲಿಗೆ ತೆರಳಿದ್ದರಾದರೂ, ಎರಡು-ಮೂರು ದಿನಗಳಾದರೂ ಸಾಧ್ಯವಾಗಿರಲಿಲ್ಲ. ಭೇಟಿಗೂ ಮುನ್ನ ಸಿಎಂ ಅವರು, ಪತ್ರಿಕಾಗೋಷ್ಠಿ ನಡೆಸಿ, ಮಾಧ್ಯಮಗಳಿಗೆ ಸಂದರ್ಶನ ನೀಡಿ, ರಾಜ್ಯ ನಾಯಕತ್ವ ಕುರಿತು ಬಹಿರಂಗ ಹೇಳಿಕೆ ನೀಡಿದ್ದೇ, ಭೇಟಿ ಸಾಧ್ಯವಾಗದಿರಲು ಕಾರಣ ಎನ್ನಲಾಗಿದೆ.

ಸಾರ್ವಜನಿಕರಿಗೆ ಸಮರ್ಪಕ ಸೇವೆ ಕಲ್ಪಿಸದೇ ಎಂಡಿಎ ಅತಂತ್ರ

ಮೈಸೂರು, ಜು.24- ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ) ರಚನೆಯಾಗಿ ಎರಡು ತಿಂಗಳು ಕಳೆದರೂ ಸಾರ್ವಜನಿಕರಿಗೆ ಸೇವೆ ನೀಡಲಾಗದ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಕಳವಳ ವ್ಯಕ್ತಪಡಿಸಿದ್ದಾರೆ.



ಸರ್ಕಾರ ಎಂಡಿಎ ರಚನೆ ಮಾಡಿ ನೂತನ ಪ್ರಭಾರ ಆಯುಕ್ತರನ್ನು ಮಾತ್ರ ನೇಮಕ ಮಾಡಿ, ಅವರಿಗೆ ಭೂಸ್ವಾಧೀನ ಅಧಿಕಾರಿಯಾಗಿ ಹೆಚ್ಚುವರಿ ಅಧಿಕಾರ ನೀಡಿದೆ. ಆದರೆ ಅವರು ಪ್ರಭಾರ ಆಗಿರುವುದರಿಂದ ಆಡಳಿತಾತ್ಮಕ ಕಾರ್ಯಗಳಿಗೆ ಹಿಂಜರಿಯುತ್ತಿದ್ದಾರೆ. ಎಂಡಿಎಗೆ ಅಧ್ಯಕ್ಷರನ್ನಾಗಲಿ, ಸದಸ್ಯರನ್ನಾಗಲಿ, ತಜ್ಞರನ್ನಾಗಲಿ ನೇಮಿಸುವಲ್ಲಿ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಸದ್ಯಕ್ಕೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿದ್ದರೂ ಕಾರ್ಯಭಾರದಿಂದಾಗಿ ವಾರಕ್ಕೊಮ್ಮೆಯಾದರೂ ಎಂಡಿಎ ಕಚೇರಿಯಲ್ಲಿ ಜನರ ಅಹವಾಲು ಕೇಳಲಾಗುತ್ತಿಲ್ಲ. ನಕ್ಷೆ ಮಂಜೂರು ಬಿಟ್ಟರೆ ಇನ್ಯಾವುದೇ ಸಾರ್ವಜನಿಕರ ಕೆಲಸ ಕಾರ್ಯಗಳಾಗದೆ ಕಚೇರಿಗೆ ಬಂದವರು ನಿರಾಶರಾಗಿ ವಾಪಸ್ಸಾಗುವಂತಾಗಿದೆ.

ಸರ್ಕಾರ ಮುಡಾ ಹಗರಣದ ತನಿಖೆಗಾಗಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗ ರಚನೆ ಮಾಡಿದೆ. ಆದರೆ ಆಯೋಗ ವರದಿ ನೀಡುವ ಮುನ್ನವೇ ಮುಡಾ ಹೆಸರು ಬದಲಿಸಿ ಎಂಡಿಎ ಅಸ್ತಿತ್ವಕ್ಕೆ ತರಲಾಯಿತು. ಹಗರಣ ಮುಚ್ಚಿಹಾಕಲೆಂದೇ ಮುಡಾ ಕಾಣೆಯಾಯಿತು. ಇಲ್ಲಿನ ಅಧಿಕಾರಿಗಳ ನಡವಳಿಕೆಯೂ ಬದಲಾಗಿಲ್ಲ. ಈ ಹಿಂದಿನಂತೆ ಹಲವು ಬಡಾವಣೆಗಳಿಗೆ ಬೇರೆಯವರ ನಿವೇಶನದಲ್ಲಿ ರಸ್ತೆ ನಿರ್ಮಿಸಿ ಕೊಟ್ಟು ಅನ್ಯಾಯವೆಸಗುವ ಪ್ರವೃತ್ತಿ ಮುಂದುವರೆದಿದೆ ಎಂದು ಪ್ರಜ್ಞಾವಂತರು ಚರ್ಚಿಸುತ್ತಿದ್ದಾರೆ.

ಪ್ರಾಧಿಕಾರದ ಹಾಗೂ ಖಾಸಗಿ ಬಡಾವಣೆ ನಿವೇಶನದಾರರು ಸ್ವಾಧೀನ ಪತ್ರ, ಖಾತೆ ಮುಂತಾದ ಕೆಲಸಕ್ಕಾಗಿ ನಿತ್ಯ ಕಚೇರಿಗೆ ಅಲೆಯುತ್ತಿದ್ದಾರೆ ಎಂದಾದರೆ ಎಂಡಿಎ ರೂಪಿಸಿದ ಉದ್ದೇಶವಾದರೂ ಏನು?. ಅನಗತ್ಯವಾಗಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಜನರ ತೆರಿಗೆ ಹಣ ವ್ಯಯ ಮಾಡುತ್ತಿರುವುದು ಸರಿಯೇ? ಕೂಡಲೇ ಮುಖ್ಯಮಂತ್ರಿಗಳು ಎಂಡಿಎ ರಚನೆಯನ್ನು ಪರಿಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಸನ್ನದ್ಧಗೊಳಿಸಬೇಕೇ ಅಥವಾ ಪ್ರಾಧಿಕಾರವನ್ನೇ ಮುಚ್ಚಬೇಕೇ ಎಂಬುದರ ಬಗ್ಗೆ ತೀರ್ಮಾನಿಸಲಿ ಎಂದು ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಪಟ್ಟಿ ಬಿಡುಗಡೆ ಮಾಡಲಿ: ಮೈಸೂರಿನಲ್ಲಿ ಸಾವಿರಾರು ನಿವೇಶನಗಳು ಖಾಲಿ ಬಿದ್ದಿವೆ. ಈ ನಿವೇಶನ ಮಾಲೀಕರು ಪ್ರಾಧಿಕಾರಕ್ಕಾಗಲೀ ಅಥವಾ ಮಹಾನಗರ ಪಾಲಿಕೆಗಾಗಲೀ ಹೋದರೆ ಇದು ತಕರಾರು ನಿವೇಶನ ಎಂದು ಹಾರಿಕೆ ಉತ್ತರ ನೀಡಿ, ವಾಪಸ್ ಕಳುಹಿಸುತ್ತಿದ್ದಾರೆ. ಆದ್ದರಿಂದ ಪ್ರಾಧಿಕಾರ 50:50 ಅನುಪಾತದಲ್ಲಿ ಮಂಜೂರು ಮಾಡಿರುವ ಒಟ್ಟು ನಿವೇಶನಗಳೆಷ್ಟು, ಅದರಲ್ಲಿ ವಿವಾದಿತ ನಿವೇಶನಗಳೆಷ್ಟು ಎಂಬ ಪಟ್ಟಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ವಿವಾದಿತ ನಿವೇಶನಗಳ ಹೊರತಾಗಿ, ಉಳಿದ ನಿವೇಶನಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ಯಾವುದೇ ಅಡ್ಡಿಯಾಗದಂತೆ ಜಿಲ್ಲಾಧಿಕಾರಿಗಳು ಆದೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಹಿರಿಯ ರಂಗಕರ್ಮಿ ಅಡ್ಡಂಡ ಕಾರ್ಯಪ್ಪರಿಂದ ಮತ್ತೊಂದು ಸಾಹಸ
'ನಿಜಮಹಾತ್ಮ ಬಾಬಾಸಾಹೇಬ' ರಂಗರೂಪ ಅಂತಿಮ

● ಪೂರ್ವಭಾವಿಯಾಗಿ 'ನಾಟಕ ಓದು' ಕಾರ್ಯಕ್ರಮ ● ಎಲ್ಲರಲ್ಲೂ ನಾಟಕದ ಹೊಸತನದ ನಿರೀಕ್ಷೆ

ಮೈಸೂರು, ಜು.24(ಎಸ್‌ಬಿಡಿ)- ಮೈಸೂರು ರಂಗಾಯಣದ ಮಾಜಿ ನಿರ್ದೇಶಕ, ಹಿರಿಯ ರಂಗಕರ್ಮಿ ಅಡ್ಡಂಡ ಕಾರ್ಯಪ್ಪ ರಚನೆಯ 'ನಿಜಮಹಾತ್ಮ ಬಾಬಾಸಾಹೇಬ' ನಾಟಕದ ಪ್ರದರ್ಶನ ಹಾಗೂ ಪುಸ್ತಕ ಮುದ್ರಣದ ಪೂರ್ವಭಾವಿಯಾಗಿ 'ನಾಟಕ ಓದು' ಕಾರ್ಯಕ್ರಮ ಗುರುವಾರ ನಡೆಯಿತು.

ರಂಗಭೂಮಿ ಟ್ರಸ್ಟ್ ಕೊಡಗು ವತಿಯಿಂದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ 'ನಾಟಕ ಓದು' ಕಾರ್ಯಕ್ರಮದಲ್ಲಿ ರಚನೆಕಾರ ಅಡ್ಡಂಡ ಕಾರ್ಯಪ್ಪ, ಏಳು ನೋಟ(ದೃಶ್ಯ)ಗಳನ್ನು ಒಳಗೊಂಡ ಸುಮಾರು 55 ಪುಟಗಳ 'ನಿಜಮಹಾತ್ಮ ಬಾಬಾಸಾಹೇಬ' ನಾಟಕವನ್ನು ಕಣ್ಣಿಗೆ ಕಟ್ಟುವಂತೆ ಸುಮಾರು 2 ಗಂಟೆಗಳ ಕಾಲ ಓದಿದರು. ನೆರೆದಿದ್ದವರು ತದೇಕಚಿತ್ತರಾಗಿ ಬಾಬಾ ಸಾಹೇಬರ ವಿಚಾರಗಳನ್ನು ಮನದುಂಬಿಕೊಂಡರು.



ರಂಗಕರ್ಮಿ ಅಡ್ಡಂಡ ಕಾರ್ಯಪ್ಪ ಅವರು 'ನಿಜಮಹಾತ್ಮ ಬಾಬಾಸಾಹೇಬ' ನಾಟಕವನ್ನು ಓದಿದರು.

ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜೀವನದ ಕೊನೆಯ ದಿನ ಹಾಗೂ ಅವರು ಕಾಲವಾದ ಸಂದರ್ಭವನ್ನು ತಿಳಿಸುವ ಮಹಾಪರಿನಿರ್ವಾಣ ದೃಶ್ಯದ ಮೂಲಕ ಆರಂಭಗೊಂಡು ನಾಟಕದಲ್ಲಿರುವ ಏಳು ದೃಶ್ಯಗಳಲ್ಲಿ ಹಲವು ಹೊಸ ವಿಚಾರಗಳನ್ನು ಅಡಕಗೊಳಿಸಿದಂತಿದೆ. ವೈಚಾರಿಕ ಚರ್ಚೆ, ಭಾರತ ವಿಭಜನೆ ಬಗ್ಗೆ ಅಂಬೇಡ್ಕರ್ ಅವರ ಅಭಿಪ್ರಾಯ, ದೇಶದ ಸಾಮಾಜಿಕ ವ್ಯವಸ್ಥೆ ಬಗ್ಗೆ ಅವರಲ್ಲಿದ್ದ ಖಚಿತ ನಿಲುವು ಸೇರಿದಂತೆ ಅನೇಕ ಅಂಶಗಳನ್ನು ಪರಿಣಾಮಕಾರಿಯಾಗಿ ರಂಗರೂಪಕ್ಕಿಳಿಸಿದ್ದಾರೆ. ಈ ನಾಟಕವು ಹೊಸ ಹೊಳವು ನೀಡುವ ನಿರೀಕ್ಷೆ ಇದೆ ಎಂದು ನಾಟಕ ಆಲಿಸಿದ ಹಲವರು ಅಭಿಪ್ರಾಯಿಸಿದರು.

ಪ್ರಾಮಾಣಿಕ ಪ್ರಯತ್ನ: ನಾಟಕ ಓದುವ ಮುನ್ನ ಮಾತನಾಡಿದ ಅಡ್ಡಂಡ ಕಾರ್ಯಪ್ಪ ಯಾವುದೇ ನಾಟಕ ಬರೆದ ನಂತರ ಹಿರಿಯರು, ರಂಗಾಸಕ್ತರು ಹಾಗೂ ನಮ್ಮ ಸಿದ್ಧಾಂತ ಒಪ್ಪಿಕೊಂಡವರ ಮುಂದೆ ಓದಿ, ಸಲಹೆ ಮೂಲಕ ಆಶೀರ್ವಾದ ಪಡೆಯುವುದು ನನ್ನ ಸಂಪ್ರದಾಯ. ಅದರಂತೆ 'ನಿಜಮಹಾತ್ಮ ಬಾಬಾ ಸಾಹೇಬ' ನಾಟಕವನ್ನು ನಿಮ್ಮ ಮುಂದಿಡುತ್ತಿದ್ದೇನೆ. ಬಾಬಾ ಸಾಹೇಬರು ಮಾಡಿರುವ ಭಾಷಣ, ಅವರು ಬರೆದಿರುವ ಪುಸ್ತಕಗಳನ್ನಷ್ಟೇ ಇಲ್ಲಿ ಕೇಂದ್ರೀಕರಿಸಿದ್ದೇನೆ ಬಾಬಾ ಸಾಹೇಬರ ಬಗ್ಗೆ ಇತರರು ಬರೆಯುವಾಗ ಉತ್ಪ್ರೇಕ್ಷೆ ಅಥವಾ ತಪ್ಪು ಮಾಹಿತಿ ನೀಡಿರಬಹುದು ಎಂಬ ಕಾರಣಕ್ಕೆ ಹೀಗೆ ಮಾಡಿದ್ದೇನೆ ಎಂದು ತಿಳಿಸಿದರು.

ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ಲಾಭಕ್ಕಾಗಿ ವಸ್ತುವಿನಂತೆ ಕೆಲವರು ಬಳಸಿಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳು ಅವರಿಂದ ಲಾಭ ಪಡೆಯುತ್ತಿವೆ. ಹಾಗಾಗಿ ಅಂಬೇಡ್ಕರ್ ಅವರು ಹಿಂದೂ ಧರ್ಮ, ಇಸ್ಲಾಂ ಧರ್ಮ, ದಲಿತರ ಬಗ್ಗೆ ಮುಲಾಜಿಲ್ಲದೆ ಮಾತನಾಡಿರುವುದೂ ನಾಟಕದಲ್ಲಿದೆ. ಮರಾಠಿಯಿಂದ ಕನ್ನಡಕ್ಕೆ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಮೂಲಕ ಭಾಷಾಂತರಗೊಂಡು ಸರ್ಕಾರದಿಂದಲೇ ಮುದ್ರಿಸಿರುವ 22 ಸಂಪುಟಗಳನ್ನು ಅಧ್ಯಯನ ಮಾಡಿದ್ದೇನೆ. ಇದರಲ್ಲಿ ಅಂಬೇಡ್ಕರ್ ಅವರ ಭಾಷಣ, ಸಂಸತ್‌ನಲ್ಲಿ ಮಂಡಿಸಿದ ವಿಚಾರಗಳು ಸೇರಿದಂತೆ ಹಲವು ಸಂಗತಿಗಳಿವೆ. ಅಂಬೇಡ್ಕರ್ ಕೊನೆ ದಿನಗಳಲ್ಲೂ ಜೊತೆಗಿದ್ದ ನಾನಕ್‌ಚಂದ್ ರತ್ತು ಬರೆದಿರುವ 'ಬಾಬಾರ ಕೊನೆಯ ದಿನಗಳು' ಬಹಳ ಸಹಕಾರಿಯಾಗಿದೆ. ಆರ್‌ಎಸ್‌ಎಸ್‌ನ ಹಿರಿಯರಾಗಿದ್ದ ಭಂಡಾರಿ ಅವರ ಪುಸ್ತಕ ಸೇರಿ 48 ಪುಸ್ತಕಗಳನ್ನು ಸಂಗ್ರಹಿಸಿ 'ನಿಜ ಮಹಾತ್ಮ ಬಾಬಾಸಾಹೇಬ' ನಾಟಕವನ್ನು ಅಪಾರ ಗೌರವದಿಂದ ಪ್ರಾಮಾಣಿಕವಾಗಿ ಮಾಡಿದ್ದೇವೆ ಎಂದು ಹೇಳಿದರು.

'ನಾಟಕ ಓದು' ಕಾರ್ಯಕ್ರಮದಲ್ಲಿ ಆದಿತ್ಯ ಆಸ್ಪತ್ರೆಯ ಡಾ.ಚಂದ್ರಶೇಖರ್, ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಡಾ.ಸಿ.ವಿ.ಗೋಪಿನಾಥ್, ಆರ್‌ಎಸ್‌ಎಸ್‌ನ ಅನಂತಕೃಷ್ಣ, ರಂಗ ಕಲಾವಿದ ಜಗದೀಶ್ ಮನೋವಾರ್ತೆ, ಪಾಂಡುರಂಗ ಸತೀಶ್, ರವಿಶಾಸ್ತ್ರಿ ತಮ್ಮಯ್ಯ, ಗಿರೀಶ್, ರಾಜೇಶ್, ಹೊಮ್ಮ ಮಂಜುನಾಥ್, ಅಮೀನಾ, ಶಶಿಕಲಾ, ಸ್ಮಿತಾ, ನಳಿನಾ, ಮಹದೇವಯ್ಯ ಭಾಸ್ಕರ, ಅನಿತಾ ಕಾರ್ಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿಗೆ ಬಂದ ಮೇಲೆ 'ಟಿಪ್ಪು ನಿಜಕನಸುಗಳು', 'ಕರಿನೀರವೀರ', 'ಸತ್ಯವನ್ನೇ ಹೇಳುತ್ತೇನೆ' ನಂತರ ನಾಲ್ಕನೇ ನಾಟಕವಾಗಿ 'ನಿಜಮಹಾತ್ಮ ಬಾಬಾ ಸಾಹೇಬ' ರಚಿಸಿದ್ದೇನೆ. ಅಯೋಧ್ಯೆ ಪ್ರಕಾಶನ ನಾಟಕದ ಪುಸ್ತಕವನ್ನು ಪ್ರಕಟಿಸುತ್ತಿದೆ. ನಾಟಕಕ್ಕೆ ಕಲಾವಿದರ ಆಯ್ಕೆ ಪೂರ್ಣಗೊಂಡಿದ್ದು, ಆಗಸ್ಟ್ 1ರಿಂದ ತಾಲೀಮು ಆರಂಭಿಸಲಾಗುವುದು. ಸೆಪ್ಟೆಂಬರ್ ಕೊನೆಯ ವಾರ ಅಥವಾ ಅಕ್ಟೋಬರ್ ಮೊದಲ ವಾರ ನಾಟಕದ ಚೊಚ್ಚಲ ಪ್ರದರ್ಶನ ನಿಗದಿಗೊಳಿಸಲಾಗುವುದು. ಅದಕ್ಕೂ ಮುನ್ನ ನಾಟಕದ ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣ ಏರ್ಪಡಿಸಲಾಗುವುದು. ಡಾ.ಅಂಬೇಡ್ಕರ್ ಅವರ ಕುರಿತಾದ ಹಲವು ಮುಚ್ಚಿಟ್ಟ ಸತ್ಯಗಳನ್ನು ರಂಗದಲ್ಲಿ ನೋಡಿ ಎಲ್ಲರೂ ಮೆಚ್ಚುತ್ತಾರೆ ಎಂಬ ವಿಶ್ವಾಸವಿದೆ.

-ಅಡ್ಡಂಡ ಕಾರ್ಯಪ್ಪ ರಂಗಕರ್ಮಿ

IMMEDIATE REQUIREMENT

Hiring for A Reputed US Based Outsourcing Company (Non-Voice)

Position – **PROCESS ASSOCIATE**

Qualification

BSc, BCA, BCom, BBA, BBM, MCA, MBA, MSc, MCom, BE candidates are also considered

KEY ATTRIBUTES:

- Proficiency in English Communication
- Must be a Computer Literate
- Good in Analytical skills (Non-Technical)
- Both Male & Females with Good Typing skills

Kindly attach your recent Passport size PHOTO to your Resume. Interested Candidates can APPLY IMMEDIATELY

Walk-In Interview from 24th Jul - 16th Aug 2025
Walk-In Time: 10:00AM to 5:00PM

For any queries, Please contact 8147424748

SOURCE HUB
One click convenience to outsourcing

Venue: Source Hub India Pvt Ltd, #11, Second Floor, E & F Block, Above Royal Enfield Showroom Udayaravi Road, Kuvempunagar, Mysore - 570023.

ಬೇಕಾಗಿದ್ದಾರೆ

ಹಳದಿ ಬೋರ್ಡ್ ಚಾಲಕರು – 03 ಸಂಖ್ಯೆ (ಅನುಭವಿಗಳು ಮಾತ್ರ)

ವಾಕ್ ಇನ್ ಸಂದರ್ಶನ

ದಿ ಕೋರಂ ಹೋಟೆಲ್

#2257/1, ವಿನೋಭ ರಸ್ತೆ, ಮೈಸೂರು–570001

96202 74622
99808 46555

ಡೆಲಿವರಿ ಬಾಯ್‌ಗಳು ಬೇಕಾಗಿದ್ದಾರೆ.

ಸ್ವಂತ ಆಟೋವುಳ್ಳ ಮೈಸೂರಿನ ಎಲ್ಲಾ ಏರಿಯಗಳು ಗೊತ್ತಿರುವಂತ ಡೆಲಿವರಿ ಬಾಯ್ಸ್‌ಗಳು ಬೇಕಾಗಿದ್ದಾರೆ.

ಅಟಲ್ ಗ್ಯಾಸ್ ಕಂಪನಿ #27/2. N1/3 ಗವರ್ನಮೆಂಟ್ ಗೆಸ್ಟ್‌ಹೌಸ್ ರೋಡ್. ನಜರ್‌ಬಾದ್. ಮೈಸೂರು

Mob: 9741595600, 0821-2520878, 0821-2521147

PREMIUM VILLA PLOTS
HUNSUR TOWN

RERA, HUDA, DC, Approved
20x30, 20x40, 30x40, 30x50
Site Price Rs. 850/- per sq.ft.,
Bank Loan 80%
Just 4.5 kms from bus stand
1.5 kms from prpsd Railway Station
Call : 99002 01234

MONTESSORI / KINDERGARTEN NURSERY TEACHERS TRAINING

SIX MONTHS COURSE, REGUALAR/CORRESPONDENCE

SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD

100 % JOB ASSURED @ ANY PUBLIC OR PRIVATE SCHOOLS

JNANA GANGOTRI CONVENT
Rajendra Nagara Mysore-570 007. CALL: 9243580672



ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,
ಎನ್. ಮಾಧವರಾವ್ ವೃತ್ತ, ಮೈಸೂರು

100 ನೇ ವಾರ್ಷಿಕ ಮಹಾಸಭೆಯ ಅಂಗವಾಗಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2024–2025 ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ಅರ್ಹ ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಅರ್ಜಿ ಪಡೆದು ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿ, 2 ಭಾವಚಿತ್ರ ಮತ್ತು ಸದಸ್ಯರ ಪಾಸ್ ಪುಸ್ತಕದ ನಕಲು ಪ್ರತಿಯೊಂದಿಗೆ ಆಗಸ್ಟ್ 10ರೊಳಗೆ ಸಲ್ಲಿಸಲು ಕೋರಲಾಗಿದೆ.

ಸಂಪರ್ಕಿಸಿ: 9880371421, 9844775166, 0821–2520894 / 4259665

1. ಚಿನ್ನಾಭರಣಗಳ ಮೇಲೆ ಶೇ 9 ರಂತೆ ಗ್ರಾಂಗೆ ರೂ. 6300 /– ಸಾಲ ನೀಡಲಾಗುತ್ತಿದೆ.
2. ಮನೆ ಹಾಗೂ ನಿವೇಶನಗಳ ಮೇಲೆ ಶೇ 12.5 ರಂತೆ ಗರಿಷ್ಠ 40 ಲಕ್ಷ ರೂ. ಸಾಲ ನೀಡಲಾಗುತ್ತಿದೆ. (ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1 % ರಿಯಾಯಿತಿ ನೀಡಲಾಗುವುದು)
3. ಠೇವಣಿಗಳ ಮೇಲೆ ಗರಿಷ್ಠ ಶೇ 8.0 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.5ರಂತೆ ಬಡ್ಡಿ ನೀಡಲಾಗುತ್ತಿದೆ.

ಡಿ.ಬಸವರಾಜು (ಬಸಪ್ಪ)	**ಶ್ರೀಮತಿ ಹೆಚ್.ಎನ್. ಸರ್ವಮಂಗಳ**	**ಡಿ. ಅನಂತವೀರಪ್ಪ**
ಅಧ್ಯಕ್ಷರು	ಉಪಾಧ್ಯಕ್ಷರು	ಪ್ರ. ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂ.ಸಿದ್ದಪ್ಪ, ಜಿ.ಎಂ.ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಪ್ರತಿಧ್ವನಿ ಪ್ರಸಾದ್, ಗಣೇಶ ಮೂರ್ತಿ ಟಿ.ವಿ., ಶ್ರೀಮತಿ ನಾಗಜ್ಯೋತಿ, ನವೀನ್‌ಕುಮಾರ್ ಎಂ.ಎನ್., ಎಂ.ಎಸ್.ಅರುಣಸಿದ್ದಪ್ಪ, ಹೆಚ್.ವಾಸು, ಶಿವಪ್ರಕಾಶ್ ಎಂ.

